purchasing and selling shares etc. There are quite a good number. I can give a list. But that would not be fair to give Madam-Speaker, before I conclude I would again like to tell the House and also the Chief Minister, that all is not well with these industries. Its working has to be carefully looked into. I know there are very competent officers in the department. I know it requires a team spirit which is very necessary. The quantum of work or responsibilities may perhaps be much more than what they could shoulder. They may be requiring other assistance. In fact when we were examining the workings of the K.S.I.I.D.C., the Chairman of that Corporation was telling us that all these irregularities or mistakes arose on account of not having competent staff. Why do you create Corporations? We know how difficult it is to make appointments for the Government as Government employees. We know how it is easy for Corporations to appoint. We are increasingly converting departmental undertaings intoJoint Stock Companies as to facilitate them to rise up to the occasion. In industry and trade the Government should have an effective hand in the changed atmosphere. We cannot allow all these things in the private sector. When we start more and more industries, and when we take up responsibility of trade and commerce, it is also our responsibility to see that competent persons are appointed to get the desired result. I am thankful to the Honb!e. Speaker for showing me the indulgence to speak at length in a morning session. I hope the Chief Minister will take all the remarks in the same spirit with which I have made

ಅಧ್ಯಕ್ಷರು.—ಆ ಕಡೆ 6 ಈ ಕಡೆ 5 ಹೆಸರುಗಳು ಬಂದಿವೆ. ಮಾತನಾಡುವವರು ವೇಳೆಯನ್ನು ನೋಡಿಕೊಂಡು ಮಾತನಾಡಬೇಕು; ಹಗರೆಲ್ಲ ಗಂಟೆ ಹೊಡೆಯುವುದಕ್ಕೆ ಅವಕಾಶ ಕೊಡಬಾರದು.

ಶ್ರೀ ಎಚ್. ಡಿ. ದೇವೇಗೌಡ.—ಬಹುಶಃ ಮುಖ್ಯ ಮಂತ್ರಿಗಳು ಒಪ್ಪಿಕೊಳ್ಳುತ್ತಾರೆಂದು ತಿಳಿದುಕೊಂಡಿದ್ದೇನೆ. ಅವರ ಕೈಗೆ ಈ ಇಲಾಖೆ ಕೇವಲ 15-20 ದಿವಸಗಳ ಹಿಂದೆ ಬಂದಿದೆ. ಆದ್ದರಿಂದ ಈ ಇಲಾಖೆಯಲ್ಲಿ ನಡೆದಿರತಕ್ಕ ಹಲವಾರು ವಿಷಯಗಳನ್ನು ಸದನದ ಮುಖಾಂತರ ಅವರ ಗಮನಕ್ಕೆ ತಂದರೆ, ಅವರಿಗೆ ಸರಿಪಡಿಸುವುದಕ್ಕೆ ಅನುಕೂಲವಾಗುತ್ತದೆ. ಇವತ್ತು ಒಂದು ಗಂಟೆಯೊಳಗೆ ಚರ್ಚೆಯನ್ನು ಮುಗಿಸುವುದಕ್ಕೆ ಕಷ್ಟವಾಗುತ್ತದೆ. ಆದಕಾರಣ ಜನರಲ್ ಅಡಿನಸ್ಟ್ರೇಷನ್ ಬಗ್ಗೆ ಅದನ್ನು ಸೋಮವಾರ ಚರ್ಚೆಗೆ ತೆಗೆದುಕೊಳ್ಳೋಣ.

ಶ್ರೀ ಡಿ. ದೇವರಾಜ ಅರಸ್.—ಇವರ ಮೇಲೆ ಒಂದು ದಿವಸ ಅಲ್ಲದಿದ್ದರೆ ಎರಡು ದಿವಸ ಚರ್ಚೆ ನಡೆಸಿ, ಅದಕ್ಕೆ ನನ್ನದೇನು ಅಭ್ಯಂತರವಿಲ್ಲ.

The only thing is that we have to finish the demands on the day which we have decided. ಅಷ್ಟು ಮಾತ್ರ ತಮ್ಮಲ್ಲಿ ಕೇಳಿಕೊಳ್ಳುವುದು.

ಅಧ್ಯಕ್ಷರು.—ಸೋಮವಾರ ಬಹಳ ಹೆವಿ ಡಿಮ್ಯಾಂಡ್ ಇದೆ ಅದನ್ನು ಒಂದು ದಿವಸದಲ್ಲಿ ಮುಗಿಸುವುದಕ್ಕೆ ಸಾಧ್ಯವೇ? ಮೊನ್ನೆಯ ದಿವಸ ಎಜುಕೇಷನ್ ತೆಗೆದುಕೊಳ್ಳಿ. ಇವತ್ತು ಇಂಡಸ್ಟ್ರೀಸ್ ಹಾಕಿಕೊಳ್ಳಿ ಎಂಬುದು ಇವರ ಉದ್ದೇಶವಾಗಿತ್ತು. ನಮಗೆ ಸ್ವಲ್ಪ ಸಹಾಯ ಮಾಡಬೇಕು.

SRI H. D. DEVE GOWDA.—If there is any prior engagement to the Hon'ble. Chief Minister, I don't ask for sitting in the afternoon. Or else, we can sit extra on Monday.

SRI D DEVARAJ URS.—I am prepared to concede. But today afternoon, it is not possible.

SRI H. D DEVE GOWDA.—Somehow we will try to adjust. We will see that all the demands are passed and finished

SRI D. DEVARAJ URS.—I want your co-operation. I am here to hear the honble. Members.

ಶ್ರೀ ಎಸ್. ಪುಟ್ಟಸ್ವಾಮಿ.—(ಚಾಮರಾಜನಗರ) ಸನ್ಮಾನ್ಯ ಅಧ್ಯಕ್ಷಿಣಿಯವರೇ, ಇಂದು ಬೆಳಿಗ್ಗೆ ಸದನದ ಮುಂದೆ ಮಂಡಿಸಿದ ಸಣ್ಣ ಕೈಗಾರಿಕೆಗೆ ಮತ್ತು ರೇಷ್ಮೆ ಕೈಗಾರಿಕೆಗೆ ಸಂಬಂಧಪಟ್ಟ ಬೇಡಿಕೆಗಳನ್ನು ನಾನು ಸಂಪೂರ್ಣವಾಗಿ ಸ್ವಾಗತಿಸುತ್ತಾ, ದೊಡ್ಡ ಕೈಗಾರಿಕೆಗಳ ಬಗ್ಗೆಯಾಗಲಿ ಅಥವಾ ಹೆಚ್ಚಾಗಿ ಸಣ್ಣ ಕೈಗಾರಿಕೆಗಳ ಬಗ್ಗೆಯಾಗಲಿ ಮಾತನಾಡುವುದಕ್ಕೆ ಕಾಲವು ಇಲ್ಲ. ಆ ಬಗ್ಗೆ ಅನೇಕ ಜನ ಸ್ನೇಹಿತರು ಮಾತನಾಡುತ್ತಾರೆಂದು ನನ್ನ ಅಭಿಪ್ರಾಯದಲ್ಲಿರುವುದರಿಂದ, ನಾನು ಕರ್ನಾಟಕ ರಾಜ್ಯದಲ್ಲಿ ಹೆಚ್ಚು ಸಂಖ್ಯೆಯಲ್ಲಿ ಕಾರ್ಮಿಕರಿಗೆ ಮತ್ತು ರೈತರಿಗೆ ಹೆಚ್ಚು ಕೆಲಸವನ್ನು ಒದಗಿಸತಕ್ಕ ಈ ರೇಷ್ಮೆ ಕೈಗಾರಿಕೆಗೆ ಸಂಬಂಧಪಟ್ಟ ಹಾಗೆ ಕೆಲವು ವಿಷಯಗಳನ್ನು ಮಾತ್ರ ಪ್ರಸ್ತಾಪಿಸುವುದಕ್ಕೆ ಇಚ್ಛೆಪಡುತ್ತೇನೆ. ದೊಡ್ಡ ದೊಡ್ಡ ಕೈಗಾರಿಕೆಗಳನ್ನು ಸರ್ಕಾರದ ವತಿಯಿಂದಾಗಲಿ, ಖಾಸಗೀ ವಲಯದಿಂದಾಗಲೀ ಅಥವಾ ಸರ್ಕಾರದವರು ಮತ್ತು ಖಾಸಗಿಯವರು ಸೇರಿ ಮಾಡತಕ್ಕ ವಲಯದಿಂದಾಗಲೀ ಮಾಡಬೇಕಾದುದು ಸಾಧುವಾದುದಾಗಿದೆ. ಈ ಬಗ್ಗೆ ಕಳೆದ 5 ವರ್ಷಗಳಿಂದ ಸರ್ಕಾರ ತನ್ನ ಕ್ರಮರಾದ ಪ್ರಯತ್ನಗಳನ್ನು ಮಾಡಿದೆ.

ಕೆಲವು ಕೈಗಾರಿಕೆಗಳು ಈಗಾಗಲೇ ಉತ್ಪನ್ನ ಮಾಡತಕ್ಕ ಹಂತಕ್ಕೆ ಬಂದಿವೆ. ಇನ್ನು ಹಲವಾರು ಕೈಗಾರಿಕೆಗಳು ಹಲವಾರು ಹಂತದಲ್ಲಿ ಕಾರ್ಯೋನ್ಮುಖವಾಗಿರತಕ್ಕದ್ದು ಮಾನ್ಯ ಸದಸ್ಯರಿಗೆ ಗೊತ್ತಿದೆ. ಗ್ರಾಮಾಂತರ ಪ್ರದೇಶಗಳಲ್ಲಿ ವ್ಯವಸಾಯದ ಉತ್ಪನ್ನವನ್ನು ಅಳವಡಿಸಿ ಸಣ್ಣ ಕೈಗಾರಿಕೆಗಳನ್ನು ಹೆಚ್ಚು ಹೆಚ್ಚಾಗಿ ಪ್ರಾರಂಭ ಮಾಡಬೇಕು. ಇದು ಸರ್ಕಾರದವರು ಒಪ್ಪಿಕೊಂಡಿರತಕ್ಕ ನೀತಿಯಾಗಿದೆ. ಸಣ್ಣ ಕೈಗಾರಿಕೆಗಳನ್ನು ಮತ್ತು ಗೃಹಕೈಗಾರಿಕೆಗಳನ್ನು ಗ್ರಾಮಾಂತರ ಪ್ರದೇಶಗಳಲ್ಲಿ ಮಾಡಬೇಕಾದರೆ ಸರ್ಕಾರದವರು ಮತ್ತು ಇಲಾಖೆಯವರು ಕೈಗಾರಿಕಾ ಷೆಡ್ಡುಗಳನ್ನು ಕಟ್ಟತಕ್ಕ ವ್ಯವಸ್ಥೆಯನ್ನು ಮಾಡಿಲ್ಲ ಸಣ್ಣ ಕೈಗಾರಿಕೆಗಳಾಗಲೀ, ವ್ಯವಸಾಯದ ಉತ್ಪನ್ನವನ್ನು ಅಳವಡಿಸಿ ಮಾಡತಕ್ಕ ಕೈಗಾರಿಕೆಗಳಾಗಲೀ ಇವುಗಳನ್ನು ನಮ್ಮ ಮೈಸೂರು ಜಿಲ್ಲೆಯಲ್ಲಿ ನಾಲ್ಕು ವರ್ಷಗಳ ಹಿಂದೆ ಮಾನ್ಯ ಕೈಗಾರಿಕಾ ಮಂತ್ರಿಗಳು ಮಾಡುತ್ತೇವೆಂದು ತಿಳಿಸಿದ್ದರು. ಅದರಂತೆ ಕೊಳ್ಳೆಗಾಲ, ಹುಣಸೂರು ಮತ್ತು ಚಾಮರಾಜನಗರ ಈ ಮೂರು ಸ್ಥಳಗಳಲ್ಲಿ 10–20 ಕೈಗಾರಿಕಾ ಷೆಡ್ಡುಗಳನ್ನು ಪ್ರಾರಂಭ ಮಾಡಿದರು. ಇದಕ್ಕೆಬೇಕಾದಂಥ ಮಂಜೂರಾತಿಗೂ ಒಪ್ಪಿಗೆಯನ್ನು ಸರ್ಕಾರದವರು ಕೊಟ್ಟರು. ಆದರೆ ನಮ್ಮ ಕೊಳ್ಳೆಗಾಲದಲ್ಲಿ ಈ ಕೆಲಸವನ್ನು ಪ್ರಾರಂಭ ಮಾಡಲಿಲ್ಲ. ಚಾಮರಾಜನಗರದಲ್ಲಿ ಬೇಕಾದಂಥ ಸ್ಥಳವನ್ನು ಪಡೆಯುವುಧಕ್ಕೆ ಪ್ರಯತ್ನವನ್ನು ನಡೆಸಿಲ್ಲ. ಹುಣಸೂರಿನಲ್ಲಿ ಸ್ಥಳ ಪಡೆದುಕೊಂಡು ಕೆಲಸ ಪ್ರಾರಂಭ ಮಾಡಿದ್ದಾರೆ ಎಂದು ಕೇಳಿದ್ದೇನೆ. ಸಣ್ಣ ಕೈಗಾರಿಕಗಳು ಆಗಬೇಕಾದರೆ ಸಹಕಾರ ಮಂತ್ರಿಗಳು ಇದರ ಕಡೆ ಗಮನ ಹರಿಸುವುದು ಸೂಕ್ತ ಎಂದು ನನಗನ್ನಿಸುತ್ತದೆ. ಇದು ಸಹಕಾರದ ಇಲಾಖೆಯ ವಿಷಯ. ಇದನ್ನು ಸಹಕಾರ ಇಲಾಖೆಯ ಬೇಡಿಕೆಗಳು ಬಂದಾಗ ಮಾತನಾಡತಕ್ಕದ್ದು ಸೂಕ್ತ ಎಂದು ನಾನು ತಿಳಿದುಕೊಂಡಿದ್ದರೂ ಕೂಡ ಇದು ಕೈಗಾರಿಕಾ ಮತ್ತು ಸಹಕಾರ ಸಚಿವರು ಇಬ್ಬರೂ ಸೇರಿ ನಡೆಸತಕ್ಕ ಒಂದು ವೆಂಚರ್ ಎಂದರೆ ನಾನಾದರೂ ಭಾವನೆ ಮಾಡುತ್ತೇನೆ ಮೈಸೂರು ಜಿಲ್ಲೆಯಲ್ಲಿ ಒಂದು ಸಕ್ಕರೆ ಕಾರ್ಖಾನೆಯನ್ನು ಪ್ರಾರಂಭ ಮಾಡಬೇಕು ಎಂದು ಸಹಕಾರೀ ಕ್ಷೇತ್ರದಲ್ಲಿ ಇದನ್ನು ಪ್ರಾರಂಭ ಮಾಡಿದ್ದಾರೆ. ಇದು ಹತ್ತು ವರ್ಷಗಳಿಂದ ಹಿಡಿದು ಇಲ್ಲಿಯವರೆಗೆ ಕಾರ್ಯಗತವಾಗದೆ, ಈಗ ಉತ್ಪನ್ನ ಮಾಡತಕ್ಕ ಹಂತವನ್ನು ಮುಟ್ಟಿದೆ. ಕೊಳ್ಳೆಗಾಲದ ಸಕ್ಕರೆ ಕಾರ್ಖಾನೆ ಕಳೆದ

ಒಂದು ವರ್ಷದಿಂದ ಉತ್ಪನ್ನವನ್ನು ಪ್ರಾರಂಭ ಮಾಡಿದೆ. ಇದಕ್ಕೆ ಷೇರು ಹಣವನ್ನು ವಸೂಲು ಮಾಡಿ, ಸರ್ಕಾರದ ಹಣಕಾಸಿನ ಸಂಸ್ಥೆಗಳಿಂದ ನೆರವನ್ನು ಪಡೆದುಕೊಂಡಾಗ ಇದ್ದಂಥ ಬೋರ್ಡ್ ಆಫ್ ಡೈರೆಕ್ಟರುಗಳು ಈಗಲೂ ಮುಂದುವರಿಯುತ್ತಿದ್ದಾರೆ. ಬೋರ್ಡ್ ಆಫ್ ಡೈರೆಕ್ಟರನ್ನು ರೀಕಾನ್‌ಸ್ಟಿಟ್ಯೂಟ್ ಮಾಡುವುದು ಮತ್ತು ಚುನಾವಣೆಯನ್ನು ಮಾಡುವುದಾಗಲೀ ಕಳೆದ 8-10 ವರ್ಷಗಳಿಂದ ಸರ್ಕಾರದವರು ಮಾಡಿಲ್ಲ. ಬಹುಶಃ ಇದು ಸಹಕಾರ ಮತ್ತು ಕೈಗಾರಿಕಾ ಇಲಾಖೆಯವರಿಗೆ ಸೇರಿದಂಥ ಕೆಲಸ. ಈ ಸಹಕಾರಿ ಸಕ್ಕರೆ ಕಾರ್ಖಾನೆ ಅಭಿವೃದ್ಧಿಯಾಗಬೇಕಾದರೆ, ಮತ್ತು ಇದರ ಚಟುವಟಿಕೆಗಳು ವ್ಯವಸ್ಥಿತವಾಗಿ ನಡೆಯಬೇಕಾದರೆ ಬೋರ್ಡ್ ಆಫ್ ಡೈರೆಕ್ಟರ್ಸನ್ನು ರೀಕಾನ್‌ಸ್ಟಿಟ್ಯೂಟ್ ಮಾಡತಕ್ಕದ್ದಾಗಲೀ ಇದಕ್ಕೆ ಚುನಾವಣೆ ಮಾಡತಕ್ಕದ್ದಾಗಲೀ ಆದಷ್ಟು ಬೇಗ ಆಗಬೇಕು. ಈ ಕೆಲಸವನ್ನು ಸರ್ಕಾರದವರು ಕೂಡಲೇ ಮಾಡಬೇಕು ಎಂದು ನಾನು ಈ ಸಂದರ್ಭದಲ್ಲಿ ಮನವಿ ಮಾಡಿಕೊಳ್ಳುತ್ತೇನೆ.

ಇಡೀ ರಾಷ್ಟ್ರದಲ್ಲಿ ಉತ್ಪನ್ನವಾಗತಕ್ಕ ರೇಷ್ಮೆಯ ಬಹುಭಾಗ ನಮ್ಮ ಕರ್ನಾಟಕದಲ್ಲಿ ಆಗುತ್ತದೆ. ರೇಷ್ಮೆಯನ್ನು ಬೆಳೆಯತಕ್ಕದ್ದಕ್ಕೆ ಮತ್ತು ರೇಷ್ಮೆಯ ಕೈಗಾರಿಕೆಯನ್ನು ಪ್ರಾರಂಭ ಮಾಡತಕ್ಕ ಕಾಲದಲ್ಲಿ ಅನೇಕ ತರಹದ ಅಡ್ಡಿ ಆತಂಕಗಳು ಬಂದು ಇದರಲ್ಲಿ ಹೆಚ್ಚು ಬಡವರು ಮತ್ತು ದುರ್ಬಲ ವರ್ಗದವರು ತಮ್ಮ ಜೀವನವನ್ನು ಸಾಗಿಸತಕ್ಕದ್ದಾಗಿದೆ. ಈ ಒಂದು ಕೈಗಾರಿಕೆಗೆ ಸರ್ಕಾರದವರು ಅಷ್ಟು ಹೆಚ್ಚಿನ ಗಮನವನ್ನು ಹರಿಸಿದಂತೆ ಕಾಣಲಿಲ್ಲ. ಇದಕ್ಕೆ ಹೆಚ್ಚಿನ ಸಹಾಯವನ್ನು ಕೊಟ್ಟು ಇದನ್ನು ಅಭಿವೃದ್ಧಿ ಮಾಡಬೇಕು. ಹೋದ ವರ್ಷ ಇದರ ಅಭಿವೃದ್ಧಿಗಾಗಿ ಸರ್ಕಾರದವರು ಸುಮಾರು 75 ಲಕ್ಷ ರೂಪಾಯಿಗಳನ್ನು ಖರ್ಚು ಮಾಡಿದ್ದರು. ಈ ವರ್ಷ ಎರಡು ಕೋಟಿ ರೂಪಾಯಿಗಳನ್ನು ಬಡ್ಜೆಟ್ಟಿನಲ್ಲಿ ಒದಗಿಸಿದ್ದಾರೆ. ಈ ಕೈಗಾರಿಕೆಯನ್ನು ಅಭಿವೃದ್ಧಿ ಪಡಿಸಬೇಕು ಎಂದು ಹೇಳಿ 1969ರಲ್ಲಿ ಕ್ರಾಷ್ ಪ್ರೋಗ್ರಾಂ ಅನ್ನು ಕೇಂದ್ರಸರ್ಕಾರದವರು ಪ್ಲಾನಿಂಗ್ ಕಮೀಷನ್‌ನವರು ಜೊತೆಯಲ್ಲಿ ಸಮಾಲೋಚನೆ ಮಾಡಿ ನಮ್ಮ ರಾಜ್ಯದಲ್ಲಿ ಪ್ರಾರಂಭ ಮಾಡಿದರು 1972ರಲ್ಲಿ ಇದನ್ನು ಜಾರಿಗೆ ಕೊಟ್ಟು ಸರ್ಕಾರದವರ ತೀರ್ಮಾನ ಇದರ ಬಗ್ಗೆ ಆಗಿದ್ದರೂ ಕೂಡ ಇದು ಕಾರ್ಯಗತವಾಗಲಿಲ್ಲ ಎಂದು ಹೇಳಿದರೆ ಅದು ತಪ್ಪಾಗಲಾರದು. 1975-76ರಲ್ಲಿ ಈ ಪ್ರೋಗ್ರಾಂನಲ್ಲಿ 80 ಕೋಟಿ ರೂಪಾಯಿಗಳನ್ನು ಒದಗಿಸಿ, ಇದನ್ನು 10 ವರ್ಷದಲ್ಲಿ ಖರ್ಚು ಮಾಡಬೇಕು ಎಂದು ಇದ್ದರೂ ಕೂಡ ಇದನ್ನು 67 ಕೋಟಿ ರೂಪಾಯಿಗಳಿಗೆ ಇಳಿಸಿಕೊಂಡಿದ್ದಾರೆ ಎಂದು ನಾನು ಕೇಳಿದ್ದೇನೆ 80 ಕೋಟಿ ರೂಪಾಯಿಗಳಾಗಲೀ 67 ಕೋಟಿ ರೂಪಾಯಿಗಳನ್ನಾಗಲಿ ಖರ್ಚು ಮಾಡತಕ್ಕ ಒಂದು ಕಾರ್ಯಕ್ರಮವನ್ನು ಸರ್ಕಾರದವರು ಹಾಕಿಕೊಳ್ಳಲಿಲ್ಲ. ರೇಷ್ಮೆ ಬೆಳೆಯನ್ನು ಬೆಳೆಯತಕ್ಕ ಕರ್ನಾಟಕದ ಎಲ್ಲಾ ಹಳ್ಳಿಗಳಲ್ಲಿ ರೇಷ್ಮೆಯನ್ನು ಕೂಡ ಅಳವಡಿಸಿ ಸಹಕಾರ ಸಂಘಗಳನ್ನು ನಿರ್ಮಾಣ ಮಾಡುವಂಥ ನೀತಿಯನ್ನು ಇಲ್ಲುವನ್ನು ಸರ್ಕಾರದವರು ಹಾಕಿಕೊಳ್ಳಬೇಕು ಎಂದು ನಾನು ಹೇಳುತ್ತೇನೆ. ಸಹಕಾರ ಸಂಘಗಳಿಗೆ ಹಣ ಪಾವತಿ ಮಾಡತಕ್ಕ ರಿಸರ್ವ್ ಬ್ಯಾಂಕ್ ನೀತಿಯನ್ನು ಕಮರ್ಷಿಯಲ್ ಬ್ಯಾಂಕುಗಳಾಗಲೀ, ಸಹಕಾರಿ ಬ್ಯಾಂಕುಗಳಾಗಲೀ ಅನುಸರಿಸುತ್ತಿಲ್ಲ. ರೇಷ್ಮೆ ಕೈಗಾರಿಕೆಯ ಸಹಕಾರ ಸಂಘಗಳಿಗೆ ಹಣವನ್ನು ಕೊಡುವುದಕ್ಕೆ ಬೇಕಾದಂಥ ಸಿಬ್ಬಂದಿ ಮ್ಯಾನೇಜಿಂಗ್ ಡೈರೆಕ್ಟರ್‌ನ್ನು ನೇಮಕ ಮಾಡತಕ್ಕ ಕೆಲಸ ಟೆಕ್ನಿಕಲ್ ಅಸಿಸ್ಟೆಂಟ್ಸ್ ನೇಮಕ ಮಾಡತಕ್ಕ ಕೆಲಸ ಇನ್ನೂ ಪೂರ್ಣವಾಗಿಲ್ಲ. ಇದಕ್ಕೆ ನಮ್ಮ ಸಹಕಾರ ಇಲಾಖೆಯವರು ಮತ್ತು ರೇಷ್ಮೆ ಇಲಾಖೆಯವರು ಪ್ರಯತ್ನ ಮಾಡದಿದ್ದರೆ ಫಿನಾನ್ಸಿಯಲ್ ಬ್ಯಾಂಕ್‌ಗಳು ಹಣವನ್ನು ರಾಟ್ ಮಾಡತಕ್ಕ ಕೆಲಸವನ್ನು ಪೂರ್ಣ ಮಾಡುವುದಿಲ್ಲ. ರೇಷ್ಮೆಯನ್ನು ಬೆಳೆಯುತಕ್ಕ ರೈತರ ಸಹಕಾರ ಸಂಘಗಳಿಗೆ ಮ್ಯಾನೇಜಿಂಗ್ ಡೈರೆಕ್ಟರ್ಸ್ ಮತ್ತು ಟೆಕ್ನಿಕಲ್ ಅಸಿಸ್ಟೆಂಟ್ಸ್ ನೇಮಕ ಮಾಡತಕ್ಕ ಕೆಲಸ ಇನ್ನೂ ಕೂಡ ಪೂರ್ಣವಾಗಿಲ್ಲ. ಅಂದಮೇಲೆ ಸರ್ಕಾರದವರು ಅವರಿಗೆ ಕೊಡತಕ್ಕ ಸಹಾಯವನ್ನು ಯಾವ ರೀತಿಯಲ್ಲಿ ಉಪಯೋಗಿಸಿಕೊಳ್ಳಬೇಕು ಎನ್ನುವುದನ್ನು ಯೋಚನೆ ಮಾಡಬೇಕು. ರೇಷ್ಮೆ ಸೊಪ್ಪನ್ನು ಬೆಳೆದು ಗೂಡನ್ನು ತಯಾರು ಮಾಡತಕ್ಕ ಕೆಲಸಕ್ಕೆ ಹಣಬೇಕು. ನಂತರ ನೂಲು ಬಿಚ್ಚಿ ಅದನ್ನು ರೇಷ್ಮೆಯಾಗಿ ಮಾಡಬೇಕು. ಈ ಭಾಗದಲ್ಲಿ ಎರಡು ತರಹದ ಸೊಸೈಟಿಗಳನ್ನು ಸರ್ಕಾರದವರು ಸ್ಥಾಪನೆ ಮಾಡಿದ್ದಾರೆ. ಸರ್ಕಾರದವರು ಹಂಚತಕ್ಕ ದುಡ್ಡನ್ನು ಮತ್ತು ಕೊಡತಕ್ಕ ಅಂಕಿಅಂಶಗಳನ್ನು ನೋಡುವುದಾದರೆ, ಕ್ರಾಷ್ ಪ್ರೋಗ್ರಾಂನಲ್ಲಿ ಒದಗಿಸಿರತಕ್ಕ 67 ಕೋಟಿ ರೂಪಾಯಿಗಳನ್ನು

ಸರ್ಕಾರದವರು ಖರ್ಚುಮಾಡುವುದಕ್ಕಾಗಿಲ್ಲ. ಇವರಲ್ಲಿ ಇನ್ನೂ ಎರಡು ಚಿಲ್ಲರೆ ಕೋಟಿ ರೂಪಾಯಿಗಳನ್ನು ಖರ್ಚುಮಾಡುವುದಕ್ಕಾಗಿಲ್ಲ. ಅಂದಮೇಲೆ ಇನ್ನೂ ಉಳಿದಿರತಕ್ಕಂಥ ಹಣವನ್ನು ಮೂರು ನಾಲ್ಕು ವರ್ಷಗಳಲ್ಲಿ ಯಾದರೂ ನಮ್ಮ ಸರ್ಕಾರದವರು ಖರ್ಚು ಮಾಡುವುದಕ್ಕೆ ಪ್ರಯತ್ನ ಮಾಡಬೇಕು. ಈ ಹಣವನ್ನು ರೇಷ್ಮೆಯ ಕೈಗಾರಿಕಾ ಅಭಿವೃದ್ಧಿಗೆ ಮಾತ್ರ ಖರ್ಚು ಮಾಡಬೇಕು ಮತ್ತು ಇದಕ್ಕಾಗಿಯೇ ಖರ್ಚು ಮಾಡುತ್ತೀರಿ ಅಥವಾ ಇಲ್ಲವೇ ಎನ್ನುವ ಅನುಮಾನ ನಮಗಾದರೂ ಕಾಣುತ್ತದೆ.

ಮಾನ್ಯ ಅಧ್ಯಕ್ಷರೇ ಈಗಲಾದರೂ ಮಾನ್ಯ ಸಹಕಾರ ಇಲಾಖೆಯ ಮತ್ತು ರೇಷ್ಮೆ ಇಲಾಖೆಯ ಸಚಿವರು ಸದನದಲ್ಲಿದ್ದಾರೆ ಅವರ ಗಮನಕ್ಕೆ ತರುವುದೇನೆಂದರೆ ನಮ್ಮ ಸಹಕಾರ ಇಲಾಖೆಯಿಂದ ಮೇನೇಜಿಂಗ್ ಡೈರೆಕ್ಟರ್ಸ್ ಮತ್ತು ಟೆಕ್ನಿಕಲ್ ಅಸಿಸ್ಟೆನ್ಸ್‌ನ್ನು ನೇಮಕ ಮಾಡುವ ಕೆಲಸ ಇಡೀ ರಾಜ್ಯದಲ್ಲಿ ಇನ್ನೂ ಮಾಡುವುದಕ್ಕೆ ಆಗಿಲ್ಲ. ಆದ್ದರಿಂದ ಅದನ್ನು ಕೂಡಲೇ ಮಾಡಬೇಕು. ಇನ್ನೂ ಅನೇಕ ಸೊಸೈಟಿಗಳಿಗೆ ಫೈನಾನ್ಷಿಯಲ್ ಅಸಿಸ್ಟೆನ್ಸ್‌ನ್ನು ಮಾಡುವುದಕ್ಕೆ ಇನ್ನೂ ಆಗಿಲ್ಲ. ಅದನ್ನು ಕೂಡಲೇ ಮಾಡಬೇಕೆಂದು ಈ ಸಂದರ್ಭದಲ್ಲಿ ಮನವಿಮಾಡಿಕೊಳ್ಳುತ್ತೇನೆ. ಮತ್ತೆ ನಮ್ಮಲ್ಲಿ ಗೂಡನ್ನು ತಯಾರು ಮಾಡುವುದಕ್ಕೆ ಅದರಲ್ಲೂ ಸ್ಥಳೀಯ ಮೈಸೂರು ಗೂಡನ್ನು ಕಡ್ಡಾಯವಾಗಿ ತಯಾರು ಮಾಡುವುದಕ್ಕೆ ಬೇಕಾದಂಥ ಹೊಸ ತಳಿ ಗೂಡನ್ನು ತಯಾರಿಸಲು ಕಾರ್ಯಕ್ರಮ ಹಾಕಿಕೊಂಡಿದ್ದಾರೆ. ನಮ್ಮಲ್ಲಿ ಸರ್ಕಾರದವರು ಮತ್ತು ಇಲಾಖೆಯವರು ರೇಷ್ಮೆ ಫಾರಂಗಳನ್ನು ವ್ಯವಸ್ಥೆ ಮಾಡೋಣವೆಂದು ಹೇಳಿ ಅದು ನಡೆದು ಬರುತ್ತಾ ಇದೆ ಆದರೆ ನಮ್ಮಲ್ಲಿ ಮಿಶ್ರತಳಿ ಗೂಡುಗಳ ವ್ಯಾಪಾರಕ್ಕಾಗಿ ವ್ಯವಸ್ಥೆಯಾಗಿದೆ ಆದರೆ ರೇಷ್ಮೆ ಕೈಗಾರಿಕೆಗಳಲ್ಲಿ ಮಿಶ್ರತಳಿಯ ಗೂಡುಗಳು ಅದಕ್ಕೆ ಬೇಕಾದಂತಹ ಮೊಟ್ಟೆಗಳು ಹಾಗೂ ನಾಟಿ ಗೂಡನ್ನು ಮತ್ತು ಬಿಳಿ ಗೂಡನ್ನು ತಯಾರು ಮಾಡತಕ್ಕಂಥ ಸೀಡ್ ಏರಿಯಾ ಮಾಡಬೇಕೆಂದು ವ್ಯವಸ್ಥೆ ಮಾಡಿದರೂ ಸಹ ಅಲ್ಲಿ ರೈತರಿಗೆ ಬೇಕಾದಂತಹ ನೀರಾವರಿ ಬಾವಿಗಳನ್ನು ಸರ್ಕಾರದಿಂದ ಅಥವಾ ಬೇರೆ ಬ್ಯಾಂಕುಗಳ ಮುಖಾಂತರವಾಗಿ ವ್ಯವಸ್ಥೆ ಮಾಡುವ ಕೆಲಸ ಸುಸೂತ್ರವಾಗಿ ನಡೆದಿಲ್ಲ. ಆದ್ದರಿಂದ ಏನು ಈ ಗೂಡುಗಳು ತಯಾರಾಗುತ್ತವೆ ಅವು ರೋಗ ರಹಿತವಾಗಿ ಇರುವಂತೆ ಮಾಡುವುದಕ್ಕೆ ಮಿಶ್ರ ತಳಿ ಬೆಳೆಯತಕ್ಕಂಥ ರೈತರು ನಮ್ಮ ರಾಜ್ಯದಲ್ಲಿ ಇದ್ದಾರೆ. ಜೊತೆಗೆ ಅವರಿಗೆ ಅನುಭವವೂ ಇದೆ. ಆದ್ದರಿಂದ ಇದರ ಬಗ್ಗೆ ವಿವರವಾಗಿ ಹೇಳುವುದಕ್ಕೆ ಇಚ್ಛೆಪಡುವುದಿಲ್ಲ, ಕಾಲವೂ ಇಲ್ಲ ಇದರಲ್ಲಿ ಅಧಿಕಾರಿಗಳು, ರೇಷ್ಮೆ ಇಲಾಖೆಯವರು ಮತ್ತು ಸರ್ಕಾರದವರು ಈ ವಿಷಯವನ್ನು ಕಂಡುಕೊಂಡಿದ್ದಾರೆ ಮೈಸೂರು ಫಿಲೇಚರ್ ಗೂಡುಗಳನ್ನು ಕೊಡಬೇಕೆಂದು ನಿಗಧಿಯಾಗಿದ್ದರೂ ಖಾಸಗಿಯವರು ಬೆಳೆದುಕೊಟ್ಟಂತಹ ಮೊಟ್ಟೆಯನ್ನು ತಯಾರು ಮಾಡುವಂತ ಪದ್ಧತಿ ಮತ್ತು ಜಾಳಿ ಬಂದಿದೆ. ಮತ್ತೆ ರೋಗಪೀಡಿತವಾದ ಮೊಟ್ಟೆಗಳನ್ನು ರೈತರಿಗೆ ಕೊಟ್ಟು ಅನೇಕ ಬಡರೈತರಿಗೆ ಮತ್ತು ಮಧ್ಯಮವರ್ಗದವರಿಗೆ ಲಕ್ಷಾಂತರ ರೂಪಾಯಿ ನಷ್ಟವಾಗುತ್ತಿದೆ. ಈ ಮನೆಯಲ್ಲೇ ಅನೇಕ ಸಂದರ್ಭಗಳಲ್ಲಿ ರೋಗ ರಹಿತವಾದ ಮೊಟ್ಟೆಗಳನ್ನು ಕೊಡಬೇಕೆಂದು ಚರ್ಚೆ ನಡೆದು ಅದರ ಬಗ್ಗೆ ಸರ್ಕಾರದವರು ಭರವಸೆಯನ್ನು ಕೊಟ್ಟಿರುವುದು ನಾವು ನೀವು ಕೇಳಿದ್ದೇವೆ. ಯಾವುದೇ ಕಾನೂನನ್ನು ಮಾಡಿ ನಾಟಿ ಗೂಡನ್ನು ತಯಾರು ಮಾಡುವುದಕ್ಕೆ ನಿಗಧಿ ಮಾಡಬೇಕು. ಸರಕಾರದವರು ಈ ಪ್ರಯತ್ನ ಮಾಡುವುದು ಸೂಕ್ತ. ಇನ್ನು ಮಿಶ್ರತಳಿ ತಯಾರು ಮಾಡತಕ್ಕಂಥ ಕ್ರಾಷ್ ಪ್ರೋಗ್ರಾಮ್‌ನಿಂದ ಬಾವಿ ತೆಗೆಸಿ ಕೊಡತಕ್ಕಂಥಾದ್ದನ್ನು ಮಾಡಬೇಕು ಫಿಲೇಚರ್‌ನ್ನು ಬೆಳೆಯತಕ್ಕಂಥ ಗೂಡನ್ನು ವ್ಯವಸ್ಥೆ ಮಾಡಿ ಒಳ್ಳೆಯ ಗೂಡನ್ನು ಬೆಳೆದುಕೊಟ್ಟರೆ ರೋಗರಹಿತ ಗೂಡನ್ನು ಬೆಳೆಯುವುದಕ್ಕೆ ಅನುಕೂಲ ವಾಗುತ್ತದೆ ಬೆಳೆದಂತಹ ಗೂಡನ್ನು ರೆಗ್ಯೂಲೇಟೆಡ್ ಮಾರ್ಕೆಟ್‌ಗಳ ಮುಖಾಂತರ ಮಾಡುವುದಕ್ಕೆ ವ್ಯವಸ್ಥೆ ಮಾಡಿದ್ದಾರೆ ಇದರ ಬಗ್ಗೆ ಕೈಗಾರಿಕೆ ಬೇಡಿಕೆ ಬಂದಾಗ ಮತ್ತು ಉಳಿದ ಸಂದರ್ಭಗಳು ಬಂದಾಗ ಹೇಳಿದರೂ ಕೂಡ ಇದನ್ನು ಸರ್ಕಾರದವರು ಸರಿಪಡಿಸುವುದಕ್ಕೆ ಆಗಲಿಲ್ಲ. ಇನ್ನು ಅಲ್ಲಿ ನಡೆಯತಕ್ಕಂಥ ಅನ್ಯಾಯಗಳು ಅಂದರೆ ಲಂಚ ರುಶುವತ್ತು ಹಾಗೂ ದಳ್ಳಾಳಿಗಳ ಹಾವಳಿ ಹೇಳತೀರದು. ಇದನ್ನು ಅಭಿವೃದ್ಧಿ ಮಾಡತಕ್ಕಂಥ ಫಿಲೇಚರ್ ರೆಪ್ರೆಸೆಂಟೇಟಿವ್ಸ್ ಏನು ಇದ್ದಾರೆ ಅವರಲ್ಲಿ ಅವ್ಯವಹಾರಗಳು ನಡೆದು ಸರ್ಕಾರಕ್ಕೆ ಕೂಡ ಬಹಳ ನಷ್ಟವಾಗುತ್ತದೆ. ಈ ಹವ್ಯಾಸವನ್ನು ಬಿಡಿಸುವುದಕ್ಕೆ ಪ್ರಯತ್ನ ಮಾಡಬೇಕೆಂದು ಹೇಳುತ್ತೇನೆ. ಇನ್ನು ಮಾನ್ಯ ಅಧ್ಯಕ್ಷರೇ, ನಮ್ಮ ರೇಷ್ಮೆ ಕೈಗಾರಿಕೆಗೆ ಸಂಬಂಧ

ಪಟ್ಟು ಹಾಗೆ ನಮ್ಮಲ್ಲಿ ನೂಲನ್ನು ತೆಗೆಯುತಕ್ಕಂಥಾದ್ದರಲ್ಲಿ ಸರ್ಕಾರ ನಡೆಸಿಕೊಂಡು ಬರತಕ್ಕ ಫಿಲೇಚರ್‌ನಲ್ಲಿ ಅನೇಕ ಲೋಪದೋಷಗಳು ಇವೆ, ಜೊತೆಗೆ ಖಾಸಗಿಯವರಲ್ಲಿ ಅನೇಕ ಲೋಪದೋಷಗಳು ಇರುತ್ತವೆ. ಜೊತೆಗೆ ಅವರು ಲಾಭದಾಯಕವಾಗಿ ಮಾಡುವುದಕ್ಕೆ ಚರಕದಲ್ಲಿ ನೂಲನ್ನು ತೆಗೆಯಲಿಕ್ಕೆ ಸರ್ಕಾರದವತಿಯಿಂದ ಪ್ರತಿವರ್ಷವೂ ಲಕ್ಷಾಂತರ ರೂಪಾಯಿ ನಷ್ಟವಾಗುತ್ತಿದೆ. ಇದು ಸರ್ಕಾರದವರು ಕೊಡತಕ್ಕಂಥ ರಿಪೋರ್ಟಿನಲ್ಲಿ ಗೊತ್ತಾಗುತ್ತದೆ. ಒಂದು ಕೇಜಿ ಗೂಡನ್ನು ಕರಗಿಸಿದರೆ ಎಷ್ಟು ನೂಲು ಬರುತ್ತದೆಂದು ಗೊತ್ತಿಲ್ಲ. ಸಾಲದ್ದಕ್ಕೆ ತಜ್ಞರು ಕೂಡ ಇದ್ದಾರೆ, ಅವರು ಇದ್ದೂ ಕೂಡ ಪ್ರತಿವರ್ಷವೂ ಸರಿಯಾದ ವ್ಯವಸ್ಥಿತವಾದ ರೀತಿಯಲ್ಲಿ ಇದನ್ನು ತಡೆಗಟ್ಟುವುದಿಲ್ಲ. ಇದರಿಂದ ಎಷ್ಟು ನೂಲು ಬರುತ್ತದೆ ಎಷ್ಟು ನಷ್ಟವಾಗುತ್ತಿದೆ ಎನ್ನುವುದು ಇವರಿಗೆ ಗೊತ್ತಿಲ್ಲವೆಂದು ನಾನು ಹೇಳುವುದಕ್ಕೆ ಇಷ್ಟಪಡುತ್ತೇನೆ. ಆದ್ದರಿಂದ ಈ ಮಾನ್ಯ ಸದಸ್ಯರು ಮತ್ತು ತಜ್ಞರಿಂದ ಒಂದು ಸಮಿತಿಯನ್ನು ನೇಮಕಮಾಡಿ ತನಿಖೆ ನಡೆಸಿ ವಿಚಾರ ಮಾಡಿಸುವುದು ಒಳ್ಳೆಯದು. ನಾವು ಇದನ್ನು ತಪ್ಪಿಸುವುದಕ್ಕೆ ಮತ್ತು ಕಡಿಮೆ ಮಾಡುವುದಕ್ಕೆ ಪ್ರಯತ್ನಪಡಬೇಕೆಂದು ಸೂಚಿಸುವುದಕ್ಕೆ ಇಷ್ಟಪಡುತ್ತೇನೆ. ರೇಷ್ಮೆ ಇಲಾಖೆಯಲ್ಲಿ ಎರಡು ವೀವಿಂಗ್ ಫ್ಯಾಕ್ಟರಿಗಳು ಇವೆ, ಒಂದು ಮೈಸೂರಿನಲ್ಲಿ ಮತ್ತೊಂದು ಕೊಳ್ಳೇಗಾಲ ತಾಲ್ಲೂಕಿನಲ್ಲಿ ಇದರಲ್ಲಿ ಟ್ವಿಸ್ಟಿಂಗ್ ಮತ್ತು ವೀವಿಂಗ್ ಫ್ಯಾಕ್ಟರಿ ಪ್ರಾರಂಭ ಮಾಡಿದ ಕಾಲದಿಂದಲೂ ಇಲಾಖೆಯವರು ವಿಚಾರಣೆ ನಡೆಸಿಲ್ಲವಂತೆ. ನಮ್ಮ ಪಬ್ಲಿಕ್ ಅಂಡರ್ ಟೇಕಿಂಗ್ಸ್ ಮತ್ತು ಪಬ್ಲಿಕ್ ಅಕೌಂಟ್ಸ್ ಕಮಿಟಿಯವರು ಏಕೆ ಸಿಲ್ಕ್ ಬಗ್ಗೆ ಪರಿಶೀಲನೆ ನಡೆಸಿಲ್ಲ, ಇದರಿಂದ ಏತಕ್ಕೆ ರಿಪೋರ್ಟ್ ಕೊಟ್ಟಿಲ್ಲವೆಂದು ಆಶ್ಚರ್ಯವಾಗುತ್ತದೆ. ನಾನು ಕೇಳುತ್ತೇನೆ. ನನಗೆ ತಿಳಿದಮಟ್ಟಿಗೆ ಇಲಾಖೆಯವರು ಇದರ ಬಗ್ಗೆ ಸರಿಯಾದ ಮಾಹಿತಿ ಗೊತ್ತಿಲ್ಲದೆ ತಪ್ಪು ತಿಳಿದುಕೊಂಡಿರಬಹುದು ಎಂದು ನಾನು ಭಾವನೆ ಮಾಡುತ್ತೇನೆ ಈ ಫ್ಯಾಕ್ಟರಿಗಳು ಪ್ರಾರಂಭವಾದಾಗಿನಿಂದಲೂ ಈ ನೂಲು ತಯಾರು ಮಾಡುವುದರಲ್ಲಿ ಕೋಟ್ಯಾಂತರ ರೂಪಾಯಿ ನಷ್ಟವಾಗಿದೆ, ಆದ್ದರಿಂದ ದಯಮಾಡಿ ಇದರ ಬಗ್ಗೆ ತನಿಖೆ ನಡೆಸತಕ್ಕಂಥಾದ್ದು ಸೂಕ್ತವೆಂದು ನನಗನಿಸುತ್ತದೆ.

11-30 A.M.

ಇನ್ನು ಅತಿ ಮುಖ್ಯವಾಗಿ ಹೇಳಬೇಕಾಗಿರತಕ್ಕಂಥ ಒಂದು ವಿಷಯವೇನೆಂದರೆ ಖಾಸಗಿಯವರು ರೇಷ್ಮೆ ನೂಲನ್ನು ಮಾರಾಟ ಮಾಡಲು ಫಿಲೇಚರ್ಸ್ ರೇಷ್ಮೆ ಮಾರಾಟ ಮಾಡಲು ರಾಜ್ಯ ಮಟ್ಟದಲ್ಲಿ ಸರ್ಕಾರದ ಆಶ್ರಯ ಪಡೆದಂಥ ಸಿಲ್ಕ್ ಮಾರ್ಕೆಟಿಂಗ್ ಫೆಡರೇಷನ್ ಎಂಬುದು ಇದೆ. ಇದರ ಕಥೆ ಹೇಳಲು ಸಾಧ್ಯವಿಲ್ಲ. ಇದು ಸರ್ಕಾರದ ಗ್ಯಾರಂಟಿಯ ಮೇಲೆ ಬ್ಯಾಂಕ್‌ಗಳಿಂದ ಮತ್ತು ಹಣಕಾಸಿನ ಸಂಸ್ಥೆಗಳಿಂದ ಸಾಲ ಪಡೆದುಕೊಂಡಿದ್ದರೂ ಸಹ ತನ್ನ ಸ್ವಂತ ಬಂಡವಾಳವನ್ನು ಹಾಕಿದ ರೀತಿಯಲ್ಲಿ ವ್ಯವಹಾರವನ್ನು ನಡೆಸುತ್ತಿದೆ ಈ ವಿಚಾರವನ್ನು ನಾನು ಇದೇ ಸದನದಲ್ಲಿ ಅನೇಕ ಸಲ ನಾನು ಭಾಷಣ ಮಾಡುವಾಗ ಹೇಳಿದ್ದೇನೆ. ಬೋರ್ಡ್ ಆಫ್ ಡೈರೆಕ್ಟರ್ಸ್ ಮೇನೇಜಿಂಗ್ ಡೈರೆಕ್ಟರ್ ಮತ್ತು ಅದರ ಅಧ್ಯಕ್ಷರು ಒಳಗೊಂಡಂತೆ ಎಲ್ಲರೂ ಇದಕ್ಕೆ ಶಾಮೀಲಾಗಿದ್ದಾರೆ ಅಲ್ಲಿರತಕ್ಕಂಥ ಡೈರೆಕ್ಟರ್‌ಗಳು ಮಾಲನ್ನೇ ಇಡದೆ ಅಡ್ವಾನ್ಸ್ ತೆಗೆದುಕೊಂಡಿರುವ ನಿದರ್ಶನಗಳಿವೆ ಜೊತೆಗೆ ಅನೇಕ ಜನರು ತಮ್ಮ ನೂಲನ್ನು ಅಲ್ಲಿ ಪ್ಲೆಡ್ಜ್ ಮಾಡದೇ ಅಲ್ಲಿಯ ಅಧ್ಯಕ್ಷರ ಮತ್ತು ಮೇನೇಜಿಂಗ್ ಡೈರೆಕ್ಟರ್ ಅವರ ಫ್ಯಾಮಿಲಿಯಿಂದಾಗಿ ದುಡ್ಡು ತೆಗೆದುಕೊಂಡ ನಿದರ್ಶನಗಳೂ ಇವೆ ಫಿಲೇಚರ್ಸ್ ರೇಷ್ಮೆಯನ್ನು ಫೆಡರೇಷನ್‌ಗೆ ಕೊಡಬೇಕೆಂದು ಸರ್ಕಾರದವರು ಗೊತ್ತುಮಾಡಿರುವುದರಿಂದ ಅಲ್ಲಿ ಈಗ ಒಂದು ಲಕ್ಷ ಚಿಲ್ಲರೆ ಕೆ.ಜಿ.ಯಷ್ಟು ಇಟ್ಟುಕೊಂಡಿದ್ದಾರೆ ಇದರಿಂದ ರೇಷ್ಮೆ ಗೂಡಿನ ಧಾರಣೆ ಇಳಿದಿವೆ. ಒಟ್ಟಿನಲ್ಲಿ ಕೋಟ್ಯಾಂತರ ರೂಗಳ ನಷ್ಟಕ್ಕೆ ಈ ಫೆಡರೇಷನ್ ಕಾರಣವಾಗಿದೆ ಎಂದು ಹೇಳಿದರೆ ಅದು ತಪ್ಪು ಮಾತಾಗಲಾರದೆಂದು ಹೇಳುತ್ತೇನೆ. ಈ ಒಂದು ಫೆಡರೇಷನ್ ಆಡಳಿತ ಯಾವ ರೀತಿ ನಡೆದಿದೆ ಎಂಬುದನ್ನು ತಿಳಿದುಕೊಳ್ಳಲು ಮೊದಲು ಆಡಿಟ್ ಮಾಡಿಸಬೇಕು. ಆಗ ಅಲ್ಲಿ ಏನು ಅನ್ಯಾಯ, ಅಕ್ರಮ ಮತ್ತು ಅವ್ಯವಹಾರ ನಡೆದಿದೆ ಎಂಬುದು ತಿಳಿಯುತ್ತದೆ. ಮತ್ತು ಎಷ್ಟು ನಷ್ಟವಾಗಿದೆ ಎಂಬುದು ಸಹ ತಿಳಿಯುತ್ತದೆ. ನಂತರ ಎರಡು ವರ್ಷಗಳ ಕಾಲ ಅದನ್ನು ಸರ್ಕಾರದವರೇ ವಹಿಸಿಕೊಂಡು ಅಲ್ಲಿಗೆ ಪ್ರಾಮಾಣಿಕರಾಗಿ ಮತ್ತು ದಕ್ಷತೆಯಿಂದ ಕೆಲಸ ಮಾಡತಕ್ಕಂಥ ತಜ್ಞ ಅಧಿಕಾರಿ ಒಬ್ಬರನ್ನು ನೇಮಕ ಮಾಡುವುದರ ಮೂಲಕ ಅದು ಚೆನ್ನಾಗಿ ನಡೆಯುವಂತೆ ಏರ್ಪಾಡು ಮಾಡಬೇಕೆಂದು ಹೇಳುತ್ತೇನೆ ನೂಲನ್ನು

ಮಾರಾಟ ಮಾಡುವವರ ಹಿತದೃಷ್ಟಿಯಿಂದ ಮತ್ತು ಗೂಡುಗಳನ್ನು ಬೆಳೆಯುವವರ ಹಿತದೃಷ್ಟಿಯಿಂದ ಈ ಒಂದು ಕಾರ್ಯ ಕ್ರಮವನ್ನು ಕೈಕೊಳ್ಳಬೇಕೆಂದು ಹೇಳುತ್ತೇನೆ. ಇದು ಸಹಕಾರ ಮಂತ್ರಿಗಳ ಇಲಾಖೆಗೆ ಸೇರಿದ ಕಾರಣ ಅವರು ಈ ಒಂದು ಕ್ರಮ ಕೈಕೊಳ್ಳಬೇಕೆಂದು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ;

ಇನ್ನು ರೇಷ್ಮೆ ನೂಲನ್ನು ಮಾರಾಟ ಮಾಡಲು ರೆಗ್ಯುಲೇಟೆಡ್ ಮಾರ್ಕೆಟ್ ತೆರೆಯಬೇಕೆಂದು ನಾವು ಸರ್ಕಾರದಲ್ಲಿ ಅನೇಕ ಸಂದರ್ಭದಲ್ಲಿ ಮನವಿ ಮಾಡಿಕೊಂಡಿದ್ದೇವೆ. ಸರ್ಕಾರದವರು ಇದನ್ನು ಪರಿಶೀಲನೆ ಮಾಡುತ್ತೇವೆಂದು ಹತ್ತಾರು ಸಲ ಭರವಸೆ ಕೊಟ್ಟಿದ್ದರೂ ಸಹ ಅದನ್ನು ತೆರೆಯಲು ಏನು ತೊಂದರೆ ಇದೆ ಎಂಬುದು ನಮಗೆ ಅರ್ಥವಾಗುತ್ತಿಲ್ಲ. ಇದನ್ನು ಸ್ವಲ್ಪ ಸುಲಭವಾಗಿ ಬಿಡಿಸುವುದಕ್ಕೆ ಮೊದಲನೆಯ ಹಂತವಾಗಿ ರಾ-ಮೆಟೀರಿಯಲ್ ಬ್ಯಾಂಕ್‌ನ್ನು ಸ್ಥಾಪನೆ ಮಾಡಬೇಕೆಂದು ಕೇಂದ್ರ ರೇಷ್ಮೆ ಮಂಡಲಿಯವರು ಸಲಹೆ ಮಾಡಿದ ಮೇಲೆ, ಅವರ ಸಲಹೆಯನ್ನು ರಾಜ್ಯ ಸರ್ಕಾರದವರು ಒಪ್ಪಿದರೂ ಸಹ ಇಲ್ಲಿಯವರೆಗೆ ಅದು ಅಸ್ತಿತ್ವದಲ್ಲಿ ಬಂದಿಲ್ಲ. ಇದನ್ನು ಪ್ರಾರಂಭ ಮಾಡಲು ಸರ್ಕಾರದವರು ಏತಕ್ಕೆ ಹಿಂದುಮುಂದು ನೋಡುತ್ತಾರೆಂಬುದು ನನಗೆ ಅರ್ಥವಾಗುತ್ತಿಲ್ಲ. ಮಾನ್ಯ ರೇಷ್ಮೆ ಇಲಾಖೆಯ ಮಂತ್ರಿಗಳು ರಾ ಮೆಟೀರಿಯಲ್ ಬ್ಯಾಂಕ್‌ನ್ನು ಕೂಡಲೇ ಸ್ಥಾಪನೆ ಮಾಡಬೇಕೆಂದು ಕೇಳಿಕೊಳ್ಳುವುದರ ಜೊತೆಗೆ, ಈಗ ರೇಷ್ಮೆ ಕೈಗಾರಿಕೆಗೆ ಸಂಬಂಧಪಟ್ಟಂತೆ ಸಿಲ್ಕ್ ಮಾರ್ಕೆಟಿಂಗ್ ಫೆಡರೇಷನ್ ಏನಿದೆ, ಅದನ್ನು ದಯ ಮಾಡಿ ಸೂಪರ್‌ಸೀಡ್ ಮಾಡಿ ಸರ್ಕಾರದವರೇ ಅದನ್ನು ವಹಿಸಿಕೊಂಡು, ಎರಡು ವರ್ಷಗಳ ಕಾಲ ಅಲ್ಲಿಗೆ ಒಳ್ಳೆಯ ಅಧಿಕಾರಿಯೊಬ್ಬರನ್ನು ನೇಮಕ ಮಾಡಿ ಅದು ಎಲ್ಲರಿಗೂ ಅನುಕೂಲವಾಗುವಂತಹ ರೀತಿಯಲ್ಲಿ ಕೆಲಸ ಮಾಡುವಂತೆ ಏರ್ಪಾಡು ಮಾಡಬೇಕೆಂದು ಪ್ರಾರ್ಥನೆ ಮಾಡಿಕೊಂಡು, ನನಗೆ ಇಷ್ಟು ಮಾತನಾಡಲು ಅವಕಾಶ ಕೊಟ್ಟ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಎಂ.ಎಸ್. ಕೃಷ್ಣನ್ (ಮಲ್ಲೇಶ್ವರಂ).—ಸನ್ಮಾನ್ಯ ಅಧ್ಯಕ್ಷರೇ, ಕೈಗಾರಿಕೆಗಳ ಬಗ್ಗೆ ಇಟ್ಟಿರತಕ್ಕಂಥ ಬೇಡಿಕೆಗಳನ್ನು ನಾನು ವಿರೋಧಮಾಡುತ್ತಾ ಒಂದೆರಡು ಮಾತುಗಳನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ. ಮುಖ್ಯವಾಗಿ ನಮ್ಮ ದೇಶದಲ್ಲಿ ಕೈಗಾರಿಕಾಕರಣವಾಗಬೇಕು, ಈ ದಿಶೆಯಲ್ಲಿ ಹೆಚ್ಚುಹೆಚ್ಚು ಉದ್ಯಮಗಳು ಬೆಳೆದುಬರಬೇಕೆಂಬ ಅಭಿಪ್ರಾಯವನ್ನು ನಾವೆಲ್ಲರೂ ಹೊಂದಿದ್ದೇವೆ ಮತ್ತು ಇದರ ಆಧಾರದ ಮೇಲೆಯೇ ನಮ್ಮ ಕೈಗಾರಿಕಾ ಇಲಾಖೆ ಕೆಲಸ ಮಾಡುತ್ತಾ ಬಂದಿದೆ. ಬೇರೆ ದೇಶಗಳಲ್ಲಿ ಕೈಗಾರಿಕೆಗಳು ಮುಂದುವರೆದಂತೆ ನಮ್ಮ ದೇಶದಲ್ಲಿ ಇನ್ನು ಮುಂದುವರೆದಿಲ್ಲ. ನಮ್ಮದು ಈ ದಿಶೆಯಲ್ಲಿ ಇನ್ನೂ ಅಭಿವೃದ್ಧಿ ಹೊಂದುತ್ತಿರುವ ದೇಶವಾಗಿದೆ. ಆದ್ದರಿಂದ ನಾವು ಕೈಗಾರಿಕೆಗಳಿಗೆ ಅತಿ ಹೆಚ್ಚಿನ ಮಹತ್ವ ಕೊಡಬೇಕಾಗಿದೆ. ಈ ದಿಶೆಯಲ್ಲಿ ಕೈಗಾರಿಕೆಗಳನ್ನು ಬೆಳೆಸುವುದರ ಬಗ್ಗೆ ಯಾವ ಧೋರಣೆ ಇರಬೇಕೆಂಬುದರ ಬಗ್ಗೆ ಸ್ಪಷ್ಟತೆ ಇರಬೇಕೆಂದು ನನಗನ್ನಿಸುತ್ತದೆ ಆದರೆ ಈಗಿನ ಒಂದು ರಾಜಕೀಯ ಸನ್ನಿವೇಶವನ್ನು ನೋಡಿದಾಗ, ಕೇಂದ್ರದಲ್ಲಿ ಒಂದು ಸರ್ಕಾರವಿದ್ದರೆ, ರಾಜ್ಯದಲ್ಲಿಯೇ ಒಂದು ಸರ್ಕಾರವಿದೆ ಕೇಂದ್ರದಲ್ಲಿ ಬೇರೆ ಸರ್ಕಾರವಿರುವಾಗ ಅದರ ಒಂದು ನೀತಿಗನುಗುಣವಾಗಿ ನಮ್ಮ ಸರ್ಕಾರ ನಡೆದುಕೊಳ್ಳಬೇಕೆ ಅಥವಾ ಭಿನ್ನ ನೀತಿಯನ್ನು ಅನುಸರಿಸಬೇಕೇ ಎಂಬ ಪ್ರಶ್ನೆ ಈಗ ಉದ್ಭವವಾಗುತ್ತದೆ ಆದ್ದರಿಂದ ಈ ಬಗ್ಗೆ ನಮ್ಮ ಮುಖ್ಯ ಮಂತ್ರಿಗಳು ಸ್ಪಷ್ಟೀಕರಣ ಕೊಡುತ್ತಾರೆಂದು ನಾನು ನಂಬಿದ್ದೇನೆ. ಏಕೆಂದರೆ ಇದು ಬಹಳ ಮಹತ್ವದ ವಿಚಾರ. ಈಗ ಕೇಂದ್ರ ಸರ್ಕಾರದವರು ಗ್ರಾಮಾಂತರ ಪ್ರದೇಶಗಳಲ್ಲಿ ಕೈಗಾರಿಕೆಗಳು ಹೆಚ್ಚು ಬರಬೇಕು, ಗುಡಿ ಕೈಗಾರಿಕೆಗಳು ಹೆಚ್ಚು ಬರಬೇಕು ಇದಕ್ಕೆ ಹೆಚ್ಚಿನ ಆದ್ಯತೆ ಕೊಡಬೇಕೆಂಬ ಅಭಿಪ್ರಾಯವನ್ನು ಹೊಂದಿದ್ದಾರೆ. ಇವುಗಳ ಜೊತೆಗೆ ದೊಡ್ಡದೊಡ್ಡ ಕೈಗಾರಿಕೆಗಳನ್ನು ಅದರಲ್ಲಿಯೂ ಮುಖ್ಯವಾಗಿ ಸಾರ್ವಜನಿಕ ಕ್ಷೇತ್ರದಲ್ಲಿರತಕ್ಕಂಥ ಕೈಗಾರಿಕೆಗಳನ್ನು ಬೆಳೆಸತಕ್ಕಂಥ ಮತ್ತು ಅವುಗಳನ್ನು ವಿಸ್ತರಣೆ ಮಾಡತಕ್ಕಂಥ ಪ್ರಮೇಯವಿಲ್ಲವೆಂದು ಅವರು ಸ್ಪಷ್ಟವಾಗಿ ಹೇಳಿದ್ದಾರೆ. ಮತ್ತು ದೊಡ್ಡದೊಡ್ಡ ಕೈಗಾರಿಕೆಗಳು ಸಹ ಬೆಳೆಯಬಾರದು, ಈ ಬಗ್ಗೆ ಯೋಚನೆ ಮಾಡಬೇಕಾಗಿದೆ ಎಂದು ಅವರು ಹೇಳಿದ್ದಾರೆ. ಇದರ ಬಗ್ಗೆ ನಮ್ಮ ಸರ್ಕಾರದ ಸ್ಪಷ್ಟೀಕರಣವೇನು ಎಂಬುದನ್ನು ತಿಳಿಸಿಲ್ಲ. ಈ ಮೊದಲು ಕೇಂದ್ರದಲ್ಲಿ ಮತ್ತು ರಾಜ್ಯದಲ್ಲಿ ಒಂದೇರೀತಿಯ ಸರ್ಕಾರಗಳಿದ್ದವು. ಆದರೆ ಈಗ ಸರ್ಕಾರಗಳು ಬದಲಾಗಿರುವುದರಿಂದ ಮತ್ತು ಕೈಗಾರಿಕೆಯ ಬಗ್ಗೆ ಈಗಿನ ಕೇಂದ್ರದ ಧೋರಣೆ ಬದಲಾವಣೆ

ಯಾಗಿರುವುದರಿಂದ ಅದರ ಒಂದು ಪ್ರಭಾವ ನಮ್ಮ ಸರ್ಕಾರದ ಮೇಲೆ ಇರಬೇಕಾಗುತ್ತದೆ. ಆದಕಾರಣ ಈ ಪ್ರಭಾವ ಎಷ್ಟು ದೂರ ಇರಬೇಕಾಗುತ್ತದೆಂಬುದನ್ನು ಯೋಚನೆ ಮಾಡುವ ಸನ್ನಿವೇಶ ಈಗ ಬಂದಿದೆ. ಈಗ ನಮ್ಮ ರಾಜ್ಯದಲ್ಲಿ ಅನೇಕ ಕೈಗಾರಿಕೆಗಳು ಸಾರ್ವಜನಿಕ ಕ್ಷೇತ್ರದಲ್ಲಿವೆ. ಸರ್. ಎಂ ವಿಶ್ವೇಶ್ವರಯ್ಯನವರ ಕಾಲದಿಂದಲೇ ಸಾರ್ವಜನಿಕ ಕ್ಷೇತ್ರದಲ್ಲಿ ಸ್ಟೀಲ್ ಕಂಪನಿ, ಸೆಂಟ್ರಲ್ ಮೆಷಿನ್ ವರ್ಕ್‌ಷಾಪ್, ಈಗ ಕಮ್ಮಿ ಇಂಪ್ಲಿಮೆಂಟ್ಸ್ ಫ್ಯಾಕ್ಟರಿ, ಸೋಪ್ ಫ್ಯಾಕ್ಟರಿ ಮುಂತಾದವುಗಳು ಬೆಳೆದುಕೊಂಡು ಬಂದಿವೆ. ಇವುಗಳನ್ನು ವಿಸ್ತರಣೆ ಮಾಡಬೇಕಾಗಿಲ್ಲ. ಅವುಗಳನ್ನು ಅದೇ ಮಟ್ಟದಲ್ಲಿಡೋಣ. ನಮ್ಮ ಗಮನವನ್ನು ಬೇರೆ ಕಡೆಗೆ ಹರಿಸೋಣವೆಂದು ಕೇಂದ್ರದವರು ಹೇಳಿದ್ದಾರೆ. ಆದರೆ ದೊಡ್ಡ ದೊಡ್ಡ ಕೈಗಾರಿಕೆಗಳನ್ನು ಬೆಳೆಸದಿದ್ದರೆ ನಮ್ಮ ರಾಜ್ಯದ ಸಂಪತ್ತನ್ನು ಬೆಳೆಸುವುದಕ್ಕೆ ತಡೆಯಾಗುವುದಿಲ್ಲವೇ ಎಂಬತಕ್ಕಂಥ ವಿಷಯ ಬಹಳ ಮುಖ್ಯವಾದುದು ಮತ್ತು ಚರ್ಚಾಸ್ಪದವಾದಂಥ ವಿಚಾರವಾಗಿದೆ. ಕೇಂದ್ರದ ಬಗ್ಗೆ ಟೀಕೆ ಮಾಡಬೇಕೆಂಬುದಾಗಿ ನಾನು ಈ ವಿಚಾರವನ್ನು ಹೇಳುತ್ತಿಲ್ಲ. ಆದರೆ ಇದನ್ನು ಆಳವಾಗಿ ಯೋಚನೆ ಮಾಡಬೇಕಾಗಿದೆ ಎಂದು ಹೇಳುತ್ತೇನೆ. ದೊಡ್ಡ ಕೈಗಾರಿಕೆಗಳನ್ನು ಬೆಳೆಸಬೇಕಾಗಿಲ್ಲವೆಂದು ಕೇಂದ್ರದವರು ಸ್ಪಷ್ಟವಾಗಿ ಹೇಳಿದ್ದಾರೆ. ಮತ್ತು ಮುರಾರ್ಜಿದೇಸಾಯಿ ಅವರು ಸಾರ್ವಜನಿಕ ಕ್ಷೇತ್ರ ಮತ್ತು ಖಾಸಗೀ ಕ್ಷೇತ್ರದಲ್ಲಿರತಕ್ಕಂಥ ಕೈಗಾರಿಕೆಗಳೆಲ್ಲವನ್ನೂ ಒಂದೇ ರೀತಿಯಲ್ಲಿ ನೋಡಬೇಕೆಂದು ಹೇಳಿದ್ದಾರೆ. ಆದರೆ ದಿವಂಗತ ನೆಹರೂ ಅವರು ಸಾರ್ವಜನಿಕ ಕ್ಷೇತ್ರದಲ್ಲಿರತಕ್ಕಂಥ ಕೈಗಾರಿಕೆಗಳಿಗೆ ಹೆಚ್ಚಿನ ಮಹತ್ವ ಕೊಡಬೇಕೆಂದು ಮತ್ತು ಇದರಿಂದ ದೇಶದ ಆರ್ಥಿಕ ಬೆಳವಣಿಗೆ ಜಾಸ್ತಿಯಾಗುತ್ತದೆಂದು ಹೇಳಿದ್ದರು. ಅಂದರೆ ನಾನು ಸಣ್ಣಸಣ್ಣ ಕೈಗಾರಿಕೆಗಳು ಗ್ರಾಮಾಂತರ ಪ್ರದೇಶಗಳಲ್ಲಿ ಬರಬಾರದೆಂದು ನಾನು ಹೇಳುವುದಿಲ್ಲ. ಆದರೆ ಅವುಗಳಿಗೆ ತಳಹದಿಯಾಗಿ ದೊಡ್ಡದೊಡ್ಡ ಕೈಗಾರಿಕೆಗಳಿರಬೇಕಾಗುತ್ತದೆ. ಇವುಗಳಿಲ್ಲದೆ ಗುಡಿ ಕೈಗಾರಿಕೆಗಳನ್ನು ಬೆಳೆಸಲು ಸಾಧ್ಯವಿಲ್ಲ ಮತ್ತು ನಮ್ಮ ಮುಂದುವರೆಯುವುದಕ್ಕೂ ಸಾಧ್ಯವಿಲ್ಲವೆಂದು ಹೇಳುತ್ತೇನೆ. ಎಲ್ಲ ಸಂದರ್ಭಗಳಲ್ಲಿಯೂ ಜನತಾ ಪಾರ್ಟಿಯವರೇ ಆಗಲೀ, ಕಾಂಗ್ರೆಸ್ ಪಾರ್ಟಿಯವರೇ ಆಗಲೀ, ಮಹಾತ್ಮಾ ಗಾಂಧೀಜಿಯವರು ಏನು ಅಭಿಪ್ರಾಯ ಪಟ್ಟಿದ್ದಾರೆಂಬುದನ್ನು ಉದಾಹರಣೆ ಕೊಟ್ಟು ಹೇಳುತ್ತಾರೆ. ಅದರಂತೆ ಮಹಾತ್ಮಾಗಾಂಧಿಯವರು ಈ ಬಗ್ಗೆ ಏನು ಹೇಳಿದ್ದಾರೆಂಬುದನ್ನು ನಾವು ಗಮನಿಸಬೇಕಾಗಿದೆ. ಅದು ಈರೀತಿ ಇದೆ:

"(From A. T./Hiyoranis' (edited by); M. K. Gandhi "Solution of my Conception") (page 87)

"Making clear that he was aiming "not at eradication of all machinery but only limitation". and citing the example of the Sewing machine as an instance of an "intelligent exception" to his rule against machinery, Gandhi conceded that such things like the Sewing machine would have to be manufactured in factories, run on power driven machinery.

Thus while envisaging communal or State ownership of land in the villages, use of ploughs and improved ploughs but not tractors in cultivation, and village needs being met by village industries, Gandhi conceded the need for certain types of industries. "If I can convert the country to my point of view, the social order of the future will be based predominantly on the Charkha, and all it implies. It will include everything that promotes the well-being of the villagers, It will not exclude the industries, mentioned by my correspondent, so long as they do not mothers the villagers and village life. I do visualise Electricity, Ship building, Iron works, machine making

and the like existing side by side with village handicrafts ...... in the State of the future (industrialisation) will subserve the villages and their crafts''.

Such industries Gandhi envisaged, should be in the State sector. "But I am socialist enough to say that such factories should be nationalised or State controlled. They ought only to be working under the most attractive and ideal conditions, not for profit, but for the benefit of humanity, love taking the place of greed as the motive''.

Elsewhere he said "Heavy industries will need to be centralised and nationalised. But they will occupy the least part of the vast national activity, which will mainly be in villages''

(Quotation from Hiyoranis' edited book by M. K. Gandhi pages 99 and 134)

ನಾನು ಇದನ್ನು ಏತಕ್ಕೆ ಹೇಳುತ್ತಿದ್ದೇನೆ ಎಂದರೆ ಕೇಂದ್ರದಲ್ಲೂ ಇದೇ ಧೋರಣೆ ಇರಬೇಕೆಂದು ಮಹಾತ್ಮಾಗಾಂಧೀಜಿಯವರು ಹೇಳಿದ್ದಾರೆ. ಆದ್ದರಿಂದ ಇದನ್ನು ಜಾರಿಗೆ ತಂದರೆ ಸಾಧ್ಯವಾಗುತ್ತದೆಯೇ ಎಂಬುದನ್ನು ಯೋಚನೆ ಮಾಡಬೇಕು. ನಮ್ಮದೇಶದಲ್ಲಿ ಕೈಗಾರಿಕಾ ಧೋರಣೆಯ ಬಗ್ಗೆ ಪಂಡಿತ್ ಜವಾಹಿರ್‌ಲಾಲ್ ನೆಹರೂ ಅವರು ಹೇಳಿದ ಹಾಗೆ ಬೆಳೆಯಬೇಕು ಎಂದರೆ ಪಬ್ಲಿಕ್ ಸೆಕ್ಟಾರ್‌ನಲ್ಲಿ ಗ್ರಾಮ ಕೈಗಾರಿಕೆಗಳು ಬೆಳೆಯುವುದಕ್ಕೆ ವಿರೋಧವಾಗುವುದಿಲ್ಲವೇ ? ಆ ರೀತಿ ಅದು ವಿರೋಧವಾದರೆ ನಮ್ಮ ದೇಶದ ರಾಜ್ಯದ ಸಂಪತ್ತು ರಾಷ್ಟ್ರೀಯ ಸಂಪತ್ತು ಜಾಸ್ತಿ ಮಾಡುವುದಕ್ಕೆ ವಿಲೇಜ್ ಇಂಡಸ್ಟ್ರಿ ಬೆಳೆಸುವುದಕ್ಕೆ ಸಾಧ್ಯವಾಗಲಾರದು. ಈ ಕೈಗಾರಿಕೆಯ ಧೋರಣೆ ಯಾವರೀತಿ ಇರಬೇಕು, ಎಂಬುದನ್ನು ಈಗಾಗಲೇ ಬಾಕಿ ರಾಜ್ಯ ಸರ್ಕಾರಗಳು ಯೋಚನೆ ಮಾಡುತ್ತಿದ್ದಾರೆಯೋ ಏನೋ ಗೊತ್ತಿಲ್ಲ. ನಿನ್ನೆದಿವಸ ಕೇಂದ್ರ ಸರ್ಕಾರದವರು ಏನು ಹೇಳಿದ್ದಾರೆ ಎಂದರೆ ಸಾರ್ವಜನಿಕ ಕ್ಷೇತ್ರದಲ್ಲಿರತಕ್ಕ ಕೈಗಾರಿಕೆಗಳಿಗೆ ಪ್ರೈಜ್ ಪ್ರಿಫರೆನ್ಸ್ ಕೊಡುವುದಿಲ್ಲ ಎನ್ನುವ ನೀತಿಯನ್ನು ನಿರೂಪಣೆಮಾಡಿದ್ದಾರೆ. ಈಗ ರೆಂಕೋ ಫ್ಯಾಕ್ಟರಿಯಲ್ಲಿ ಎಲೆಕ್ಟ್ರಿಕ್ ಮೋಟರುಗಳನ್ನು ತಯಾರು ಮಾಡುತ್ತಿದ್ದಾರೆ. ವಾಟರ್ ಮೀಟರುಗಳನ್ನು ತಯಾರು ಮಾಡುತ್ತಿದ್ದಾರೆ. ಕೆಪಾಸಿಟರ್‌ಗಳನ್ನು ತಯಾರು ಮಾಡುತ್ತಿದ್ದಾರೆ. ಇದನ್ನು 10 ಪರ್ಸೆಂಟ್ ಪ್ರೈಜ್ ಜಾಸ್ತಿಯಾದರೂ ಕೂಡ ಸಾರ್ವಜನಿಕ ಕ್ಷೇತ್ರದಲ್ಲಿ ಫ್ಯಾಕ್ಟರಿಗಳಿಗೆ ಧೃತಿ ಕೊಡಬೇಕೆಂದು ಇದುವರೆಗೂ ಹೇಳಿದ್ದಾರೆ. ಇದರಿಂದ ಏನಾಗಿದೆ ಎಂದರೆ ಸಾರ್ವಜನಿಕ ಕ್ಷೇತ್ರದ ಕೈಗಾರಿಕೆಗಳ ಗುರಿಯೇ ಬೇರೆ ಖಾಸಗೀ ಕ್ಷೇತ್ರದ ಕೈಗಾರಿಕೆಗಳ ಗುರಿಯೇ ಬೇರೆಯಾಗಿದೆ ಖಾಸಗೀ ಕ್ಷೇತ್ರದವರು ತಮ್ಮಲ್ಲಿ ತಯಾರಾದ ವಸ್ತುಗಳನ್ನು ಕಡಿಮೆ ಬೆಲೆಗೆ ಕೊಡುತ್ತಿದ್ದಾರೆ. ಈಗ ಬಿರ್ಲಾ ಕಂಪೆನಿಯವರು ರೆಂಕೋ ಕೈಗಾರಿಕೆಯನ್ನು ಮುಳುಗಿಸಬೇಕೆಂದು ತಮ್ಮಲ್ಲಿ ತಯಾರಾದ ಸಾಮಾನುಗಳನ್ನು ಕಡಿಮೆ ಬೆಲೆಗೆ ಮಾರಾಟ ಮಾಡಿದ್ದಾರೆ. ಪ್ರೈಜ್ ಪ್ರಿಫರೆನ್ಸ್ ಇದ್ದುದರಿಂದ ರೆಂಕೋ ಫ್ಯಾಕ್ಟರಿಯನ್ನು ಉಳಿಸಿಕೊಳ್ಳಲಾಯಿತು. ಇಲ್ಲದೇ ಇದ್ದರೆ ರೆಂಕೋ ಫ್ಯಾಕ್ಟರಿಯು ಉಳಿಯುತ್ತಿತ್ತೇ ? ಬೇರೆ ಕೈಗಾರಿಕೆಗಳು ಉಳಿಯುತ್ತಿದ್ದುವೇ? ಕಾಸ್ಟ್ ಆಫ್ ಪ್ರೊಡಕ್ಷನ್ ಕಡಿಮೆಮಾಡಕೂಡದು ಕಾಂಪಿಟೇಷನ್ ಇರಕೂಡದು ಎಂದು ನಾನು ಹೇಳುವುದಿಲ್ಲ. ಅದು ಇರಬೇಕಾಗುತ್ತದೆ. ಆದರೆ ದಕ್ಷತೆಯಿಂದ ಕೆಲಸ ಮಾಡಿ ಕಾಸ್ಟ್ ಆಫ್ ಪ್ರೊಡಕ್ಷನ್ ಕಡಿಮೆ ಮಾಡಬೇಕು ಅದನ್ನು ಕಡಿಮೆ ಮಾಡಿದರೂ ಕೂಡ ದೊಡ್ಡ ದೊಡ್ಡ ಗುತ್ತೇದಾರರು ಬೆಲೆಗಳನ್ನು ಏಕ್‌ದಂ ಕಡಿಮೆ ಮಾಡಿ ಸಾರ್ವಜನಿಕ ಕ್ಷೇತ್ರದ ಕೈಗಾರಿಕೆಗಳನ್ನು ಮುಳುಗಿಸುವುದಕ್ಕೆ ಸಾಧ್ಯವಿದೆ. ಈಗ ಬಿರ್ಲಾರವರು ಬೆಲೆಗಳನ್ನು ಕಡಿಮೆ ಮಾಡಿದರೂ ಕೂಡ ರೆಂಕೋ ಫ್ಯಾಕ್ಟರಿಯನ್ನು ಮುಳುಗಿಸುವುದಕ್ಕೆ ಸಾಧ್ಯವಾಗಲಿಲ್ಲ. ಏತಕ್ಕೆಂದರೆ ಒಂದೆಡೆ ಪ್ರೈಸ್ ಪ್ರಿಫರೆನ್ಸ್ ಇದ್ದದ್ದರಿಂದ ಮತ್ತು ಇನ್ನೊಂದೆಡೆ ಇದನ್ನು ಬಿ.ಎಚ್.ಇ.ಎಲ್‌ಗೆ ಸೇರಿಸಿದ್ದರಿಂದ.

ಕೈಗಾರಿಕಾ ಪಾಲಸಿಯಲ್ಲಿ ಕೇಂದ್ರ ಸರ್ಕಾರ ಮತ್ತು ರಾಜ್ಯ ಸರ್ಕಾರಗಳಿಗೆ ಸ್ಪಷ್ಟತೆ ಇರಬೇಕು. ಸಾರ್ವಜನಿಕ ಕ್ಷೇತ್ರದ ಕೈಗಾರಿಕೆಗಳ ಬಗ್ಗೆ ನೀತಿಯನ್ನು ಸ್ಪಷ್ಟವಾಗಿ ಹೇಳಬೇಕು. ಆ ನೀತಿಯನ್ನು ರಾಜ್ಯ ಸರ್ಕಾರ ಆದರಿಸಬೇಕು. ದಕ್ಷತೆಯನ್ನು ಹೆಚ್ಚು ಮಾಡಬೇಡಿ ಎಂದು ನಾನು ಹೇಳುವುದಿಲ್ಲ. ಈಗ ದಕ್ಷತೆ ಜಾಸ್ತಿಯಾಗಿದೆ. ಸಾರ್ವಜನಿಕ ಕ್ಷೇತ್ರದ ಕೈಗಾರಿಕೆಯಲ್ಲಿ ಒಂದು ಸರಿಯಾದ ನೀತಿ ನಿರೂಪಣೆ ಮಾಡಿಕೊಂಡು ಕೈಗಾರಿಕಾಭಿವೃದ್ಧಿ ಪ್ರಧಾನವಾಗಿ ಆಗಬೇಕು. ಜೊತೆಗೆ ಬೇರೆ ಬೇರೆ ಕೈಗಾರಿಕೆಗಳನ್ನು ಬೆಳೆಸುವುದಕ್ಕೆ ಸರ್ಕಾರ ಒಂದು ಸರಿಯಾದ ಧೋರಣೆಯನ್ನು ತಾಳಬೇಕಾಗುತ್ತದೆ. ಮತ್ತು ಈ ವಿಷಯದಲ್ಲಿ ಕೇಂದ್ರಸರ್ಕಾರದ ಮೇಲೆ ಒತ್ತಾಯವನ್ನು ತರಬೇಕಾಗುತ್ತದೆ. ನಮ್ಮ ರಾಜ್ಯದ ಕೈಗಾರಿಕೆಗಳ ಬಗ್ಗೆ ಶ್ರೀಮಾನ್ ಪುಟ್ಟಸ್ವಾಮಿಯವರು ಬಹಳ ದೀರ್ಘವಾಗಿ ವಿಶ್ಲೇಷಣೆ ಮಾಡಿದ್ದಾರೆ. ನಾನು ನಹ ಪಬ್ಲಿಕ್ ಅಂಡರಟೇಕಿಂಗ್ಸ್ ಕಮಿಟಿಯಲ್ಲಿ ಸದಸ್ಯನಾಗಿದ್ದೇನೆ. ಆ ಕಮಿಟಿಯಲ್ಲಿ ನಾನು ಅನೇಕ ವಿಚಾರಗಳನ್ನು ಹೇಳಿದ್ದೇನೆ. ನಾನು ಒಂದು ವಿಷಯವನ್ನು ಹೇಳುತ್ತೇನೆ. ರಾಜ್ಯ ಸರ್ಕಾರದವರು ಎಲ್ಲಾ ಕೈಗಾರಿಕೆಗಳ ವಿಷಯದಲ್ಲಿಯೂ ಕೊಟ್ಟಿರುವ ವರದಿಯ ಆಧಾರದ ಮೇಲೆ ಕೆಲವು ವಿಚಾರಗಳನ್ನು ಶ್ರೀಮಾನ್ ಕೆ. ಪುಟ್ಟಸ್ವಾಮಿಯವರು ಹೇಳಿದ್ದಾರೆ. ಅವರು ಈ ರಿಪೋರ್ಟಿನ ಆಧಾರದ ಮೇಲೆ ಮುಕ್ಕಾಲು ಭಾಗ ಕೈಗಾರಿಕೆಗಳು ಸರಿಯಾಗಿ ನಡೆಯುವುದಿಲ್ಲ ಎಂದು ಹೇಳಿದ್ದಾರೆ. ಆದರೆ ನಷ್ಟ ಸ್ವಲ್ಪ ಕಡಿಮೆಯಾಗಿದೆ ಎಂದು ಹೇಳಿದ್ದಾರೆ. ಕೈಗಾರಿಕೆಗಳು ವೇಗವಾಗಿ ಮುಂದುವರಿಯುತ್ತಿರುವ ವೇಗ, ಮುಂದುವರಿಯುವ ಧೋರಣೆ ತಾಳುತ್ತಾ ಇಲ್ಲ. ಸರ್ಕಾರದವರು ನಮಗೆ ಕೊಟ್ಟಿರತಕ್ಕ ವರದಿಯಲ್ಲಿ ವಿಶ್ವೇಶ್ವರಯ್ಯ ಐರನ್ ಅಂಡ್ ಸ್ಟೀಲ್ ಫ್ಯಾಕ್ಟರಿ ಬಗ್ಗೆ ಏನು ಹೇಳಿದ್ದಾರೆ ಎಂದರೆ. The balance of accumlated losses of the Company to the end of 31st March 1976 was Rs. 190.93 lakhs as against Rs. 350.17 lakhs as at 31st March 1975 ಎಂದು ಹೇಳಿದ್ದಾರೆ. ಈ ಸಂದರ್ಭದಲ್ಲಿ ಪಬ್ಲಿಕ್ ಅಂಡರ್ ಟೇಕಿಂಗ್ ಕಮಿಟಿಯವರು, ಎಸ್ಟಿಮೇಟ್ ಕಮಿಟಿಯವರು ಕೆಲವು ಸಿಫಾರಸ್ಸುಗಳನ್ನು ಐರನ್ ಅಂಡ್ ಸ್ಟೀಲ್ ಪ್ರೊಡಕ್ಷನ್ ಬಗ್ಗೆ ಮಾಡಿದ್ದಾರೆ. ಶ್ರೀಮಾನ್ ಘೋರ್ಪಡೆಯವರು ಎಸ್ಟಿಮೇಟ್ ಕಮಿಟಿಯ ಚೇರ್ಮನ್ ಆಗಿದ್ದಾಗಲೂ ಕೂಡ ಕೆಲವು ಬಹಳ ಮುಖ್ಯವಾದ ಶಿಫಾರಸ್ಸುಗಳನ್ನು ಮಾಡಿದ್ದಾರೆ. ಆದರೆ ಅವುಗಳನ್ನು ಇದುವರೆಗೂ ಜಾರಿಗೆ ತೆಗೆದುಕೊಂಡು ಬಂದಿಲ್ಲ ಎಂದು ನಾನು ಗುರುತರವಾದ ಆರೋಪಣೆಯನ್ನು ಮಾಡುತ್ತೇನೆ. ಅವರು ಮಾಡಿದಂತಹ ಶಿಫಾರಸ್ಸುಗಳನ್ನು ಓದಿದ್ದಾರೆಯೋ ಇಲ್ಲವೋ ಗೊತ್ತಿಲ್ಲ. ಆ ಶಿಫಾರಸ್ಸುಗಳ ಬಗ್ಗೆ ಫಾಲೋ ಅಫ್ ಆಕ್ಷನ್ ಮಾಡುವುದಕ್ಕೆ ಸರ್ಕಾರ ತಿಳಿಸಿದ್ದಾರೆಯೋ ಇಲ್ಲವೋ ಗೊತ್ತಿಲ್ಲ. ಈ ಕೈಗಾರಿಕೆಯಲ್ಲಿ ಅಧಿಕಾರಿಗಳು ಉನ್ನತ ಮಟ್ಟದಲ್ಲಿ ಇದ್ದಾರೆ. ಅವರು ಈ ವರದಿಯನ್ನು ನೋಡಿದ್ದಾರೆಯೋ ಇಲ್ಲವೋ ಗೊತ್ತಿಲ್ಲ. ವಿಶ್ವೇಶ್ವರಯ್ಯ ಐರನ್ ಅಂಡ್ ಸ್ಟೀಲ್ ಫ್ಯಾಕ್ಟರಿಯಲ್ಲಿ ಆ ಶಿಫಾರಸ್ಸುಗಳನ್ನು ಜಾರಿಗೆ ತರದೇ ಇರುವುದು ಅಕ್ಷಮ್ಯ ಅಪರಾಧ. 1976-77ನೇ ಸಾಲಿನಲ್ಲಿ ಗೌರ್ನಮೆಂಟ್ ಎಲೆಕ್ಟ್ರಿಕ್ ಫ್ಯಾಕ್ಟರಿಯಲ್ಲಿ 30 22 ಲಕ್ಷ ರೂಪಾಯಿಗಳು ಲಾಸ್ ಆಗಿದೆ. ಇದನ್ನು ಆಳವಾಗಿ ಯೋಚನೆ ಮಾಡಿದರೆ ಪ್ರಾಫಿಟ್ ಅಂಡ್ ಲಾಸ್ ಮಾತ್ರವಲ್ಲ. ಇದರಲ್ಲಿ ಬಹಳ ಮುಖ್ಯವಾದುದು ಇದರಲ್ಲಿ ಕ್ಯಾಪಾಸಿಟಿ ಯುಟಿಲೈಜೇಷನ್ ಎಷ್ಟು ಮಾಡಿದ್ದಾರೆ ಎಂಬುದು ಮುಖ್ಯವಾದುದು. ¾ ಭಾಗ ಕಂಪೆನಿಗಳನ್ನು ನೋಡಿದರೆ 60-70 ಪರ್ಸೆಂಟ್ ಕ್ಯಾಪಾಸಿಟಿ ಯುಟಿಲೈಜೇಷನ್ ಇಲ್ಲ. 60-70 ಪರ್ಸೆಂಟ್ ಕ್ಯಾಪ್ಯಾಸಿಟಿ ಯುಟಿಲೈಜೇಷನ್ ಇಲ್ಲ ಎಂದರೆ ಈ ಕೈಗಾರಿಕೆಗಳು ಚೆನ್ನಾಗಿ ನಡೆಯುತ್ತವೆ, ಪ್ರಾಫಿಟ್ ಮಾಡುತ್ತಾರೆ, ಎಂದು ಹೇಳುವುದಕ್ಕೆ ಸಾಧ್ಯವಿದೆಯೇ? ಇದರಲ್ಲಿ ಕಾಸ್ಟ್ ಪರ್ ಯುನಿಟ್ ಅನ್ನು ಅನ್ ಸೈಂಟಿಫಿಕ್ ಆಗಿ ಲೆಕ್ಕಹಾಕಿ ಪ್ರಾಫಿಟ್ ತೋರಿಸುವ ಪರಿಸ್ಥಿತಿ ಬಂದಿದೆ. ಆದರೆ ಕಾಸ್ಟ್ ಪರ್ ಯುನಿಟ್ ಅನ್ನು ಸೈಂಟಿಫಿಕ್ ಆಗಿ ತೆಗೆದುಕೊಂಡು ನೋಡಿದರೆ ಇನ್ನೂ ಎಫಿಷಿಯಂಟ್ ಆಗಿ ಕೆಲಸ ಮಾಡಬೇಕಾಗುತ್ತದೆ. ಮ್ಯಾನೇಜ್‌ಮೆಂಟಿನವರು ಇದನ್ನು ಸರಿಯಾಗಿ ಕಾರ್ಯರೂಪಕ್ಕೆ ತರಬೇಕಾದರೆ ಯುಟಿಲೈಜೇಷನ್ ಆಫ್ ಕ್ಯಾಪಾಸಿಟಿಯನ್ನು ಜಾಸ್ತಿ ಮಾಡಬೇಕಾಗುತ್ತದೆ ಇವತ್ತಿನ ದಿವಸ ನಮ್ಮ ರಾಜ್ಯದಲ್ಲಿ ವಿದ್ಯುಚ್ಛಕ್ತಿ ಕೊರತೆ ಇದೆ.

ಶ್ರೀ ಕೆ. ಶ್ರೀರಾಮುಲು.—ಮಿಷನರಿಗಳನ್ನು 100 ಪರ್ಸೆಂಟ್ ಯೂಸ್ ಮಾಡುವುದಿಲ್ಲ. ಯೂಸ್ ಮಾಡಿಕೊಳ್ಳದೇ ಹೋದರೆ ನಷ್ಟ ಬರುತ್ತದೆ ಎಂದು ತಾವು ಹೇಳಿದಿರಿ. ತಮಗೆ ಬೇಕಾದಷ್ಟು ಎಕ್ಸ್‌ಪೀರಿಯನ್ಸ್ ಇದೆ. ಮಿಷನರಿಗಳನ್ನು ಎಷ್ಟು ಪರ್ಸೆಂಟ್ ಯೂಸ್ ಮಾಡಿದರೆ ಲಾಭ ಬರುವುದಕ್ಕೆ ಸಾಧ್ಯ ಎನ್ನುವುದನ್ನು ಹೇಳುತ್ತೀರಾ?

ಶ್ರೀ ಎಂ ಎಸ್. ಕೃಷ್ಣನ್.—ಅದು ಒಂದೊಂದು ಕೈಗಾರಿಕೆಯಲ್ಲಿ ಒಂದೊಂದು ರೀತಿಯಲ್ಲಿ ಇರುತ್ತದೆ. ಕೆಲವು ಕೈಗಾರಿಕೆಗಳಲ್ಲಿ ಎಕ್ಸ್‌ಟೆನ್‌ಷನ್ ಪಿರೀಡ್ ಜಾಸ್ತಿ ಇರುತ್ತದೆ ಉದಾಹರಣೆಗೆ ಸ್ಟೀಲ್ ಕೈಗಾರಿಕೆ ತೆಗೆದುಕೊಂಡರೆ ಅದಕ್ಕೆ ಎಕ್ಸ್‌ಟೆನ್‌ಷನ್‌ಪಿರೀಡ್ ಜಾಸ್ತಿ ದಿವಸ ಇರುತ್ತದೆ. ಯೂಟಿಲೈಸೇಷನ್ ತಕ್ಷಣ ಮಾಡಬೇಕು ಎಂದರೆ ಆಗುವುದಿಲ್ಲ. ಇದನ್ನು ಸ್ಯಾಂಡಲ್‌ವುಡ್ ಆಯಿಲ್ ಫ್ಯಾಕ್ಟರಿಗೆ, ಸೋಪ್ ಫ್ಯಾಕ್ಟರಿಗೆ ಮತ್ತು ಕಂಪೇರ್ ಮಾಡುವುದಕ್ಕೆ ಸಾಧ್ಯವಿಲ್ಲ. ಆದುದರಿಂದ ಈ ಪ್ರಶ್ನೆಗೆ ನೇರವಾಗಿ ಉತ್ತರ ಕೊಡುವುದಕ್ಕೆ ಸಾಧ್ಯವಿಲ್ಲ. ಒಟ್ಟಿನಲ್ಲಿ ಮಿಷನರಿಯನ್ನು 65-70 ಪರ್ಸೆಂಟ್ ಯೂಟಿಲೈಸೇಷನ್ ಮಾಡುವುದಕ್ಕೆ ಸಾಧ್ಯವಿದೆ ಅಷ್ಟು ಕೂಡ ನಮ್ಮ ರಾಜ್ಯದ ಕೈಗಾರಿಕೆಗಳಲ್ಲಿ ಯೂಟಿಲೈಸೇಷನ್ ಆಗುತ್ತಾ ಇಲ್ಲ ಎಂದರೆ ಶೋಚನೀಯವೇ ಸರಿ.

ಸ್ಯಾಂಡಲ್‌ವುಡ್ ಆಯಿಲ್ ಕಂಪೆನಿಯಲ್ಲಿ 40 ರಿಂದ 50ರವರೆಗೆ ಯೂಟಿಲೈಸೇಷನ್ ಮಾಡಿಕೊಳ್ಳುತ್ತಿದ್ದೇವೆಂದು ಅವರೇ ಹೇಳಿದ್ದಾರೆ. ಗವರ್ನಮೆಂಟ್ ಸೆಂಟ್ರಲ್ ಇಂಡಸ್ಟ್ರಿಯಲ್ ವರ್ಕ್‌ಶಾಪ್‌ನಲ್ಲೂ ಸಹ 1973—74ರಲ್ಲಿ 12.40 ಲಕ್ಷ ನಷ್ಟವಾಗಿದೆ, 1974—75ರಲ್ಲಿ 3.48 ಲಕ್ಷ ಲಾಭವಾಗಿದೆ ಎಂದು ಹೇಳಿದ್ದಾರೆ. ಬೇರೆ ಕೈಗಾರಿಕೆ ಬಗ್ಗೆ ನಾನು ಹೆಚ್ಚಿಗೆ ಹೇಳುವುದಕ್ಕೆ ಹೋಗುವುದಿಲ್ಲ. ಸರ್ಕಾರಿ ಕ್ಷೇತ್ರದ ಕೈಗಾರಿಕೆಗಳಲ್ಲೂ ಸಹ ಫಾಲೋಅಪ್‌ಆಕ್ಷನ್ ತೆಗೆದುಕೊಳ್ಳಬೇಕು, ಅದರ ಬಗ್ಗೆ ಹೆಚ್ಚಿನ ಗಮನಕೊಡಬೇಕು ಎಂದು ನಾನು ಹೇಳುತ್ತೇನೆ. ಇವತ್ತಿನ ದಿವಸ ಸರ್ಕಾರಿ ಕ್ಷೇತ್ರದ ಕೈಗಾರಿಕೆಗಳಲ್ಲಿ ಮ್ಯಾನೇಜ್‌ಮೆಂಟ್ ನಡೆಸುವ ರೀತಿಗಳ ಬಗ್ಗೆ ಏನು ನ್ಯೂನತೆಗಳಿವೆ ಅವನ್ನು ಸ್ವಲ್ಪಮಟ್ಟಿಗೆ ಪಿ ಯು ಸಿ ರಿಪೋರ್ಟ್‌ನಲ್ಲಿ ಕೊಟ್ಟಿದೆ. ಈ 1 ನೇ ರಿಪೋರ್ಟ್‌ನಲ್ಲಿ ಅಲ್ಲ, ಅದರ ಹಿಂದಿನ ರಿಪೋರ್ಟ್‌ನಲ್ಲಿ ಕೊಟ್ಟಿದ್ದೇವೆ, ಅದನ್ನು ಸರ್ಕಾರದವರು, ಗಣನೆಗೆ ತೆಗೆದುಕೊಳ್ಳಬೇಕು.

ಆಮೇಲೆ ಅಪಾಯಿಂಟ್‌ಮೆಂಟ್ ಆಫ್ ಡೈರಕ್ಟರ್ಸ್ ಬಗ್ಗೆ ಹೇಳುವುದಾದರೆ, ಒಬ್ಬರನ್ನೇ ಹತ್ತಾರು ಕಡೆ ನಾಮಕರಣ ಮಾಡಿದರೆ ಕೈಗಾರಿಕೆಗಳು ಬೆಳೆಯುವುದಕ್ಕೆ ಆಗುವುದಿಲ್ಲ. ಯಾರಿಗೆ ಕೈಗಾರಿಕೆಯಲ್ಲಿ ಸ್ವಲ್ಪಮಟ್ಟಿಗೆ ಪರಿಶ್ರಮ ಇದೆಯೋ ಅನುಭವವಿದೆಯೋ ಅಂಥವರನ್ನು ಮ್ಯಾನೇಜಿಂಗ್ ಡೈರಕ್ಟರನ್ನಾಗಿ, ಛೇರ್ಮನ್ನರಾಗಿ ನಾಮಕರಣ ಮಾಡಿದರೆ ಕೈಗಾರಿಕೆಗಳು ಬೆಳೆಯುವುದಕ್ಕೆ ಅನುಕೂಲವಾಗುತ್ತದೆ ಕೈಗಾರಿಕೆಯಲ್ಲಿ ಪರಿಶ್ರಮವಿಲ್ಲದ ರಾಜಕೀಯ ವ್ಯಕ್ತಿಗಳನ್ನು ನಾಮಕರಣ ಮಾಡಿದರೆ ಕೈಗಾರಿಕೆಗಳು ಬೆಳೆಯುವುದಕ್ಕೆ ಅನುಕೂಲವಾಗುತ್ತದೆ ಎಂದು ಹೇಳುವುದು ಬಹಳ ಕಷ್ಟವಾಗುತ್ತದೆ. ಎನ್.ಜಿ ಇ.ಎಫ್‌ನಲ್ಲಿ ಮಾನ್ಯ ಶ್ರೀ ದಯಾನಂದಸಾಗರ್ ಅವರನ್ನು ಛೇರ್ಮನ್ ಆಗಿ ಮಾಡಿದ್ದಾರೆ, ಅವರ ಬಗ್ಗೆ ಭಿನ್ನಾಭಿಪ್ರಾಯವಿಲ್ಲ ಅವರು ಒಳ್ಳೆಯವರು. ಅನೇಕ ವರ್ಷಗಳಿಂದ ಅವರು ನಮಗೆ ಗುರುತು ಇದ್ದಾರೆ ಆದರೆ ಕಾರ್ಪೋರೇಷನ್‌ಗಳಲ್ಲಿ ಕೆಲವರನ್ನು ನಾಮಕರಣ ಮಾಡಿದ್ದಾರೆ. ಯಾರೇ ಆಗಲೀ ಅವರ ಹೆಸರನ್ನು ಹೇಳುವುದಕ್ಕೆ ಹೋಗುವುದಿಲ್ಲ ಕಾರ್ಪೋರೇಷನ್‌ಗಳಲ್ಲಾಗಲೀ, ಕೈಗಾರಿಕೆಗಳಲ್ಲಾಗಲೀ ನಿಜವಾಗಿ ಅದರಲ್ಲಿ ಆಸಕ್ತಿ ಇರುವವರನ್ನು ಹಾಕಿದರೆ ಅವು ಬೆಳೆಯುವುದಕ್ಕೆ ಅವಕಾಶವಾಗುತ್ತವೆ. ಕೈಗಾರಿಕೆಯಲ್ಲಿ ಆಸಕ್ತಿ ಇಲ್ಲದ ರಾಜಕೀಯ ವ್ಯಕ್ತಿಗಳನ್ನು ಹಾಕಿದರೆ ಅಭಿವೃದ್ಧಿಯಾಗುವುದಿಲ್ಲ. ಹಿಂದೆ ಕೃಷ್ಣ ಮೆನನ್ ಅವರು ಇಂತಹ ಸಂಸ್ಥೆಗಳಲ್ಲಿ ಎಂ.ಪಿ., ಎಂ.ಎಲ್.ಎ.ಗಳನ್ನು ಹಾಕಬೇಡಿ ಎಂದು ಹೇಳಿದ್ದಾರೆ ಅದು ಬಹಳ ಒಳ್ಳೆಯದು. ಆದುದರಿಂದ ಇದರ ಬಗ್ಗೆ ಮಾನ್ಯ ಮುಖ್ಯ ಮಂತ್ರಿಗಳು ಗಮನಹರಿಸಿ ಕಾರ್ಯಕ್ರಮ ತೆಗೆದುಕೊಂಡರೆ ಒಳ್ಳೆಯದು ಎಂದು ನನಗನ್ನಿಸುತ್ತದೆ.

ಇನ್ನು ಕೆ.ಎಸ್‌ಐ.ಐ.ಡಿ.ಸಿ. ಮತ್ತು ಕೆ.ಎಸ್.ಎಫ್.ಸಿ. ಬಗ್ಗೆ ಮಾನ್ಯ ಸ್ನೇಹಿತರಾದ ಕೆ. ಪುಟ್ಟಸ್ವಾಮಿಯವರು ಪಿ.ಯು.ಸಿ. 11ನೇ ರಿಪೋರ್ಟ್ ಆಧಾರದ ಮೇಲೆ ಬಹಳವಾಗಿ ವಿವರಣೆಯನ್ನು ಕೊಟ್ಟಿದ್ದಾರೆ. ನಾವು ಪಿ.ಯು.ಸಿ.ಯಲ್ಲಿ ಒಂದು ಕಂಪೆನಿ ಮಾತ್ರವಲ್ಲ 3 ಕಂಪನಿಗಳನ್ನು ತೆಗೆದುಕೊಂಡಿದ್ದೇವೆ. ಆ ಕಂಪೆನಿಗಳ ಹುಳುಕನ್ನು ನೋಡಬೇಕು ಎಂದು

ಅವುಗಳ ಬಗ್ಗೆ ಸ್ಟಡಿ ಮಾಡಿದ್ದೇವೆ. ಈ ಪ್ರೈವೇಟ್ ಸೆಕ್ಟಾರ್ ಕಂಪನಿಗಳ ಬಗ್ಗೆ ಸ್ಟಡಿ ಮಾಡುವುದಕ್ಕೆ ನಿಮಗೆ ಏನು ಅಧಿಕಾರವಿದೆ ಎಂದು ಕೆಲವರು ಪ್ರಶ್ನೆ ಮಾಡಿದರು. ಅದರ ಬಗ್ಗೆ ನಾವು ಸ್ಟಡಿ ಮಾಡುವುದಕ್ಕೆ ಹೋಗುವುದಿಲ್ಲ, ಕೆ.ಎಸ್.ಐ.ಐ.ಡಿ.ಸಿ. ಅವರು ಹಣವನ್ನು ಲೋನ್ ಕೊಟ್ಟಿರುವುದಕ್ಕೆ, ಇನ್‌ವೆಸ್ಟ್‌ಮೆಂಟ್ ಮಾಡಿರುವುದಕ್ಕೆ ಏನು ಕಾರ್ಯಕ್ರಮ ಹಾಕಿಕೊಂಡಿದ್ದಾರೆ ಎಂದು ಸ್ಟಡಿ ಮಾಡಿದ್ದೇವೆ. ಆಮೇಲೆ ಹುಳುಕುಗಳೆಲ್ಲವೂ ಹೊರಗೆ ಬಂದಿವೆ. ವಿಕ್ರಾಂತ್ ಟೈರ್ಸ್, ಮೈಸೂರು ಟೂಲ್ಸ್. ಟ್ರಾನ್ಸ್‌ಪೋರ್ಟ್ ಟೈರ್ಸ್ ಇವುಗಳ ಬಗ್ಗೆ ಹೆಚ್ಚಿಗೆ ಹೇಳುವುದಿಲ್ಲ. ಶ್ರೀಶೈಲ ಕೋಆಪರೇಟೀವ್ ಎಂಟರ್‌ಪ್ರೈಸಸ್ ಎಂದು ಮಾಡಿದ್ದಾರೆ, ಅದರ ಬಗ್ಗೆ ಅರ್ಥವೇ ಆಗುವುದಿಲ್ಲ. ಆಮೇಲೆ ಹೆಗ್ಗಡೆ ಅಂಡ್ ಗೋಲೆ ಕಂಪೆನಿ ಭಾರಿ ದೊಡ್ಡ ಕಂಪೆನಿ, ಅದು ಎಷ್ಟು ದೊಡ್ಡ ಕಂಪೆನಿಯೋ ನಮಗೆ ಗೊತ್ತಿಲ್ಲ. 18 ಅನ್ಸಿಲರಿ ಎಂಟರ್‌ಪ್ರೈಸಸ್ ಕೆ. ಎಸ್. ಎಫ್. ಸಿ. ಮತ್ತು ಕೆ. ಎಸ್. ಐ. ಐ. ಡಿ. ಸಿ.ಯಿಂದ ಹಣ ಪಡೆದುಕೊಂಡಿದ್ದಾರೆ. ಹೆಗ್ಗಡೆ ಅಂಡ್ ಗೋಲೆಯವರು ಹಣ ಪಡೆದುಕೊಂಡಿದ್ದಾರೆ. ಅವರು ವಾಚ್ ಮ್ಯಾನುಫ್ಯಾಕ್ಚರ್ ಮಾಡುತ್ತಾರೋ ಏನು ಮ್ಯಾನುಫ್ಯಾಕ್ಚರ್ ಮಾಡುತ್ತಾರೋ ಅದನ್ನು ಚೆಕಪ್ ಮಾಡಿ ಹಣ ಕೊಟ್ಟಿದ್ದರೆ ಚೆನ್ನಾಗಿರುತ್ತಿತ್ತು. ಶ್ರೀಶೈಲ ಎಂಟರ್‌ಪ್ರೈಸಸ್‌ನವರು ಅಪ್ಲಿಕೇಷನ್ ಹಾಕಿಕೊಂಡರು. ಪ್ರಭಾವ ಬೀರಿದರು, ಅದರ ಆಧಾರದ ಮೇಲೆ ದುಡ್ಡನ್ನು ಕೊಟ್ಟರು. ಇದರ ಬಗ್ಗೆ ಪಿ. ಯು. ಸಿ. ರಿಪೋರ್ಟಿನಲ್ಲಿ ಈ ರೀತಿ ಇದೆ, ಅದನ್ನು ಓದುತ್ತೇನೆ:

> "The Board sanctioned a loan of Rs 27 lakhs without properly understanding whether these companies were really the ancillaries to M/s. Hegde and Golay. In fact during evidence the spokesman of the corporation contended that whether these companies are the ancillaries to M/s Hegde and Golay is still an open question and was being examined by the concerned Ministry. In a developing economy when inflationary pressures are evident some increase in the value of assets is possible Whether it is normal practice in the financial institutions to accept such national increase in value of assets as security for sanctioning loans is doubtful".

ಅಡ್ಮಿಟ್ ಮಾಡಿಕೊಂಡಿದ್ದಾರೆ. ಸೀಡ ಕ್ಯಾಪಿಟಲ್ 16.4 ಲಕ್ಷ ರೂಪಾಯಿಗಳನ್ನು ಡಿಪಾರ್ಟ್‌ಮೆಂಟ್ ಆಫ್ ಇಂಡಸ್ಟ್ರೀಸ್ ಅಂಡ್ ಕಾಮರ್ಸ್‌ನಿಂದ ಪಡೆದುಕೊಂಡರು, ಅದನ್ನು ಉಪಯೋಗ ಮಾಡಿರುವ ವಿಧಾನವನ್ನು ಇದರಲ್ಲಿ ಹೇಳಿದ್ದಾರೆ. ಆದರೆ ಅದನ್ನು ನಮ್ಮ ಅಥಾರಿಟೀಸ್ ಚೆಕ್‌ಅಪ್ ಮಾಡಲಿಲ್ಲ. ಕೆ.ಎಸ್. ಐ ಐ ಡಿ ಸಿ.ಯಲ್ಲಿ ಹಿಂದಿನ ಛೇರ್ಮನ್ನರು, ಇಂದಿನ ಛೇರ್ಮನ್ನರು ಯಾರೂ ಇದರ ಬಗ್ಗೆ ಚೆಕ್ ಮಾಡಿರುವುದು ಕಾಣಲಿಲ್ಲ. ವಿಕ್ರಾಂತ ಟೈರ್ಸ್‌ಗೆ ಹಣ ಹಾಕಿದ್ದು ಬರುತ್ತದೋ ಇಲ್ಲವೋ ಗೊತ್ತಿಲ್ಲ. ಅದಕ್ಕೆ ಲಕ್ಷಾಂತರ ರೂಪಾಯಿ ಸರ್ಕಾರದ ಹಣ ಹೋಗಿದೆ. ಮೈಸೂರು ಟೂರ್ಸ್‌ನಲ್ಲೂ ಇದೇ ಪರಿಸ್ಥಿತಿ ಮೈಸೂರು ಸ್ಟ್ರಕ್ಚರಲ್ಸ್, ಅಲ್ಲೂ ಕೂಡ ಇದೇ ಸ್ಥಿತಿ. ಕೆ.ಎಸ್.ಐ. ಐ ಡಿ.ಸಿ ಯವರು ಯಾರುಯಾರಿಗೆ ಎಷ್ಟೆಷ್ಟು ಹಣವನ್ನು ಕೊಟ್ಟಿದ್ದಾರೆ ಎನ್ನುವ ಪಟ್ಟಿಯನ್ನು ನಾವು ಕೊಟ್ಟಿದ್ದೇವೆ. ಕೊಟ್ಟಿರುವ ಹಣವನ್ನು ಸರಿಯಾಗಿ ವಿನಿಯೋಗ ಮಾಡಿದ್ದಾರೆಯೇ ಎಂದು ನೋಡಿದರೆ ಅದರಲ್ಲಿ ಮುಕ್ಕಾಲು ಹಣ ಪೋಲಾಗಿದೆ ಇದನ್ನು ನಾವು ಪಿ.ಯು.ಸಿ.ಯಲ್ಲಿ ಅನಲೈಸ್ ಮಾಡಿದ್ದೇವೆ. ಇದರ ಬಗ್ಗೆ ಮಾನ್ಯ ಮಂತ್ರಿಗಳು ಸಮಂಜಸವಾದ ಉತ್ತರ ಕೊಟ್ಟರೆ ಅಕ್ಸೆಪ್ಟ್ ಮಾಡಿಕೊಳ್ಳುತ್ತೇನೆ. ಅದನ್ನು ವಿರೋಧ ಮಾಡುವುದಿಲ್ಲ. ಶ್ರೀಶೈಲ ಎಂಟರ್‌ಪ್ರೈಸಸ್, ವಿಕ್ರಾಂತ್ ಟೈರ್ಸ್ ಇವುಗಳ ಬಗ್ಗೆ ಸ್ಟಡಿ ಮಾಡಿದ್ದೇವೆ. ಇದನ್ನು ಸರ್ಕಾರ ಗಮನಕ್ಕೆ ತೆಗೆದುಕೊಳ್ಳಬೇಕು. ಆಗ ಅಧಿಕಾರಿಗಳು ಯಾರಿದ್ದರು ಅವರಲ್ಲಿ ಕೆಲವರು ಈಗ ರಿಟೈರ್ ಆಗಿದ್ದಾರೆ. ಆ ಕಾಲದಲ್ಲಿ ಯಾರು ಛೇರ್ಮನ್ ಆಗಿದ್ದರು ಅವರು ಈಗ ಅಧಿಕಾರದಲ್ಲಿಲ್ಲ. ಅವರು ಇವತ್ತು ಇಲ್ಲ ಎಂದು ದಯವಿಟ್ಟು ಅವರನ್ನು ಬಿಟ್ಟುಬಿಡಬೇಡಿ. ಯಾರೇ ಆಗಲೀ ಅವರು ಯಾವುದೇ ಸಣ್ಣ

ಕೆಲಸದಲ್ಲಿರಲಿ, ರಿಟೈರ್ ಆಗಿರಲಿ, ಯಾವ ಅಧಿಕಾರಿ ದುರ್ವ್ಯವಹಾರಗಳಿಗೆ ಅವಕಾಶ ಮಾಡಿಕೊಟ್ಟಿದ್ದಾರೋ ಯಾವ ಅಧಿಕಾರಿ ಸಾರ್ವಜನಿಕರ ಹಣ ಪೋಲಾಗುವುದಕ್ಕೆ ಅವಕಾಶ ಮಾಡಿಕೊಟ್ಟಿದ್ದಾನೋ, ಅಂತಹವರ ಬಗ್ಗೆ ವಿಧಾನ ಮಂಡಲದ ಸಾರ್ವಜನಿಕ ಲೆಕ್ಕಪತ್ರ ಸಮಿತಿ ವರದಿಯ ಆಧಾರದ ಮೇಲೆ ಎನ್‌ಕ್ವೈರಿ ಮಾಡಿ ತಪ್ಪಿತಸ್ಥರ ಮೇಲೆ ಸೂಕ್ತ ಕ್ರಮ ತೆಗೆದುಕೊಳ್ಳಬೇಕೆಂದು ನಾನು ಸರ್ಕಾರಕ್ಕೆ ಕಳಕಳಿಯಿಂದ ಒತ್ತಾಯ ಮಾಡುತ್ತೇನೆ.

12 NOON

ಇನ್ನೊಂದು ವಿಷಯ. ನಮ್ಮ ಸರ್ಕಾರ ಮೊದಲಿನಿಂದಲೂ ಅನೇಕ ಕಾರ್ಪೊರೇಷನ್‌ಗಳನ್ನು ರಚನೆ ಮಾಡಿದೆ ನನಗೆ ಗೊತ್ತಿರುವ ಹಾಗೆ ಇತ್ತೀಚೆಗೆ ಹೊಸದಾಗಿ ಕರ್ನಾಟಕ ಇಂಡಸ್ಟ್ರಿಯಲ್ ಇನ್‌ವೆಸ್ಟ್‌ಮೆಂಟ್ ಡೆವಲಪ್‌ಮೆಂಟ್ ಕಾರ್ಪೊರೇಷನ್, ಲೆದರ್ ಕಾರ್ಪೊರೇಷನ್, ಫಿಷರೀಸ್ ಕಾರ್ಪೊರೇಷನ್, ವುಡ್ ಇಂಡಸ್ಟ್ರೀಸ್ ಕಾರ್ಪೊರೇಷನ್ ಫಾರೆಸ್ಟ್ ಇಂಡಸ್ಟ್ರೀಸ್ ಕಾರ್ಪೊರೇಷನ್, ಹ್ಯಾಂಡ್‌ಲೂಮ್ ಕಾರ್ಪೊರೇಷನ್ ಹೀಗೆ ಅನೇಕ ಕಾರ್ಪೊರೇಷನ್‌ಗಳನ್ನು ರಚನೆ ಮಾಡಿದ್ದಾರೆ. ಕಾರ್ಪೊರೇಷನ್ ಮೇಲೆ ಕಾರ್ಪೊರೇಷನ್‌ಗಳನ್ನೇನೋ ರಚನೆ ಮಾಡಿದ್ದಾರೆ. ಆದರೆ ಇವುಗಳ ಉದ್ದೇಶ ಇನ್ನೂ ಸಫಲವಾಗಿಲ್ಲ, ಇವುಗಳಲ್ಲಿ ಕೆಲವನ್ನು ಡೀಸೆಂಟ್ರಲೈಜ್ ಮಾಡಿ ಕೈಗಾರಿಕೆಗಳ ಬೆಳವಣಿಗೆ ಎಷ್ಟು ಮಟ್ಟಿಗೆ ಆಗುತ್ತಿದೆ ಎಂಬುದನ್ನು ನೋಡಿಕೊಳ್ಳುವುದಕ್ಕೆ ಈ ಕಾರ್ಪೊರೇಷನ್‌ಗಳ ರಚನೆ ಅವಶ್ಯವಾಗಿದೆಯೆಂದು ಈ ಎಲ್ಲಾ ಕಾರ್ಪೊರೇಷನ್‌ಗಳಲ್ಲಿ ಈಗ ಎಷ್ಟು ದೂರ ಅನುಕೂಲ ಮಾಡಿದ್ದಾರೆಂಬುದನ್ನು ನೋಡಿದರೆ ಅನೇಕ ಕೈಗಾರಿಕೆಗಳ ಬೆಳವಣಿಗೆ ಏನೇನೂ ಆಗಿಲ್ಲ. ನಾನು ಮೊದಲೇ ಹೇಳಿದಹಾಗೆ ಈಗತಾನೆ ಹೊಸದಾಗಿ ಹ್ಯಾಂಡ್‌ಲೂಮ್ ಕಾರ್ಪೊರೇಷನ್ ಆರಂಭವಾಗಿದೆ. ಹ್ಯಾಂಡ್‌ಲೂಮ್ ಕಾರ್ಪೊರೇಷನ್ ಮಾಡಿರುವ ಉದ್ದೇಶವೇನೋ ಒಳ್ಳೆಯದೇ ಇರಬಹುದು. ಆದರೆ ನನಗೆ ತಿಳಿದ ಹಾಗೆ ಈ ಹ್ಯಾಂಡ್‌ಲೂಮ್ ಕಾರ್ಪೊರೇಷನ್ನಿನಿಂದ ಕೇವಲ ಕೆಲವರಿಗೆ ಮಾತ್ರ ಅನುಕೂಲವಾಗಿರಬಹುದು. ಆದರೆ ಸರ್ಕಾರ ರಚನೆ ಮಾಡಿರುವ ಕಾರ್ಪೊರೇಷನ್‌ಗಳಲ್ಲಿ ಮುಕ್ಕಾಲು ಭಾಗ ಕಾರ್ಪೊರೇಷನ್‌ಗಳು ಏನಿವೆಯೋ ಅವುಗಳಲ್ಲಿ ಸ್ಟಾರ್ಟಿಂಗ್ ಟ್ರಬಲ್ಲೇ ಬಹಳ ಜಾಸ್ತಿಯಾಗಿದೆ. ಕೆಲವು ಮಾತ್ರ ಈಗಾಗಲೇ ಸ್ಟಾರ್ಟಾಗಿ ನಿಂತು ಹೋಗುವ ಪರಿಸ್ಥಿತಿ ಬಂದಿದೆ ಇದು ನಮ್ಮ ರಾಜ್ಯದಲ್ಲಿ ಈಗ ಕಂಡು ಬರುತ್ತಾ ಇರುವ ಚಿತ್ರ ಇವುಗಳ ಮೇಲ್ವಿಚಾರಣೆಗಾಗಿ ಯಾವ ಮೆಷನರಿ ಇದೆಯೋ ಅದನ್ನು ಸರಿಯಾಗಿ ಉಪಯೋಗಿಸಬೇಕು. ಎಲ್ಲಿ ತಪ್ಪು ಇದೆಯೆಂದು ಕಂಡು ಹಿಡಿಯುವುದಕ್ಕೆ ಇದುವರೆಗೂ ಸಾಧ್ಯವಾಗಿಲ್ಲ. ಉದಾಹರಣೆಗಾಗಿ ಹೇಳುವುದಾದರೆ, ರೆಂಕೋ ಬಗ್ಗೆ ಈ ಮನೆಯಲ್ಲಿ ಹಿಂದೆ ಸಾಕಷ್ಟು ಚರ್ಚೆಯಾಗಿದೆ. ಇದನ್ನು ಬಿ.ಎಚ್.ಇ.ಎಲ್.ಗೆ ಕೊಡಬಹುದು, ಬಿರ್ಲಾರವರಿಗೆ ಕೊಡಬಾರದು ಎಂಬುದಾಗಿ ಅಂದಿನ ಕೈಗಾರಿಕಾ ಸಚಿವರಾದ ಶ್ರೀ ಎಸ್ ಎಂ. ಕೃಷ್ಣರವರು ಈ ಸದನದಲ್ಲೇ ಒಪ್ಪಿಕೊಂಡಿದ್ದಾರೆ. ಆ ಪ್ರಕಾರ ರೆಂಕೋವನ್ನು ಬಿ.ಎಚ್.ಇ ಎಲ್.ಗೆ ಕೊಟ್ಟಿದ್ದೇವೆಂದು ಇವರು ಹೇಳುತ್ತಿದ್ದರೂ ಅದನ್ನು ಇನ್ನೂ ಪೂರ್ತಿಯಾಗಿ ಕೊಟ್ಟಿಲ್ಲ. ರೆಂಕೋ ಇನ್ನೂ ಬಿ.ಎಚ್.ಇ ಎಲ್. ತನ್ನ ಸಬ್ಸಿಡಿಯರಿ ಕಂಪನಿಯಾಗಿದೆ. ವಿಚಾರ ಹೇಳುವುದಾದ್ದರೆ, ರೆಂಕೋದಲ್ಲಿ ಕೆಲವು ಪ್ರೈವೇಟ್ ಷೇರುಗಳಿವೆ. ಅದನ್ನು ಸರ್ಕಾರದವರು ಇನ್ನೂ ಕೊಂಡುಕೊಳ್ಳಬೇಕಾಗಿದೆ. ಅದರ ಬಗ್ಗೆ ಪ್ರತ್ಯೇಕವಾಗಿ ಆರ್ಡಿನೆನ್ಸ್ ಅಥವಾ ಬಿಲ್ ಪಾಸ್ ಮಾಡಬೇಕಾಗಿದೆ. ಇದನ್ನು ಸರ್ಕಾರ ಇನ್ನೂ ಮಾಡಲಿಲ್ಲ. ಇದನ್ನು ಬಹಳ ಬೇಗ ಮಾಡಬೇಕು. ಇವತ್ತು ಬಿ.ಎಚ್.ಇ.ಎಲ್‌ನಲ್ಲಿ ಏನೇನು ಅನುಕೂಲತೆಗಳು, ಫೈನಾನ್ಸಿಯಲ್ ಅಸಿಸ್ಟೆನ್ಸ್ ಇವೆಯೋ ಅವನ್ನು ರೆಂಕೋಗೆ ಕೊಡುತ್ತಾ ಇಲ್ಲ. ಅದು ತಮಗೆ ಗೊತ್ತಿಲ್ಲವೆಂದು ಕಾಣುತ್ತದೆ. ಸರ್ಕಾರ ಇದನ್ನು ವಿಚಾರಮಾಡಿ ನೋಡಬೇಕು. ರೆಂಕೋನಲ್ಲಿ ಈಗ ಅಲ್ಲಿನ ನೌಕರರಿಗೆ ಸಂಬಳ ಕೊಡುವುದಕ್ಕೂ ಸಾಕಷ್ಟು ಹಣವಿಲ್ಲವೆಂದು ಹೇಳುತ್ತಿದ್ದಾರೆ. ಅಂಥಾದ್ದರಲ್ಲಿ ಸರ್ಕಾರ ಷೇರುಗಳನ್ನು ಏತಕ್ಕೆ ಇಟ್ಟುಕೊಳ್ಳಬೇಕು, ನಮ್ಮ ರಾಜ್ಯ ಸರ್ಕಾರದವರು ಇದರ ಬಗ್ಗೆ ಏನೋ ಮೀನಾಮೇಷ ಮಾಡುತ್ತಿದ್ದಾರೆ ಇತ್ತೀಚೆಗೆ ಅಲ್ಲಿನ ಒಬ್ಬ ಅಧಿಕಾರಿ ನೌಕರರಿಗೆ ಸಂಬಳ ಕೊಡುವುದಕ್ಕೂ ಹಣವಿಲ್ಲ ರಾ ಮೆಟೀರಿಯಲ್ಸ್ ಕೊಳ್ಳುವುದಕ್ಕೂ ಹಣವಿಲ್ಲವೆಂದು ನನಗೆ ಹೇಳಿದ್ದಾರೆ. ಆದರೆ ಬಿ.ಎಚ್.ಇ.ಎಲ್‌ನ ಹತ್ತಿರ ಹೆಚ್ಚಿಗೆ ಹಣವಿದೆ, ರಾ ಮೆಟೀರಿಯಲ್ಸ್ ಹೆಚ್ಚು ಹೆಚ್ಚಾಗಿ ಕೊಳ್ಳಲು ಶಕ್ತಿ ಇದೆ. ಆದರೆ ರಾಜ್ಯ

ಸರ್ಕಾರದವರೇ ಆಗಲಿ, ಕೇಂದ್ರ ಸರ್ಕಾರದವರೇ ಆ ಕಂಪನಿ ಸಬ್‌ಸಿಡಿಯರಿಯನ್ನೆಲ್ಲ ಧನ ಸಹಾಯ ಸಾಕಷ್ಟು ಮಾಡುವುದಕ್ಕಾಗುವುದಿಲ್ಲ. ಆದ್ದರಿಂದ ಸರ್ಕಾರ ಇದರ ಬಗ್ಗೆ ತಕ್ಷಣ ಕ್ರಮ ತೆಗೆದುಕೊಳ್ಳಬೇಕು. ಇಲ್ಲದಿದ್ದರೆ ರೆಂಕೋ ಬೆಳವಣಿಗೆಯಾಗುವುದರಲ್ಲಿ ಕ್ರಮ ನಿಜವಾಗಿ ಕುಂಠಿತವಾಗುತ್ತದೆ. ಆದ್ದರಿಂದ ಇದರ ಬಗ್ಗೆ ಸ್ಪಷ್ಟವಾದ ಆಶ್ವಾಸನೆಯನ್ನು ಮಾನ್ಯ ಮುಖ್ಯಮಂತ್ರಿಗಳು ಈ ಸಭೆಗೆ ಕೊಡಬೇಕು.

ಇನ್ನು ವಿಜಯನಗರದ ಸ್ಟೀಲ್ ಪ್ಲಾಂಟ್ ಬಗ್ಗೆ ಒಂದು ಮಾತನ್ನು ಹೇಳಬೇಕಾಗಿದೆ. ಪತ್ರಿಕೆಯಲ್ಲಿ ಎಲ್ಲೋ ಒಂದು ಕಡೆ will Vija anagar Steel Plant be shifted ? ಎಂದು ಇದ್ದುದನ್ನು ಓದಿದೆ. ಅದಕ್ಕೆ ಒಂದು ಪ್ರಶ್ನಾರ್ಥಕ ಚಿಹ್ನೆಯನ್ನು ಹಾಕಿದ್ದರು. ಆಮೇಲೆ It is likely to be shifted to Mangalore ಎಂದು ಬೇರೆ ಹಾಕಿದ್ದರು. I was really amazed. ಹೊಸಪೇಟೆಯಲ್ಲಿರತಕ್ಕ ಸ್ಟೀಲ್ ಪ್ಲಾಂಟ್ ಬಗ್ಗೆ ಈ ಸದನದಲ್ಲಿ ಚರ್ಚೆಯಾಗಿ ಹೊಸಪೇಟೆಯಲ್ಲಿ ಸ್ಟೀಲ್ ಪ್ಲಾಂಟ್ ಜಾಗ್ರತೆಯಾಗಿ ಪ್ರಾರಂಭವಾಗಲು ಎಲ್ಲಾ ಸಿದ್ಧತೆಗಳೂ ಆಗುತ್ತಿರುವಾಗ ಏಕಾಏಕಿಯಾಗಿ ಅದು ಈಗ ಮಂಗಳೂರಿಗೆ ಷಿಫ್ಟ್ ಮಾಡಲಾಗುವುದೆಂದು ಹೇಳಿದರೆ, ಇದರಲ್ಲಿ ಏನೋ ರಾಜಕೀಯ ಕೃತ್ಯ ಮಾಡಿರಬೇಕೆಂದು ನನಗೆ ಭಾಸವಾಗುತ್ತಿದೆ. ಇದರಿಂದ ಇದು ಮಂಗಳೂರು ಅಥವಾ ಬೇರೆ ಇನ್ನೆಲ್ಲೋ ಹೊರಗಡೆಗೆ ಹೋಗಬಹುದೆಂದು ನನಗೆ ಕಾಣುತ್ತದೆ. ಹಿಂದೆ ಒಬ್ಬ ಮಾಜಿ ಮಂತ್ರಿ ಈ ಮನೆಯಲ್ಲಿ ವಿಜಯನಗರ ಸ್ಟೀಲ್ ಪ್ಲಾಂಟ್ ಬಗ್ಗೆ ಮಾತನಾಡಿ ಅದು ಹೊಸಪೇಟೆಯಲ್ಲಿ ಬರುತ್ತದೆಂದು ಹೇಳಿದ್ದಾರೆ. ಅದು ಬರುತ್ತದೆ, ಬರುತ್ತದೆ ಎಂಬ ಉತ್ತರವನ್ನು ನಾನು ಈ ಸಭೆಯಲ್ಲಿ ಬೇಕಾದಷ್ಟು ಸಲ ಕೇಳಿದ್ದೇನೆ. ಮಾನ್ಯ ಶ್ರೀ ಎಸ್. ಎಂ. ಕೃಷ್ಣರವರನ್ನು ಮೊದಲನೆ ಸಾರಿ ಈ ವಿಚಾರವಾಗಿ ನಾನು ಪ್ರಶ್ನೆ ಮಾಡಿದಾಗ ಅವರು ಹೇಳಿದ್ದೇನೆಂದರೆ, ಅದರ ಬಗ್ಗೆ ಫೀಜಬಲಿಟಿ ರಿಪೋರ್ಟ್ ಇನ್ನೂ ಬಂದಿಲ್ಲ, ತಡವಾಗಿ ಬರುತ್ತದೆಂದು ಹೇಳಿದ್ದರು. ಈಗಾಗಲೇ ಫಿಜಬಲಿಟಿ ರಿಪೋರ್ಟ್ ಬಂದಿದ್ದಾಯಿತು. ಆದಕ್ಕಾಗಿ 2 ಕೋಟಿ ರೂಪಾಯಿಗಳನ್ನು ಕೊಟ್ಟಿದ್ದೂ ಆಗಿದೆ. ಆದರೆ ಅಲ್ಲಿ ಕೇವಲ ಇನ್ನೂ ರೋಡ್‌ಗಳನ್ನು ಮಾಡುವುದಕ್ಕಾಗುವುದಿಲ್ಲ. ಸುಮಾರು 12 ಕೋಟಿ ರೂಪಾಯಿಗಳು ಈ ಯೋಜನೆಗೆ ಒಂದು ವರ್ಷಕ್ಕೆ ಬೇಕಾಗುತ್ತದೆಂದು ಅಲ್ಲಿರುವ ಒಬ್ಬ ಚೀಫ್ ಇಂಜಿನೀಯರ್ ಅವರೇ ಹೇಳಿದ್ದಾರೆ. ಇತ್ತೀಚೆಗೆ ರಾಜಕೀಯ ಬದಲಾವಣೆಯಾಗುತ್ತಿದ್ದರೂ ಕೇಂದ್ರ ಸರ್ಕಾರದವರೇನೋ ವಿಜಯನಗರ ಸ್ಟೀಲ್ ಪ್ಲಾಂಟಗೆ ಮಾತ್ರ ನಿಜವಾಗಿ ಆದ್ಯತೆ ಕೊಡುತ್ತೇವೆಂದು ಹೇಳಿದ್ದಾರೆ. ಅವರು ಆ ರೀತಿಯಾಗಿ ಹೇಳಿದ್ದರೂ ರಾಜ್ಯ ಸರ್ಕಾರದವರು ಕೇಂದ್ರ ಸರ್ಕಾರವನ್ನು ಈಗಲಾದರೂ ಕೂಡಲೇ ಒತ್ತಾಯ ಮಾಡದೇ ಹೋದರೆ, ವಿಜಯನಗರ ಸ್ಟೀಲ್ ಪ್ಲಾಂಟ್ ನಮ್ಮ ರಾಜ್ಯಕ್ಕೆ ಬರುತ್ತದೋ ಇಲ್ಲವೋ ಎನ್ನುವ ಸಂಶಯ ನನಗೆ ಬರುತ್ತಿದೆ. ಅದು ಕೊನೆಗೆ ಮಂಗಳೂರಿಗೂ ಬಾರದೆ ಮತ್ತೆ ಬೇರೆ ಎಲ್ಲಿಗಾದರೂ ಹೋದರೆ ಅದರಿಂದ ಕರ್ನಾಟಕ ರಾಜ್ಯಕ್ಕೆ ಇನ್ನೂ ಬಹಳ ಹಾನಿಯಾಗುತ್ತದೆ. ಕೊನೆಗೂ ಅದು ಬಾರದೆಯೇ ಹೋದರೆ ನಮ್ಮ ರಾಜ್ಯಕ್ಕೆ ಭಾರಿ ದೊಡ್ಡ ಅನಾಹುತವಾಗುತ್ತದೆಂದು ನಾನು ಹೇಳುತ್ತೇನೆ.

ಇನ್ನು ಸ್ಮಾಲ್ ಸ್ಕೇಲ್ ಇಂಡಸ್ಟ್ರೀಸ್ ಡೆವಲಪ್‌ಮೆಂಟ್ ಕ್ಯಾಂಪೇನ್ ಬಗ್ಗೆ ಒಂದು ಮಾತು. ಅವರ ರಿಪೋರ್ಟ್ ಪ್ರಕಾರ ಈಗ 750 ಶೆಡ್‌ಗಳನ್ನು ಮಾತ್ರ ಕಟ್ಟಿಸಿ ಕೊಟ್ಟಿದ್ದೇವೆಂದು ಹೇಳುತ್ತಿದ್ದಾರೆ. ಅದು ಏನೇನೂ ಸಾಲದು, ಇದರ ಬಗ್ಗೆ ಸರ್ಕಾರ ಹೆಚ್ಚಿನ ಗಮನ ಕೊಡಬೇಕು. ಮಂಗಳೂರಿನಲ್ಲಿ ಮತ್ತು ಉತ್ತರ ಕನ್ನಡದಲ್ಲಿ ಒಂದೊಂದು ಸ್ಮಾಲ್ ಸ್ಕೇಲ್ ಡೆವಲಪ್‌ಮೆಂಟ್ ಕ್ಯಾಂಪೇನ್ ಮಾಡುತ್ತೇವೆಂದು ಮಾನ್ಯ ಮಂತ್ರಿಗಳಾದ ಶ್ರೀ ವೀರಪ್ಪ ಮೊಯಿಲಿಯವರು ಒಂದು ಹೇಳಿಕೆ ಕೊಟ್ಟಿದ್ದಾರೆ. ಅವರು ಬಹಳ ಉತ್ಸಾಹಿ ಶಾಲಿಗಳು, ಅದರೂ ಅದರ ಪರಿಣಾಮ ಇದರ ಬಗ್ಗೆ ಇನ್ನೂ ಯಾವ ರೀತಿಯಲ್ಲೂ ಬದಲಾವಣೆಯಾಗಲಿಲ್ಲ. ಈಗ ನಡೆಯುವ ಕೆಲಸ ಕಾರ್ಯಗಳು ಬಹಳ ಕಡಿಮೆ. ಕೇಂದ್ರದವರು ಈಗ ಬೇರೆ ರಾಜ್ಯಗಳಿಗೆ ಆದ್ಯತೆ ಕೊಟ್ಟಿರುವ ಹಾಗೆ ನಮ್ಮ ರಾಜ್ಯಕ್ಕೂ ಕೊಡುತ್ತೇವೆಂದು ಈಗಾಗಲೇ ಆಶ್ವಾಸನೆಯನ್ನು ನೀಡುತ್ತಾ ಇದ್ದಾರೆ. ಆದ್ದರಿಂದ ನಮ್ಮ ರಾಜ್ಯದಲ್ಲೂ ಕ್ರಮೇಣ ಗ್ರಾಮಾಂತರ ಕೈಗಾರಿಕೆಗಳು ಬರುತ್ತವೆಂದು ಮಾನ್ಯ ಮಂತ್ರಿಗಳು ಹೇಳುತ್ತಿದ್ದಾರೆ. ತಾಲ್ಲೂಕು ಲೆವೆಲ್ಲಿನಲ್ಲಿ ಶೆಡ್‌ಗಳನ್ನು ಮಾಡುತ್ತೇವೆಂದು ಆಶ್ವಾಸನೆಯನ್ನು ಮಾನ್ಯ ಮಂತ್ರಿಗಳು ಕೊಟ್ಟಿದ್ದಾರೆ. ಕೇರಳದಲ್ಲಿ ಈಗಾಗಲೇ

ಅಂತಹ 10 ಸಾವಿರ ಯೂನಿಟ್‌ಗಳು ಬಂದಿವೆಯೆಂದು ನಾವುಗಳ ಪತ್ರಿಕೆಯಲ್ಲಿ ಓದಿದ್ದೇವೆ. ನಮ್ಮಲ್ಲೂ ಆ ರೀತಿ ಬರುವುದಕ್ಕೆ ಸರಿಯಾದಂತಹ ಡ್ರೈವ್ ಬೇಕು. ಕೇರಳದಲ್ಲಿ ಅಂಥಾದ್ದಕ್ಕೆಲ್ಲಾ ಬ್ಯಾಂಕುಗಳು ಸಹಾಯ ಮಾಡಿವೆ. ಆದರೆ ನಮ್ಮಲ್ಲಿ ಬ್ಯಾಂಕುಗಳು ಸಹಾಯ ಮಾಡಲು ಹಿಂಜರಿಯುತ್ತಿವೆ. ಆ ರೀತಿ ಇಲ್ಲಿರುವ ಬ್ಯಾಂಕುಗಳು ಹಿಂಜರಿಯದೇ ಒಂದೊಂದು ತಾಲ್ಲೂಕಿನಲ್ಲಿಯೂ ಶೆಡ್‌ಗಳನ್ನು ತೆರೆಯಲು ಹಾಗೂ ನಮ್ಮ ರಾಜ್ಯದಲ್ಲಿ ಹೆಚ್ಚಿಗೆ ಸ್ಮಾಲ್ ಸ್ಕೇಲ್ ಇಂಡಸ್ಟ್ರೀಸ್ ಅಭಿವೃದ್ಧಿ ಮಾಡುವುದಕ್ಕೆ ಹಣ ಸಹಾಯ ಮಾಡಲು ಆದಷ್ಟು ಜಾಗ್ರತೆ ಸೂಕ್ತ ಕ್ರಮ ತೆಗೆದುಕೊಳ್ಳಬೇಕೆಂದು ಹೇಳಿ, ನನಗೆ ಇಷ್ಟು ವೇಳೆ ಮಾತನಾಡಲು ಅವಕಾಶವನ್ನು ಒದಗಿಸಿಕೊಟ್ಟಂಥ, ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಪಿ. ಎಂ ಭಂಗಿ (ಜಮಖಂಡಿ).—ಮಾನ್ಯ ಅಧ್ಯಕ್ಷಣಿಯವರೇ, ಇವತ್ತು ಮಾನ್ಯ ಮುಖ್ಯ ಮಂತ್ರಿಗಳು ಮಂಡಿಸಿರತಕ್ಕಂಥ ಕೈಗಾರಿಕೆಗಳ ಬೇಡಿಕೆಗಳಿಗೆ ನಾನು ಸಂಪೂರ್ಣ ಬೆಂಬಲ ನೀಡಿ ಈ ಸಂದರ್ಭದಲ್ಲಿ ಸ್ಮಾಲ್ ಸ್ಕೇಲ್ ಇಂಡಸ್ಟ್ರೀಸ್ ವಿಚಾರದಲ್ಲಿ ನಾಲ್ಕಾರು ಮಾತುಗಳನ್ನು ಹೇಳ ಬಯಸುತ್ತೇನೆ ಸಣ್ಣ ಕೈಗಾರಿಕೆಗಳಲ್ಲಿ ಮುಖ್ಯವಾದ ಕೈಗಾರಿಕೆ ಕೈಮಗ್ಗ. ಈ ಕೈಮಗ್ಗದ ನೇಕಾರರಿಗೆ ಯಾವುದೇ ರೀತಿಯ ಅನುಕೂಲಗಳಾಗಿಲ್ಲ. ಕೈಮಗ್ಗದ ಕೈಗಾರಿಕೆಯ ವಿಷಯವಾಗಿ ಕೇಂದ್ರ ಸರ್ಕಾರದವರಾಗಲೀ, ಹಾಗೂ ರಾಜ್ಯ ಸರ್ಕಾರದವರಾಗಲೀ ಇದುವರೆಗೆ ಯಾವುದೇ ರೀತಿಯ ಲಕ್ಷ್ಯ ಕೊಟ್ಟಿಲ್ಲ. ಆದರೆ, ಸುದೈವದಿಂದ ನಮ್ಮ ಕೇಂದ್ರ ಸರ್ಕಾರದವರು ಶಿವರಾಂ ಸಮಿತಿಯೊಂದು ಹಿಂದೆಯೇ ನೇಮಿಸಿದರು. ಆ ಶಿವರಾಮ್ ಸಮಿತಿಯವರು ಕೈಮಗ್ಗದ ಕೈಗಾರಿಕೆ ಅಭಿವೃದ್ಧಿಯ ಬಗ್ಗೆ ಅಖಂಡ ಭಾರತದಲ್ಲೆಲ್ಲಾ ಸಂಚರಿಸಿ ಸಂಪೂರ್ಣವಾಗಿ ಅಭ್ಯಾಸ ಮಾಡಿ, ಧೀರ್ಘವಾಗಿ ಚರ್ಚಿಸಿ, ಎರಡು ವರ್ಷಗಳ ಹಿಂದೆಯೇ ಒಂದು ವರದಿಯನ್ನು ಕೇಂದ್ರ ಸರ್ಕಾರಕ್ಕೆ ಒಪ್ಪಿಸಿದರು. ಆ ರಿಪೋರ್ಟ್‌ಗನುಸಾರವಾಗಿ ಪ್ರತಿಯೊಂದು ರಾಜ್ಯದಲ್ಲಿಯೂ, ಕೇಂದ್ರ ಸರ್ಕಾರದವರು ಒಂದು ಕೈಗಾರಿಕಾ ಅಭಿವೃದ್ಧಿ ಯೋಜನೆಯನ್ನು ಮಾಡಿದರು. ಮೊಟ್ಟಮೊದಲು ಕೇಂದ್ರ ಸರ್ಕಾರದವರು ಅಖಂಡ ಭಾರತದಲ್ಲಿ, ಇಂಟೆನ್ಸಿವ್ ಹ್ಯಾಂಡ್‌ಲೂಮ್ ಡೆವಲಪ್‌ಮೆಂಟ್ ಪ್ರಾಜೆಕ್ಟನ್ನು ಬನಹಟ್ಟಿಯಲ್ಲಿ ಸ್ಥಾಪನೆ ಮಾಡಿದರು ತದನಂತರ ಎರಡನೆ ಪ್ರಾಜೆಕ್ಟನ್ನು ಹಿಡಕಲ್, ಗುಳ್ಳೇದಗುಡ್ಡದಲ್ಲಿ ಪ್ರಾರಂಭ ಮಾಡಿದರು, ಮೂರನೆಯ ಪ್ರಾಜೆಕ್ಟನ್ನು ಗದಗ-ಬೆಟಗೇರಿಯಲ್ಲಿ ಪ್ರಾರಂಭ ಮಾಡುವುದಕ್ಕೆ ಮಂಜೂರಾತಿ ಕೊಟ್ಟಿದ್ದಾರೆ. ನಾಲ್ಕನೆಯದಾಗಿ, ಬೆಂಗಳೂರಿನಲ್ಲಿ ಎಕ್ಸ್‌ಪೋರ್ಟ್ ಓರಿಯಂಟೆಡ್ ಪ್ರಾಜೆಕ್ಟನ್ನು ಕೇಂದ್ರ ಸರ್ಕಾರದ ಸಹಾಯದಿಂದಲೇ ಪ್ರಾರಂಭ ಮಾಡಿದೆ. ಉಳಿದ 3 ಪ್ರಾಜೆಕ್ಟ್‌ಗಳು ರಾಮದುರ್ಗ, ರಾಣೆಬೆನ್ನೂರು, ಬಸವಕಲ್ಯಾಣದಲ್ಲಿ ರಾಜ್ಯಸರ್ಕಾರದ ಸಹಾಯದಿಂದ ಪ್ರಾರಂಭವಾಗಿವೆ ದುರ್ದೈವದಿಂದ ಈ 7 ಪ್ರಾಜೆಕ್ಟ್‌ಗಳಿಗೂ ಕೇಂದ್ರ ಸರ್ಕಾರದಿಂದ ಹಾಗೂ ರಾಜ್ಯ ಸರ್ಕಾರದಿಂದ ಸಾಕಷ್ಟು ಧನ ಸಹಾಯ ಇಲ್ಲದೆ ಇರುವುದರಿಂದ ಈಗ ಈ ಪ್ರಾಜೆಕ್ಟುಗಳು ಮುಚ್ಚಿ ಹೋಗುವ ಪ್ರಸಂಗ ಬಂದಿದೆ.

ಈ ದೃಷ್ಟಿಯಿಂದ ಈ ಸಮಯದಲ್ಲಿ ಮಾನ್ಯ ಮುಖ್ಯ ಮಂತ್ರಿಗಳಿಗೂ ಮತ್ತು ಕೈಗಾರಿಕಾ ರಾಜ್ಯ ಸಚಿವರಾದ ಶ್ರೀ ವೀರಪ್ಪ ಮೊಯಿಲಿ ಅವರಿಗೂ ಹೇಳುವುದೇನೆಂದರೆ ಈ 7 ಪ್ರಾಜೆಕ್ಟ್‌ಗಳೂ ಚೆನ್ನಾಗಿ ನಡೆಯಬೇಕು ಬೆಳೆಯಬೇಕು, ನೇಕಾರರು ಉದ್ಧಾರವಾಗಬೇಕು ಎನ್ನುವ ದೃಷ್ಟಿಯಿಂದ ಸಾಕಷ್ಟು ಹಣವನ್ನು ಈ ಕೈಗಾರಿಕಾ ಮ್ಯಾನೇಜಿಂಗ್ ಡೈರೆಕ್ಟರಿಗೆ ಒದಗಿಸಬೇಕು. ಇಲ್ಲದೇ ಹೋದರೆ ಕೈಮಗ್ಗದ ನೇಕಾರರು ಬಾಂಡೆಡ್ ಲೇಬರರ್ ಆಗಿ ಕೇವಲ ಗುಲಾಮರಾಗಿ ಸಾಯುವ ಪ್ರಸಂಗ ಬರುತ್ತದೆ. ಆದ್ದರಿಂದ ದಯವಿಟ್ಟು ಈ ವಿಷಯದ ಕಡೆಗೆ ಹೆಚ್ಚಿಗೆ ಗಮನ ಕೊಡಬೇಕು. ಸಣ್ಣ ಕೈಗಾರಿಕೆಗಳಲ್ಲಿ ಕೈಮಗ್ಗದ ಕೈಗಾರಿಕೆಯೂ ಬಹಳ ಮಹತ್ವದ ಕೈಗಾರಿಕೆಯಾಗಿರುವುದರಿಂದ ಕೇಂದ್ರ ಸರ್ಕಾರದವರು ತಮ್ಮ ಬಡ್ಜೆಟ್ಟಿನಲ್ಲಿ 40 ಕೋಟಿ ರೂಪಾಯಿಗಳನ್ನು ಕಾದಿರಿಸಿ ಇದನ್ನು ರಾಜ್ಯ ಸರ್ಕಾರಗಳಿಗೆ ಹಂಚುತ್ತಿದ್ದಾರೆ. ಈ 40 ಕೋಟಿ ರೂಪಾಯಿಗಳನ್ನು ಕರ್ನಾಟಕಕ್ಕೆ ಸಿಂಹಪಾಲು ಬರುವಂತೆ ಸರ್ಕಾರ ಪ್ರಯತ್ನ ಮಾಡಬೇಕು. ಈ ಪ್ರಾಜೆಕ್ಟ್ ಸರಿಯಾಗಿ ನಡೆಯಬೇಕಾದರೆ ನೂಲಿನ ಅವಶ್ಯಕತೆ ಇದೆ. ರಾಮೆಟೀರಿಯಲ್ ಇನಿದೆ ಇದಕ್ಕೆ ನೂಲಿನ ಮಿಲ್‌ಗಳಿಗೆ ಯೋಗ್ಯ ದರ ದೊರೆಯುವಂತೆ ರಾಜ್ಯದಲ್ಲಿರುವಂತಹ ಮಿಲ್ಲಿನ ಮೇಲೆ ನಿಯಂತ್ರಣ ಹಾಕಿ ಅವುಗಳಿಂದ ಈ ಪ್ರಾಜೆಕ್ಟ್‌ಗಳಿಗೆ ನೂಲು ಬರುವ ವ್ಯವಸ್ಥೆ ಮಾಡಬೇಕು. ಈ ಸಮಯ

ದಲ್ಲಿ, ನಾನು ಸೂಚಿಸುವುದೇನೆಂದರೆ ಮಿನೀ ಸ್ಪಿನಿಂಗ್ ಮಿಲ್ಸ್ ನೂಲಿನ ಗಿರಣಿಗಳನ್ನು ಈ ರಾಜ್ಯದಲ್ಲಿ ಖಾದಿ ಬೋರ್ಡಿನವರು ಪ್ರಾರಂಭ ಮಾಡಿದ್ದಾರೆ. ಮಿನಿ ಸ್ಪಿನಿಂಗ್ ಮಿಲ್ಸ್ 48 ಸ್ಪಿಂಡಲ್ಸ್‌ದ 9 ಫ್ರೇಮ್‌ಗಳನ್ನು ಹಾಕಿ ಮಿಲ್ಸ್ ನಡೆಸಿದರೆ ಎಲ್ಲೆಲ್ಲಿ ವೀವರ್ಸ್ ಜನಸಂಖ್ಯೆ ಜಾಸ್ತಿ ಇದೆ, ಎಲ್ಲೆಲ್ಲಿ ವೀವರ್ಸ್ ಪ್ರಾಜೆಕ್ಟ್‌ಗಳು ಇವೆ, ಆ ಸ್ಥಳದಲ್ಲಿ, ಮಿನಿ ಸ್ಪಿಂಡ್ಲಿಂಗ್ ಯೋಜನೆಗಳಿಗೆ ನೂಲು ದೊರೆಯುವ ವ್ಯವಸ್ಥೆ ಮಾಡಬೇಕೆಂದು ಈ ಸಮಯದಲ್ಲಿ ಹೇಳಬಯಸುತ್ತೇನೆ. ಮಿನಿ ಸ್ಪಿನಿಂಗ್ ಮಿಲ್ಲಿಗೆ ಎರಡು ಲಕ್ಷ ರೂಪಾಯಿಗಳನ್ನು ಕೊಟ್ಟರೆ ಈ ಮಿನಿ ಸ್ಪಿನಿಂಗ್ ಮಿಲ್‌ನಿಂದ 40 ಕೌಂಟಿನ ನೂಲು ದೊರೆಯುತ್ತದೆ. 40ನೇ ನಂಬರಿನ ನೂಲು ಎಲ್ಲಾ ಪ್ರಾಜೆಕ್ಟ್‌ಗಳಿಗೂ ಸಾಕಷ್ಟು ದೊರೆಯುವ ಪ್ರಯತ್ನ ಮಾಡಬೇಕು ಎಂದು ನಾನು ಈ ಸಮಯದಲ್ಲಿ ಹೇಳಬಯಸುತ್ತೇನೆ ಕೈಮಗ್ಗದ ಉದ್ಯಮ ಬೃಹದಾಕಾರವಾಗಿ ರಾಜ್ಯದ ತುಂಬಾ ಬೆಳೆಯುವ ಉದ್ಯೋಗದ ಮೂಲಕ ಇದಕ್ಕೆ "ಸಪರೇಟ್ ಡೈರೆಕ್ಟೋರೇಟ್ ಫಾರ್ ಹ್ಯಾಂಡ್ಲೂಮ್" ಇಂಡಸ್ಟ್ರಿ ಎಂದು ಮಾಡಬೇಕೆಂದು ನಾವು ಪದೇ ಪದೇ ಹೇಳುತ್ತಿದ್ದೇವೆ. ಆದಾಗ್ಯೂ ಕೂಡ ಸರ್ಕಾರದವರು ಈ ವಿಷಯದಲ್ಲಿ ಗಮನ ಕೊಟ್ಟಿಲ್ಲ. ಶಿವರಾಮ್ ಸಮಿತಿಯವರೂ ಕೂಡ ಹ್ಯಾಂಡ್ಲೂಮ್ ಇಂಡಸ್ಟ್ರಿಗೆ ಸಪರೇಟ್ ಡೈರೆಕ್ಟೋರೇಟ್ ನೇಮಕ ಮಾಡಬೇಕೆಂದು ಶಿಫಾರಸ್ಸು ಮಾಡಿದ್ದಾರೆ. ನಮ್ಮ ರಾಜ್ಯದ ಎಸ್ಟಿಮೇಟ್ ಕಮಿಟಿಯವರೂ ಕೂಡ ಈ ಹ್ಯಾಂಡ್ಲೂಮ್ ಕೈಗಾರಿಕೆಗೆ 'ಸಪರೇಟ್ ಡೈರೆಕ್ಟೋರೇಟ್' ನೇಮಕ ಮಾಡಬೇಕೆಂದು ಶಿಫಾರಸ್ಸು ಮಾಡಿದ್ದಾರೆ. ಆದ್ದರಿಂದ ಈ ವಿಷಯದಲ್ಲಿ ಸರ್ಕಾರದವರು ಗಮನ ಕೊಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ. ನಮ್ಮ ಅಕ್ಕಪಕ್ಕದ ರಾಜ್ಯಗಳಾದ ಆಂಧ್ರಪ್ರದೇಶ, ತಮಿಳುನಾಡು ಕೇರಳ ಈ ರಾಜ್ಯಗಳಲ್ಲಿ ಈ ಹ್ಯಾಂಡ್ಲೂಮ್ ಇಂಡಸ್ಟ್ರಿಗೆ ಸಪರೇಟ್ ಡೈರೆಕ್ಟೋರೇಟ್ ನೇಮಕ ಮಾಡಿದ್ದಾರೆ. ಆದಕಾರಣ ನಮ್ಮ ರಾಜ್ಯದಲ್ಲಿಯೂ ಸಹ ಈ ಹ್ಯಾಂಡ್ಲೂಮ್ ಇಂಡಸ್ಟ್ರಿಗೆ ಸಪರೇಟ್ ಡೈರೆಕ್ಟೋರೇಟ್ ಮಾಡುವ ಅವಶ್ಯ ಇದೆ. ನಮ್ಮ ರಾಜ್ಯದಲ್ಲಿ ಕೂಡ ಮಾನ್ಯ ಮುಖ್ಯ ಮಂತ್ರಿಗಳು, ಹಾಗೂ ಮಾನ್ಯ ಕೈಗಾರಿಕಾ ಮಂತ್ರಿಗಳೂ ಸಪರೇಟ್ ಡೈರೆಕ್ಟೋರೇಟ್ ಮಾಡುತ್ತೇವೆ ಎಂದು ಅಸೆಂಬ್ಲಿ ಫ್ಲೋರ್‌ನಲ್ಲಿ ಆಶ್ವಾಸನೆಯನ್ನು ಕೊಟ್ಟಿದ್ದರು. ಅದನ್ನು ಕಾರ್ಯರೂಪಕ್ಕೆ ತಂದಿಲ್ಲ. 2 ವರ್ಷಗಳ ಹಿಂದೆ ಬಡ್ಜೆಟ್ಟಿನಲ್ಲಿ 5 ಲಕ್ಷ ರೂಪಾಯಿಗಳನ್ನು ಹ್ಯಾಂಡ್ಲೂಮ್ ಕೈಗಾರಿಕೆ ಮತ್ತು ಇದರ ಸಪರೇಟ್ ಡೈರೆಕ್ಟೋರೇಟ್ ಮಾಡುವುದಕ್ಕೋಸ್ಕರ ಕಾದಿರಿಸಿ ಇಟ್ಟಿದ್ದರು. ಆದರೆ ಆ ಹಣವನ್ನು ಬೇರೆ ಕಡೆಗೆ ಉಪಯೋಗ ಮಾಡಿದ್ದಾರೆ. ಹ್ಯಾಂಡ್ಲೂಮ್ ಡೈರೆಕ್ಟೋರೇಟ್ ಆಗಿಲ್ಲ. ಇದು ದುರ್ದೈವದ ಸಂಗತಿ. ಈ ದೃಷ್ಟಿಯಿಂದ ಈಗ ಸಣ್ಣ ಕೈಗಾರಿಕಾ ಮಂತ್ರಿಗಳಾದ ಶ್ರೀ ವೀರಪ್ಪ ಮೊಯಿಲಿ ಅವರು ಈ ಬಗ್ಗೆ ಹೆಚ್ಚಿನ ಗಮನ ಕೊಟ್ಟು ನಮ್ಮ ರಾಜ್ಯದಲ್ಲಿ ಶಾಶ್ವತವಾದ ಸಪರೇಟ್ ಹ್ಯಾಂಡ್ಲೂಮ್ ಇಂಡಸ್ಟ್ರಿ ಡೈರೆಕ್ಟೋರೇಟ್ ನೇಮಕ ಮಾಡಬೇಕೆಂದು ನಾನು ಸೂಚಿಸಬಯಸುತ್ತೇನೆ. ಪ್ರತಿಯೊಂದು ರಾಜ್ಯದಲ್ಲಿಯೂ ಹ್ಯಾಂಡ್ಲೂಮ್ ಇಂಡಸ್ಟ್ರಿಗೆ ಸಪರೇಟ್ ಡೈರೆಕ್ಟೋರೇಟ್ ಮಾಡಿದರೆ ಅದರ ಮುಖ್ಯಸ್ಥರಿಗೆ ಆಮಂತ್ರಣ ಕೊಟ್ಟು ಆಲ್ ಇಂಡಿಯಾ ಹ್ಯಾಂಡ್ಲೂಮ್ ಬೋರ್ಡಿಗೆ ಬರಮಾಡಿಕೊಳ್ಳುತ್ತಾರೆ. ಆಗ ಹ್ಯಾಂಡ್ಲೂಮ್ ಡೈರೆಕ್ಟರ್ ಅವರು ಹ್ಯಾಡ್ಲೂಮ್ ಬೋರ್ಡಿಗೆ ಹೋಗಿ ತಮ್ಮ ರಾಜ್ಯಗಳ ಹ್ಯಾಂಡ್ಲೂಮ್ ಇಂಡಸ್ಟ್ರಿಯ ಬಗ್ಗೆ ಸಾಕಷ್ಟು ಚರ್ಚೆ ಮಾಡಬಹುದು. ನಮ್ಮ ರಾಜ್ಯದಲ್ಲಿರುವ ಡೈರೆಕ್ಟರ್ ಆಫ್ ಇಂಡಸ್ಟ್ರೀಸ್ ಅವರಿಗೆ ಬೇರೆ ಕೆಲಸ ಇರುವುದರಿಂದ ಮತ್ತು ಅವರಿಗೆ ಹ್ಯಾಂಡ್ಲೂಮ್ ಇಂಡಸ್ಟ್ರೀಯ ಬಗ್ಗೆ ಸಾಕಷ್ಟು ಜ್ಞಾನ ಇಲ್ಲದೆ ಇರುವುದರಿಂದ ಅವರು ನಮ್ಮ ರಾಜ್ಯದ ಹ್ಯಾಂಡ್ಲೂಮ್ ಇಂಡಸ್ಟ್ರಿಯ ಬಗ್ಗೆ ಚರ್ಚೆ ಮಾಡಲು ಆಲ್ ಇಂಡಿಯಾ ಹ್ಯಾಂಡ್ಲೂಮ್ ಇಂಡಸ್ಟ್ರಿ ಬೋರ್ಡಿನಲ್ಲಿ ಭಾಗವಹಿಸಲು ಸಾಧ್ಯವಾಗುವುದಿಲ್ಲ. ಆದಕಾರಣ ದಯಮಾಡಿ ಈ ವಿಷಯದ ಕಡೆ ಗಮನ ಕೊಟ್ಟು ನಮ್ಮ ರಾಜ್ಯದಲ್ಲಿ ಒಂದು ಶಾಶ್ವತವಾದ, ಸಪರೇಟ್ ಹ್ಯಾಂಡ್ಲೂಮ್ ಇಂಡಸ್ಟ್ರಿ ಡೈರೆಕ್ಟೋರೇಟ್ ಮಾಡಬೇಕೆಂದು ನಾನು ಈ ಸಮಯದಲ್ಲಿ ಸೂಚಿಸಬಯಸುತ್ತೇನೆ.

ಹ್ಯಾಂಡ್ಲೂಮ್ ಕಾರ್ಪೋರೇಷನ್ ಬಗ್ಗೆ ಕೆಲವರು ತಕರಾರು ಮಾಡುತ್ತಾರೆ. ಏತಕ್ಕೆಂದರೆ ವೀವರ್ಸ್ ಕೋ ಆಪರೇಟೀವ್ ಸೊಸೈಟಿಗಳ ವಿರುದ್ಧ ಇವರು ಕೆಲಸ ಮಾಡುತ್ತಾರೆ ಎಂದು ಇವರ ಅಭಿಪ್ರಾಯ. ಆ ಅಭಿಪ್ರಾಯ ಸರಿಯಲ್ಲ ಎಂದು ನಾನು ಸ್ಪಷ್ಟವಾಗಿ ಹೇಳುತ್ತೇನೆ. ಹ್ಯಾಂಡ್ಲೂಮ್ ಡೆವಲಪ್‌ಮೆಂಟ್ ಕಾರ್ಪೋರೇಷನ್‌ನವರು ನಮ್ಮ ರಾಜ್ಯದಲ್ಲಿರತಕ್ಕ 1,37,000

ಕೈಮಗ್ಗಗಳ ಪೈಕಿ 4 ಸಾವಿರ ಕೈಮಗ್ಗಗಳನ್ನು ಮಾತ್ರ ನಡೆಸುತ್ತಿದ್ದಾರೆ. ಇನ್ನು ಉಳಿದ ಕೈಮಗ್ಗಗಳ ನೇಕಾರರು ಬಾಂಡೆಡ್ ಲೇಬರಲ್ಸ್ ಪದ್ಧತಿಯ ಮೇಲೆ ಕೆಲಸ ಮಾಡುತ್ತಿದ್ದಾರೆ. ಅವರನ್ನು ಬಿಡುಗಡೆ ಮಾಡಬೇಕು. ಈಗ ನಮ್ಮಲ್ಲಿ ಪ್ರೊಡಕ್ಷನ್ ಅಂಡ್ ಸೇಲ್ಸ್ ಸೊಸೈಟಿಗಳು ಕೆಲಸ ಮಾಡುತ್ತಿವೆ. ಈ ಸೊಸೈಟಿಗಳಿಗೆ ಸಾಕಷ್ಟು ಹಣವನ್ನು ಕೇಂದ್ರ ಸರ್ಕಾರದ ಬಡ್ಜೆಟ್ಟಿನಲ್ಲಿ ನಮ್ಮ ರಾಜ್ಯ ಸರ್ಕಾರ ಪಡೆದುಕೊಂಡು ಈ ವೀವರ್ಸ್ ಕೋ ಆಪರೇಟೀವ್ ಸೊಸೈಟಿಗಳನ್ನು ಬೆಳೆಸಿದರೆ ಅನುಕೂಲವಾಗುತ್ತದೆ. ಆ ರೀತಿ ಕೇಂದ್ರ ಸರ್ಕಾರದಿಂದ ಹಣ ಸಹಾಯವನ್ನು ಪಡೆದುಕೊಂಡರೆ ವೀವರ್ಸ್ ಸೊಸೈಟಿಗಳಿಗೂ ಹಣ ಸಿಕ್ಕುತ್ತದೆ. ಹ್ಯಾಂಡ್ಲೂಮ್ ಡೆವಲಪ್‌ಮೆಂಟ್ ಕಾರ್ಪೊರೇಷನ್‌ಗೂ ಹಣ ಸಿಕ್ಕುತ್ತದೆ. ಈ ದೃಷ್ಟಿಯಿಂದ ಹ್ಯಾಂಡ್ಲೂಮ್ ಡೆವಲಪ್‌ಮೆಂಟ್ ಕಾರ್ಪೊರೇಷನ್ ಬೆಳೆಸಿದರೆ ಕೈಮಗ್ಗದ ಸೊಸೈಟಿಗಳು ಹಾಳಾಗುತ್ತವೆ ಎನ್ನುವ ಭಾವನೆ ತಪ್ಪು. ಆದಕಾರಣ ಕೈಮಗ್ಗದ ನೇಕಾರರ ಸೊಸೈಟಿಯನ್ನು ನಡೆಸುವವರು, ಮತ್ತು ನೇಕಾರರು ಯಾವ ರೀತಿಯ ಭಯ ಪಡುವ ಕಾರಣ ಇಲ್ಲ. ನಮ್ಮ ರಾಜ್ಯದಲ್ಲಿ ವೀವರ್ಸ್ ಅಪೆಕ್ಸ್ ಕೋ ಆಪರೇಟೀವ್ ಸೊಸೈಟಿಗಳು ಸರಿಯಾಗಿ ಕೆಲಸ ಮಾಡುವುದಿಲ್ಲ, ಈ ದೃಷ್ಟಿಯಿಂದ ನೇಕಾರರಿಗೆ ಸೊಸೈಟಿಗಳ ಕಡೆಯಿಂದ ಸಾಕಷ್ಟು ಹಣ ಸಹಾಯ ಸಿಕ್ಕುವುದಿಲ್ಲ. ಅದರ ಸಲುವಾಗಿ ಸರ್ಕಾರದವರು ನೇಕಾರರ ಸೊಸೈಟಿಗಳನ್ನು ಪುನರ್‌ರಚನೆ ಮಾಡಬೇಕು ಎಂದು ಒಂದು ಯೋಜನೆ ಮಾಡಿ ಈ ಯೋಜನೆಯನ್ನು ಕಾರ್ಯಾಚರಣೆಗೆ ತರಬೇಕು ಎಂದು ಪ್ರತಿಯೊಂದು ಜಿಲ್ಲೆಯಲ್ಲಿಯೂ ಡೆಪ್ಯುಟಿ ರಿಜಿಸ್ಟ್ರಾರ್ ಅವರು ಆದೇಶವನ್ನು ಕೊಟ್ಟಿದ್ದಾರೆ. ಆದರೆ ಈ ಆದೇಶ ಇಂದಿನವರೆಗೂ ಆಚರಣೆಗೆ ಬಂದಿಲ್ಲ. ಕೂಡಲೇ ಈ ಆದೇಶವನ್ನು ಅಮಲಿನಲ್ಲಿ ತಂದು ಪ್ರತಿಯೊಂದು ಜಿಲ್ಲೆಯಲ್ಲಿಯೂ ಡಿಫಂಕ್ಟ್ ಸೊಸೈಟಿಗಳನ್ನು ತೆಗೆದುಹಾಕಿ ಸೊಸೈಟಿಗಳನ್ನು ರೀ ಆರ್ಗನೈಜ್ ಮಾಡಿ ನೇಕಾರರಿಗೆ ಪ್ರೋತ್ಸಾಹ ಕೊಡಬೇಕೆಂದು ನಾನು ಈ ಸಮಯದಲ್ಲಿ ಸೂಚಿಸಬಯಸುತ್ತೇನೆ.

ಕೈಮಗ್ಗದ ನೇಕಾರರಿಗೆ ರಕ್ಷಣೆ ಕೊಡುವ ದೃಷ್ಟಿಯಿಂದ ಟೆಕ್ಸ್‌ಟೈಲ್ ಕಮಿಷನರು ಒಂದು ಆಜ್ಞೆಯನ್ನು ಹೊರಡಿಸಿ ಬಣ್ಣದ ಸೀರೆಗಳನ್ನು ಪವರ್ ಲೂಮ್‌ಗಳು ತಯಾರು ಮಾಡಬಾರದು ಎಂದು ಒಂದು ಬ್ಯಾನ್ ಆರ್ಡರ್ ಹೊರಡಿಸಿದ್ದರು. ಈ ಆರ್ಡರನ್ನು ಹೈಕೋರ್ಟಿನವರು ಮತ್ತು ಸುಪ್ರೀಮ್ ಕೋರ್ಟಿನವರು 6-5-77ರಂದು ಸ್ಟ್ರಕ್ ಡೌನ್ ಮಾಡಿದರು. ರದ್ದು ಮಾಡಿದರು. ಅನಂತರ ಟೆಕ್ಸ್‌ಟೈಲ್ ಕಮಿಷನರು ಒಂದು ತಿದ್ದುಪಡಿ ಆದೇಶವನ್ನು ಕೊಟ್ಟು ನೇಕಾರರ ರಕ್ಷಣೆಗೋಸ್ಕರ ಇದು 31ನೇ ಮಾರ್ಚಿ 1982 ರವರೆಗೂ ಉಳಿಯತಕ್ಕದ್ದು ಎಂದು ಆಜ್ಞೆ ಮಾಡಿದ್ದಾರೆ.

ಈ ಆಜ್ಞೆ ಏಪ್ರಿಲ್ 15,1975 ರಂದು ಬಂದಾಗ್ಯೂ ಕೂಡ, ಎರಡು ವರ್ಷಗಳಾಗಿದ್ದಾಗ್ಯೂ ಕೂಡ ಇವತ್ತಿನವರೆಗೆ ಅದು ಅಮಲಿನಲ್ಲಿ ಬಂದಿಲ್ಲ. ಹಗಲೂ ರಾತ್ರಿ 3-3 ಶಿಫ್ಟ್ ಮಾಡಿಕೊಂಡು ಅಲ್ಲಿ ಪವರ್‌ಲೂಮ್ ಮಾಲೀಕರು ಬಣ್ಣದ ಸೀರೆ ಹಚ್ಚಿಸುವ ಕೆಲಸ ನಡೆಸುತ್ತಿದ್ದಾರೆ. ಅದು ಸರಿಯಲ್ಲ. ಇದರಿಂದ ಕೈ ಮಗ್ಗದವರಿಗೆ ದೊಡ್ಡ ತೊಂದರೆಯುಂಟಾಗಿದೆ. ಆದುದರಿಂದ ನಮ್ಮ ರಾಜ್ಯದಲ್ಲಿರುವ ಕೈ ಮಗ್ಗದವರ ಹಿತದೃಷ್ಟಿಯಿಂದ ಡಿ. ಸಿ. ಯವರು ಇದರ ಬಗ್ಗೆ ಆಜ್ಞೆಯನ್ನು ಜಾರಿ ಮಾಡಿ ಪವರ್ ಲೂಮಿನವರು ಬಣ್ಣದ ಬಟ್ಟೆಗಳನ್ನು ತಯಾರು ಮಾಡದ ಹಾಗೆ ಯೋಗ್ಯ ಕ್ರಮವನ್ನು ಕೈಕೊಳ್ಳಬೇಕು. ಒಂದು ವೇಳೆ ಆ ಆಜ್ಞೆಯನ್ನು ಮೀರಿ ಯಾರಾದರೂ ನಡೆದರೆ ಅವರ ಮೇಲೆ ಕ್ರಿಮಿನಲ್ ಕೇಸ್ ದಾಖಲೆ ಮಾಡಬೇಕು. ಆ ರೀತಿಯ ಉಗ್ರಕ್ರಮವನ್ನು ತೆಗೆದುಕೊಳ್ಳದೇ ಇರುವುದರಿಂದ ಪವರ್ ಲೂಂ ಮಾಲೀಕರು ಬಹಳಷ್ಟು ಹಣವನ್ನು ಮಾಡಿಕೊಂಡು, ತಮ್ಮ ಆಜ್ಞೆಯನ್ನು ರದ್ದುಗೊಳಿಸಬೇಕೆಂದು ಪ್ರಯತ್ನ ನಡೆಸಿದ್ದಾರೆ. ಆದುದರಿಂದ ಈ ಸಮಯದಲ್ಲಿ ದಯಮಾಡಿ ಸರ್ಕಾರದವರು ಕೈ ಮಗ್ಗದ ಉದ್ಯೋಗ ಮತ್ತು ಕೈ ಮಗ್ಗದವರ ರಕ್ಷಣೆ ಮಾಡಬೇಕೆಂದು ಕೇಳಿಕೊಳ್ಳುತ್ತಾ, ದುರ್ಬಲ ವರ್ಗದವರನ್ನು ರಕ್ಷಣೆ ಮಾಡಬೇಕೆಂದು ಹೇಳಬಯಸುತ್ತೇನೆ. ಇವತ್ತು ಈ ದುರ್ಬಲ ವರ್ಗದವರು ಬೆಂಗಳೂರಿಗೆ ಬರುವುದಕ್ಕೂ ಕೂಡ ಅವರಲ್ಲಿ ದುಡ್ಡಿಲ್ಲ, ಇಂಥಾ ಪರಿಸ್ಥಿತಿಯಲ್ಲಿ ದುರ್ಬಲ ವರ್ಗದ ನೇಕಾರರು ಸಾಹುಕಾರರ ಹತ್ತಿರ ಜೀತದಾಳುಗಳ ಹಾಗೆ ಅವರ ಕೈಕೆಳಗೆ ಕೆಲಸ ಮಾಡುತ್ತಿದ್ದಾರೆ. ಅಂಥ ಬಡನೇಕಾರರಿಗೆ ತಾವು ರಕ್ಷಣೆ ಕೊಡಬೇಕೆಂದು ಕಳಕಳಿಯಿಂದ ಪ್ರಾರ್ಥನೆ ಮಾಡುತ್ತೇನೆ. ಇವತ್ತು ಪ್ರಾಜೆಕ್ಟ್‌ಗಳಲ್ಲಿ ಕೇವಲ 4 ಸಾವಿರ ನೇಕಾರರು ತೊಡಗಿದ್ದಾರೆ, ಆದರೆ ನಮ್ಮ ಗುರಿ ಪ್ರತಿಯೊಂದು ಪ್ರಾಜೆಕ್ಟಿನಲ್ಲಿಯೂ 10 ಸಾವಿರದ ವರೆಗೆ ಕೈಮಗ್ಗದ ನೇಕಾರರು ಈ ಉದ್ಯೋಗದಲ್ಲಿ ತೊಡಗಿಸಿ 7 ಪ್ರಾಜೆಕ್ಟ್‌ಗಳಲ್ಲಿ 70ಸಾವಿರದ ಕೈಮಗ್ಗ

ನಡೆಯಬೇಕು ಎನ್ನುವ ನಮ್ಮ ಟಾರ್ಗೆಟ್ ಏನಿದೆ ಆ ಗುರಿಯನ್ನು ಮುಟ್ಟುವ ದಿಶೆಯಲ್ಲಿ ನಮ್ಮ ಸರ್ಕಾರದವರು ಕಾರ್ಯ ಪ್ರವೃತ್ತರಾಗಬೇಕೆಂದು ತಿಳಿಸಿ ಇಷ್ಟು ಹೊತ್ತು ಮಾತನಾಡಲು ಅವಕಾಶ ಕೊಟ್ಟ ಅಧ್ಯಕ್ಷಣೀಯವರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಎಚ್. ಡಿ. ದೇವೇಗೌಡ (ಹೊಳೆನರಸೀಪುರ).—ಮಾನ್ಯ ಸಭಾಧ್ಯಕ್ಷಣೀಯವರೇ, ಕೈಗಾರಿಕೆಗಳಿಗೆ ಸಂಬಂಧಪಟ್ಟ ಹಾಗೆ ಏನು ಬೇಡಿಕೆಗಳನ್ನು ಮಾನ್ಯ ಕೈಗಾರಿಕಾ ಸಚಿವರು ಮಂಡಿಸಿದ್ದಾರೆ ಅವರ ಬಗ್ಗೆ ಒಂದೆರಡು ಮಾತುಗಳನ್ನಾಡಲು ಅವಕಾಶ ಕೊಟ್ಟಿದ್ದಕ್ಕಾಗಿ ತಮ್ಮನ್ನು ಮೊದಲಿಗೆ ವಂದಿಸುತ್ತೇನೆ.

ಮಾನ್ಯ ಶ್ರೀ ಪುಟ್ಟಸ್ವಾಮಿಯವರು, ಸುಮಾರು ಒಂದೂವರೆ ಗಂಟೆಗಳ ಕಾಲ ಹಲವಾರು ವಿಷಯಗಳನ್ನು ಪ್ರಸ್ತಾಪ ಮಾಡಿದರು. ಪ್ರಪ್ರಥಮವಾಗಿ ನಾನು ಸರ್ಕಾರಿ ಸಂಸ್ಥೆಗಳ ಬಗ್ಗೆ ಅಧ್ಯಯನ ಮಾಡತಕ್ಕ ಸಮಿತಿ ಏನಿದೆ, ಅವರ ಒಂದು ಒಳ್ಳೆಯ ಕೆಲಸವನ್ನು ಮಾಡಿದ್ದಕ್ಕಾಗಿ ಅವರಿಗೆ ಅಭಿನಂದಿಸುತ್ತೇನೆ. ಬಹುಶಃ ಈ ಸದನದ ಇತಿಹಾಸದಲ್ಲಿ ಇಂಥಾ ಒಂದು ಉತ್ತಮವಾದ ರಿಪೋರ್ಟ್‌ನ್ನು ಯಾರೂ ಕೊಟ್ಟಿದ್ದು ಇಲ್ಲವೆಂದು ಹೇಳಿದರೆ ಅತಿಶಯೋಕ್ತಿಯಾಗಲಿಕ್ಕೆ ಇಲ್ಲ. ಮಾನ್ಯ ಸಭಾಧ್ಯಕ್ಷಣೀಯವರೇ, ಬಹುಶಃ ನಾನು ಈ ಮಾತನ್ನು ಹೇಳುವಾಗ ಬೇರೆ ಸಮಿತಿಗಳವರು ಚೆನ್ನಾಗಿ ಕೆಲಸ ಮಾಡಿಲ್ಲವೆಂದು ಹೇಳುತ್ತಿಲ್ಲ. ಆದರೆ ಪಬ್ಲಿಕ್ ಅಂಡರ್ ಟೇಕಿಂಗ್ ಕಮಿಟಿಯ ಚೇರ್ಮನ್‌ರವರು ಅಷ್ಟು ದೂರ ಹೋಗಿ ಸರ್ಕಾರಿ ಸಂಸ್ಥೆಗಳ ಕೆಲಸದ ಬಗ್ಗೆ ಬಹಳ ಆಳವಾಗಿ ಅಧ್ಯಯನ ಮಾಡಿದ್ದಾರೆಂದು ಹೇಳಿದರೆ ಅವರನ್ನು ಗುಣಗಾನ ಮಾಡಿದಂತಾಗುತ್ತದೆ. ನಾನು ಈ ಕೈಗಾರಿಕೆಗಳ ಇಲಾಖೆಯ ಬೇಡಿಕೆಗಳ ಸಂಬಂಧದಲ್ಲಿ ಈ ಸದನದಲ್ಲಿ ಹಲವಾರು ಸಾರಿ ಸಲಹೆಗಳನ್ನು ಕೊಟ್ಟಿದ್ದೇನೆ ಆದರೆ ದುರ್ದೈವ ವಿರೋಧ ಪಕ್ಷದ ವತಿಯಿಂದ ಬರತಕ್ಕ ಸಲಹೆಗಳನ್ನು ಸಾಕಷ್ಟು ಕಾರ್ಯರೂಪಕ್ಕೆ ತರತಕ್ಕದರಲ್ಲಿ ನಿರಾಸಕ್ತಿಯನ್ನು ವಹಿಸಬಾರದು. ನಾನು ಈ ಸದನದಲ್ಲಿ 1973-74ರಲ್ಲಿ ಈ ಇಲಾಖೆಯ ಬೇಡಿಕೆಗಳ ಬಗ್ಗೆ ಪ್ರಸ್ತಾಪ ಮಾಡತಕ್ಕಂಥ ಕಾಲದಲ್ಲಿ ಈ ಇಲಾಖೆಯ ಈ ರೀ ಆರ್ಗನೈಜ್ ಮಾಡಿ ಎಂದು ಹೇಳಿದ್ದೆ. ಅದನ್ನು ಅಂದು ಇದ್ದಂಥ ಕೈಗಾರಿಕಾ ಸಚಿವರು ಸ್ವಾಗತ ಮಾಡಿದ್ದರು. ಹಾಗೂ ಅದನ್ನು ತ್ವರಿತವಾಗಿ ಮಾಡುತ್ತೇವೆಂದು ಹೇಳಿದ್ದರು. ಆದರೆ ಅದರ ಬಗ್ಗೆ ಇನ್ನುವರೆಗೂ ಯಾವುದೇ ರೀತಿಯ ಕ್ರಮವನ್ನು ತೆಗೆದುಕೊಂಡಿಲ್ಲ ಎನ್ನತಕ್ಕಂಥ ಮಾತನ್ನು ಹೇಳಿದರೆ ಬಹುಶಃ ಸರ್ಕಾರದವರು ಅನ್ಯಥಾ ಭಾವನೆ ಮಾಡಬಾರದು. ಇದನ್ನು ಬಹಳ ವಿಷಾದದಿಂದ ಹೇಳಬೇಕಾಗಿದೆ. ಈ ಇಲಾಖೆ ಹೆಚ್ಚು ಪರಿಣಾಮಕಾರಿಯಾಗಿ ಕೆಲಸ ಮಾಡಬೇಕಾದರೆ ಇವತ್ತು ಏನು ಮೇಲಿನ ಹಂತದಲ್ಲಿ ಅಧಿಕಾರ ಕೇಂದ್ರೀಕೃತವಾಗಿತ್ತು ಅದನ್ನು ತಪ್ಪಿಸಬೇಕಾದರೆ ಈ ಒಂದು ರೀ ಆರ್ಗನೈಜೇಷನ್ಸ್ ಅತ್ಯಾವಶ್ಯಕವೆಂದು ಹೇಳಿದ್ದೇನೆ. ಒಂದು ವಿಷಯವನ್ನು ತಮ್ಮ ಗಮನಕ್ಕೆ ತರಲಿಚ್ಛೆಪಡುತ್ತೇನೆ. ರಾ ಮೆಟೀರಿಯಲ್ಸ್ ಜಿಲ್ಲಾ ಮಟ್ಟದಲ್ಲಿರತಕ್ಕ ಒಬ್ಬ ಸಣ್ಣ ಕೈಗಾರಿಕೆ ನಡೆಸತಕ್ಕವರಿಗೆ ಬೇಕಾದರೆ ಅವರು ಬೆಂಗಳೂರಿಗೆ ಬರಬೇಕು. ಇಲ್ಲಿ ಡೈರೆಕ್ಟರ್‌ರವರ ಆಫೀಸಿನಲ್ಲಿ ಎಲ್ಲರನ್ನೂ ನೋಡಿ ಅವರ ಒಂದು ಮರ್ಜಿಯಿಂದ ತನಗೆ ಬೇಕಾದಂಥ ಸಣ್ಣ ಪುಟ್ಟ ಮೆಟೀರಿಯಲ್ಸ್‌ನ್ನು ಪಡೆಯಬೇಕಾಗಿದೆ. ಆದರೆ ಅಸಿಸ್ಟೆಂಟ್ ಡೈರೆಕ್ಟರ್ ಪ್ರತಿ ಜಿಲ್ಲೆಯಲ್ಲೂ ಯಾರಿದ್ದಾರೆ ಅವರಿಗೆ ಇದನ್ನು ಕೊಡಲಿಕ್ಕೆ ಅಧಿಕಾರವಿಲ್ಲ. ಅವರಿಗೆ ಹಣವನ್ನು ಮಂಜೂರು ಮಾಡತಕ್ಕ ಅಧಿಕಾರವಿರುವಾಗ, ರಾ ಮೆಟೀರಿಯಲ್ಸ್‌ನ್ನು ಅಲಾಟ್ ಮಾಡತಕ್ಕಂಥ ಅಧಿಕಾರವಿಲ್ಲ, ಆದುದರಿಂದ ಇವನ್ನು ಮಾರ್ಪಾಡು ಮಾಡುವುದು ಅತ್ಯಾವಶ್ಯಕ ಎನ್ನುವುದನ್ನು ಸರ್ಕಾರಕ್ಕೆ ತಿಳಿಸಿದ್ದೇನೆ, ಅದನ್ನು ಸರ್ಕಾರದವರೂ ಒಪ್ಪಿಕೊಂಡಿದ್ದಾರೆ. ಆದರೆ ಅದನ್ನು ಕಾರ್ಯರೂಪಕ್ಕೆ ತರತಕ್ಕದ್ದರಲ್ಲಿ ಅಷ್ಟೊಂದು ಆಸಕ್ತಿ ವಹಿಸಿಲ್ಲ. ಬಹುಶಃ ಅವರಿಗೆ ಇದಕ್ಕಿಂತ ಹೆಚ್ಚಿನ ಮಹತ್ವದ ಕಾರ್ಯ ವಿರುವುದರಿಂದ ಇತ್ತ ಕಡೆಗೆ ಗಮನ ಕೊಡುವುದಕ್ಕೆ ಕಷ್ಟವಾಗಿರಬಹುದು, ಹಾಗೂ ಕಾಲದ ಒತ್ತಡವಿರಬಹುದೆಂದು ಭಾವಿಸಿದ್ದೇನೆ. ಮಾನ್ಯ ಅಧ್ಯಕ್ಷಣೀಯವರೇ, ಈ ಇಲಾಖೆಯಲ್ಲೂ ಕೂಡ ಕೆಲಸ ಮಾಡತಕ್ಕಂಥ ಅಧಿಕಾರಿಗಳಲ್ಲಿ ಅತೃಪ್ತಿ ಬೆಳೆದಿದೆ ಎಂದು ಕೇಳಿದ್ದೇನೆ. ಸಿ ಅಂಡ್ ಆರ್ ರೂಲ್ಸ್‌ನಂತೆ ಇತ್ತೀಚೆಗೆ ಮಿನಿಸ್ಟೀರಿಯಲ್ ಸ್ಟಾಫ್ ನವರಿಗೆ ಅಸಿಸ್ಟೆಂಟ್ ಡೈರೆಕ್ಟರ್, ಡೆಪ್ಯುಟಿ ಡೈರೆಕ್ಟರ್ ರವರ ಹುದ್ದೆಗಳನ್ನು ಕೊಟ್ಟಿದ್ದಾರೆಂದು ಕೇಳಿದ್ದೇನೆ. ಆದರೆ ಇವತ್ತು ಕೈಗಾರಿಕಾ ಇಲಾಖೆಯಲ್ಲಿರುವ ಅಸಿಸ್ಟೆಂಟ್ ಡೈರೆಕ್ಟರ್‌ರವರ ಹುದ್ದೆಗೂ ಮತ್ತು ಡೆಪ್ಯುಟಿ ಡೈರೆಕ್ಟರ್‌ರವರ ಹುದ್ದೆಗಳಿಗೆ ತಾಂತ್ರಿಕ ಮಾಹಿತಿ ಪಡೆದಿರತಕ್ಕವರಿಗೆ ಕೊಟ್ಟರೆ ಈ ಇಲಾಖೆಯಲ್ಲಿ ಇನ್ನು ಹೆಚ್ಚಿನ ದಕ್ಷತೆಯನ್ನು ನಾವು ಕಾಣ

ಬಹುದು. ಆದುದರಿಂದ ಸಾಧ್ಯವಾದಷ್ಟು ಮಟ್ಟಿಗೆ ಈ ಇಲಾಖೆಯಲ್ಲಿ ಟೆಕ್ನೋಕ್ರಾಟ್ಸ್‌ರವರನ್ನು ಹಾಕಿದರೆ ಈ ಇಲಾಖೆಯಲ್ಲಿ ಉತ್ತಮ ರೀತಿಯಲ್ಲಿ ಕೆಲಸ ಮಾಡಲಿಕ್ಕೆ ಅನುಕೂಲವಾಗಿ ಆದರಿಂದ ಒಳ್ಳೆಯ ಫಲವನ್ನು ನಾವು ನಿರೀಕ್ಷಿಸಬಹುದೆನ್ನುವುದೇ ನನ್ನ ಭಾವನೆ. ಕೆಳಗಿನ ದರ್ಜೆಯವರಿಗೆ ಪ್ರಮೋಷನ್ ಕೊಟ್ಟು ಮೇಲ್ದರ್ಜೆಗೆ ಏರಿಸುವುದು ಬೇಡವೆಂದು ಹೇಳುವುದಿಲ್ಲ. ಆದರೆ ಸಾಧ್ಯವಾದಷ್ಟು ಮಟ್ಟಿಗೆ ಅಸಿಸ್ಟೆಂಟ್ ಡೈರೆಕ್ಟರ್ ಮತ್ತು ಡೆಪ್ಯುಟಿ ಡೈರೆಕ್ಟರ್ ರವರ ಹುದ್ದೆಗಳಿಗೆ ತಾಂತ್ರಿಕ ಮಾಹಿತಿ ಪಡೆದಿರತಕ್ಕಂಥವರನ್ನು ಆ ಜಾಗದಲ್ಲಿ ಇಡುವುದರಿಂದ ಉತ್ತಮ ರೀತಿಯಲ್ಲಿ ಕೆಲಸ ಮಾಡುವುದಕ್ಕೆ ಹಾಗೂ ದಕ್ಷತೆಯಿಂದ ಕೆಲಸ ಮಾಡುವುದಕ್ಕೆ ಅನುಕೂಲವಾಗುತ್ತದೆ ಎನ್ನತಕ್ಕ ಹಲವಾರು ಸಲಹೆಗಳನ್ನು ಕೊಟ್ಟಿದ್ದೇನೆ. ಇವತ್ತು ಈ ಇಲಾಖೆಯಲ್ಲಿ ಎಷ್ಟರಮಟ್ಟಿನ ಅಕ್ರಮಗಳು ನಡೆದಿದೆ ಎನ್ನುವುದಕ್ಕೆ ಹೋಗುವುದಿಲ್ಲ, ಕಾರಣ ಶ್ರೀ ಪುಟ್ಟಸ್ವಾಮಿಯವರು ಅದರ ಬಗ್ಗೆ ಸುದೀರ್ಘವಾಗಿ ಪ್ರಸ್ತಾಪ ಮಾಡಿದ್ದಾರೆ. ಇವತ್ತು ಈ ಇಲಾಖೆ ಸರಿಯಾದ ರೀತಿಯಲ್ಲಿ ಕೆಲಸ ಮಾಡಲಿಕ್ಕೆ ಪುನರ್ ವಿಂಗಡಣೆ ಮಾಡತಕ್ಕಂಥದ್ದು ಅತ್ಯಾವಶ್ಯಕ ಎನ್ನತಕ್ಕ ಮಾತನ್ನು ಈ ಸಂದರ್ಭದಲ್ಲಿ ಪೂರ್ವಭಾವಿಯಾಗಿ ತಿಳಿಸುವುದಕ್ಕೆ ಇಷ್ಟಪಡುತ್ತೇನೆ.

ಮಾನ್ಯ ಸಭಾಧ್ಯಕ್ಷಿಣಿಯವರೇ; ಇವತ್ತು ರಾಜ್ಯದ ಕೈಗಾರಿಕಾ ಬೆಳವಣಿಗೆಯ ಬಗ್ಗೆ ಪ್ರಸ್ತಾಪ ಮಾಡುವುದಕ್ಕೆ ಪೂರ್ವದಲ್ಲಿ ಒಂದು ಮಾತನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ ಮಾನ್ಯ ಕೃಷ್ಣನ್‌ರವರು ಒಂದು ವಿಷಯವನ್ನು ಪ್ರಸ್ತಾಪ ಮಾಡಿದರು, ಇವತ್ತು ಕೇಂದ್ರದಲ್ಲಿ ಬೇರೆ ಸರ್ಕಾರ ಇದೆ, ರಾಜ್ಯದಲ್ಲಿ ಬೇರೆ ಸರ್ಕಾರ ಇದೆ. ಕೈಗಾರಿಕಾ ನೀತಿಯ ಬಗ್ಗೆ ಒಂದು ಸಮರವೇ ಪ್ರಾರಂಭವಾಗತಕ್ಕ ಕಾಲ ಬಂದಿವೆ ಎಂದು ಏನು ಮುನ್ನೆಚ್ಚರಿಕೆ ಕೊಟ್ಟಿದ್ದಾರೋ, ತಿಕ್ಕಾಟ ಎಂದು ಏನು ಹೇಳಿದ್ದಾರೋ, ಬಹುಶಃ ಇದರ ಬಗ್ಗೆ ಅಷ್ಟೊಂದು ಕಾಳಿಜಿ ಪಡಬೇಕಾದ ಅವಶ್ಯಕತೆ ಇಲ್ಲ ಎಂದು ಹೇಳುತ್ತೇನೆ. ಏತಕ್ಕೆಂದರೆ, ಗುಡಿ ಕೈಗಾರಿಕೆಗಳಿಗಾಗಲೀ, ಸಣ್ಣ ಸಣ್ಣ ಕೈಗಾರಿಕೆಗಳಿಗಾಗಲೀ ಗ್ರಾಮಾಂತರ ಪ್ರದೇಶಗಳಲ್ಲಿ ಅವುಗಳ ಬೆಳವಣಿಗೆ ಬಗ್ಗೆ ಹೆಚ್ಚು ಆಸಕ್ತಿ ಕೊಡಬೇಕೆಂಬ ಉದ್ದೇಶದಿಂದ ಕೇಂದ್ರಸರ್ಕಾರ ತನ್ನ ಅಭಿಪ್ರಾಯವನ್ನು ವ್ಯಕ್ತಪಡಿಸಿದೆ. ಆದುದರಿಂದ ಇದರ ಬಗ್ಗೆ ಅಷ್ಟೊಂದು ಕಳಕಳಿ ವ್ಯಕ್ತಪಡಿಸಬೇಕಾದ ಅವಶ್ಯಕತೆ ಏನೂ ಇಲ್ಲ. ಕೇಂದ್ರಸರ್ಕಾರದ ಬಗ್ಗೆ ಜಿಜ್ಞಾಸೆ ಬೇಕಾಗಿಲ್ಲ. ಬೃಹತ್ ಕೈಗಾರಿಕೆಗಳನ್ನು ಸ್ಥಗಿತಗೊಳಿಸಬೇಕೆಂಬ ಅಭಿಪ್ರಾಯ ಖಂಡಿತವಾಗಿಯೂ ಇಲ್ಲ. ಇವತ್ತು ಗ್ರಾಮಾಂತರ ಪ್ರದೇಶಗಳಲ್ಲಿ ಈ ಒಂದು ಸಣ್ಣ ಸಣ್ಣ ಕೈಗಾರಿಕೆಗಳಿಗೆ ಪ್ರೋತ್ಸಾಹಕೊಟ್ಟು, ಸ್ಥಳದಲ್ಲಿಯೇ ಇರತಕ್ಕ ವಿದ್ಯಾವಂತ ನಿರುದ್ಯೋಗಿಗಳು ಏನು ಇದ್ದಾರೆ ಅವರನ್ನು ಉಪಯೋಗಿಸಿಕೊಂಡು, ಸ್ಥಳದಲ್ಲಿಯೇ ಸಿಗತಕ್ಕ ಕಚ್ಚಾಪದಾರ್ಥಗಳನ್ನು ಉಪಯೋಗ ಮಾಡಿ, ಕೈಗಾರಿಕೆ ಬೆಳವಣಿಗೆಯನ್ನು ಆ ಮುಖೇನ ಮಾಡಿ ಆರ್ಥಿಕಪ್ರಗತಿಗೆ ಆ ಮೂಲಕ ಗಮನ ಕೊಡಬೇಕೆಂದು ಹೇಳಿದ್ದಾರೆಯೇ ಪರಂತು, ಬೃಹತ್ ಕೈಗಾರಿಕೆಗಳನ್ನು ಸ್ಥಗಿತಗೊಳಿಸಬೇಕು ಎನ್ನುವ ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ ಎನ್ನುವ ಭಾವನೆ ಏನು ಇದೆ ಅದು ಸರಿಯಾದುದು ಅಲ್ಲ ಎಂದು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ. ಏಕೆಂದರೆ ಈ ಅಭಿಪ್ರಾಯ ಯಾರಿಗೂ ಇಲ್ಲ. ಈ ಒಂದು ನೀತಿ ಕೂಡ ಹೊಸದೇನೂ ಅಲ್ಲ, ಹಿಂದೆ ಹೇಳಿದ್ದನ್ನೆ ಮತ್ತು ಪ್ರತಿಪಾದನೆ ಮಾಡಿದ್ದಾರೆ.

12-30 ಪಿ. ಎಂ.

ಇವತ್ತು ನಮ್ಮ ರಾಜ್ಯದಲ್ಲಿ ಕೈಗಾರಿಕಾ ಬೆಳವಣಿಗೆಯಲ್ಲಿ ಆಗಿರತಕ್ಕ ಹಲವಾರು ಲೋಪದೋಷಗಳ ಬಗ್ಗೆ ಮಾನ್ಯ ಪುಟ್ಟಸ್ವಾಮಿಯವರು ಪ್ರಸ್ತಾಪ ಮಾಡಿದ್ದಾರೆ. ಪೂರ್ವದಲ್ಲಿ ಒಂದು ಮಾತನ್ನು ಹೇಳಬೇಕಾಗಿದೆ. ನಮ್ಮ ಕೈಗಾರಿಕಾ ಬೆಳವಣಿಗೆಯಲ್ಲಿ ಸರಿಯಾದಂತ ತಾಂತ್ರಿಕ ಮಾಹಿತಿ ಇಲ್ಲದೇ ಇರತಕ್ಕದ್ದು ಒಂದು ಕಾರಣ ಎಂದು ಪಬ್ಲಿಕ್ ಅಂಡರ್ ಟೇಕಿಂಗ್ಸ್ ಕಮಿಟಿಯಲ್ಲಿ ಅಧಿಕಾರಿಗಳು ವಿಶ್ಲೇಷಣೆ ಮಾಡಿದ್ದರು, ಇದೂ ಒಂದು ಕಾರಣ ಇರಬಹುದು, ಇಲ್ಲ ಎಂದು ಹೇಳುವುದಕ್ಕೆ ನಾನು ಸಿದ್ಧನಿಲ್ಲ. ಏಕೆಂದರೆ, ಇವತ್ತು ರಾಜ್ಯದಲ್ಲಿ ದೊಡ್ಡ ಪ್ರಮಾಣದ ಕೈಗಾರಿಕೆಗಳ ಹಾಗೂ ಮಧ್ಯಮ ಪ್ರಮಾಣದ ಕೈಗಾರಿಕೆಗಳ ಬೆಳವಣಿಗೆಗಾಗಿ ಒಂದು ಸಂಸ್ಥೆಯನ್ನು ಮಾಡಲಾಗಿದೆ. ಅದು ಕರ್ನಾಟಕ ಸ್ಟೇಟ್ ಇಂಡಸ್ಟ್ರಿಯಲ್ ಇನ್‌ವೆಸ್ಟ್‌ಮೆಂಟ್ ಡವಲಪ್‌ಮೆಂಟ್ ಕಾರ್ಪೊರೇಷನ್ ಎಂದು ಇದೆ. ಇದು ತನ್ನ ಕಲಸವನ್ನು ಮಾಡತಕ್ಕ ಕಾಲದಲ್ಲಿ ಅಜಾಗರೂಕತೆಯಿಂದ ನಡೆದುಕೊಂಡಿದೆ.

ಎಲ್ಲಕ್ಕಿಂತ ಮುಖ್ಯವಾಗಿ ರಾಜಕಾರಣಿಗಳ ಮಂತ್ರಿಗಳ ಹಾಗೂ ಮುಖ್ಯಮಂತ್ರಿಗಳ ಒತ್ತಡಕ್ಕೆ ಮಣಿದು ಕೆಲಸ ಮಾಡಿದೆಯೆಂದು ನನ್ನ ಭಾವನೆ. ಇವತ್ತು ಈ ಒಂದು ಸದನದ ಮುಖೇನ 1.25 ಲಕ್ಷ ರೂಪಾಯಿಗಳ ಬೇಡಿಕೆಯನ್ನು ಕೇಳಿದ್ದಾರೆ. ಕರ್ನಾಟಕ ಸ್ಟೇಟ್ ಇಂಡಸ್ಟ್ರಿಯಲ್ ಇನ್‌ವೆಸ್ಟ್‌ಮೆಂಟ್ ಕಾರ್ಪೊರೇಷನ್‌ಗೆ 1.25 ಲಕ್ಷ ರೂಪಾಯಿಗಳನ್ನು ಒದಗಿಸುವ ಅವಕಾಶವನ್ನು ಮಾಡಿದ್ದೇವೆ. ಒಂದು ಮಾತನ್ನು ಮಾನ್ಯ ಮುಖ್ಯಮಂತ್ರಿಗಳಿಗೆ ಕೇಳುವುದಕ್ಕೆ ಇಚ್ಛೆಪಡುತ್ತೇನೆ ಇತ್ತೀಚೆಗೆ ಕೈಗಾರಿಕಾ ಇಲಾಖೆಯನ್ನು ತಾವು ತಾತ್ಕಾಲಿಕವಾಗಿ ವಹಿಸಿಕೊಂಡಿದ್ದೀರಿ. ಈ ಕಾರ್ಪೊರೇಷನ್ನಿನವರು 1.25 ಲಕ್ಷ ರೂಪಾಯಿಗಳನ್ನು ಕೇಳತಕ್ಕ ಕಾಲದಲ್ಲಿ ಇವರು ಈ ಹಣವನ್ನು ಉಪಯೋಗ ಮಾಡಿ ಮುಂದಿನ ವರ್ಷ ಏನೇನು ಕಾರ್ಯಕ್ರಮಗಳನ್ನು, ಯಾವ ಯಾವ ಕೈಗಾರಿಕೆಗಳನ್ನು ಸ್ಥಾಪನೆ ಮಾಡುತ್ತೇವೆ, ಎಷ್ಟು ಹಳೆಯ ಕೈಗಾರಿಕೆಗಳನ್ನು ಚೈತನ್ಯಗೊಳಿಸುವುದಕ್ಕೆ ಯಾವ ಕಾರ್ಯಕ್ರಮಗಳನ್ನು ಹಾಕಿದ್ದಾರೆ ಎಂದು ಪೂರ್ವಭಾವಿಯಾಗಿ ಸರ್ಕಾರಕ್ಕೆ 1977-78ಕ್ಕೆ ಏನಾದರೂ ಪ್ರೊಪೋಸಲ್ ಕೊಟ್ಟಿದ್ದಾರೆಯೆ ? ಅವರ ಕಾರ್ಯಕ್ರಮದ ವ್ಯವಸ್ಥೆಯನ್ನು ಸರ್ಕಾರಕ್ಕೆ ಪೂರ್ವಭಾವಿಯಾಗಿ ಹೇಳಿದ್ದರೆ ಸರ್ಕಾರ ಅದರಮೇಲೆ ಹತೋಟಿ ಇಟ್ಟುಕೊಳ್ಳುವುದಕ್ಕೆ ಅನುಕೂಲವಾಗುತ್ತಿತ್ತು, ಸಹಕಾರದೃಷ್ಟಿಯಿಂದ ಈ ಮಾತನ್ನು ಹೇಳುತ್ತಿದ್ದೇನೆ ಇಲ್ಲದೇ ಇದ್ದರೆ ಯಾವನೋ ಒಬ್ಬನಿಗೆ ಕೊಟ್ಟರು, ಇನ್ನೊಬ್ಬನಿಗೆ ಕೊಟ್ಟರು ಎಂದು ಹೇಳುವುದಕ್ಕೆ ಸುಲಭವಾಗುತ್ತದೆ. ಏಕೆಂದರೆ, ಇವತ್ತಿನ ಕೈಗಾರಿಕಾ ಪ್ರಪಂಚದಲ್ಲಿ ಈ ರೀತಿ ವ್ಯವಹಾರಗಳು ನಡೆಯುತ್ತವೆ. ಈ ವಿಚಾರದಲ್ಲಿ ನಾನು ಮುಂದೆ ಹೇಳುತ್ತೇನೆ, ಮಂತ್ರಿಮಂಡಲದಲ್ಲಿ ಒಳ್ಳೆಯ ಕೈಗಾರಿಕಾ ಮಂತ್ರಿಗಳನ್ನೇ ಇಟ್ಟಿದ್ದರು, ನೋಡುವುದಕ್ಕೆ ಸುಂದರವಾಗಿದ್ದರು; ನಾನು ಇವತ್ತು ಅವರನ್ನು ವ್ಯಾಖ್ಯಾನ ಮಾಡುವುದಕ್ಕೆ ಹೋಗುವುದಿಲ್ಲ. ಇವತ್ತು ಆಕರ್ಷಣೆ ಮಾಡುವುದಕ್ಕೆ ಕೈಗಾರಿಕಾ ಪ್ರಪಂಚದಲ್ಲಿ ಸಾಕಷ್ಟು ಇವತ್ತು ಅವಕಾಶ ಇದೆ. ಇವತ್ತು ಅಧಿಕಾರಿಗಳ ಬಗ್ಗೆ ದೋಷಾರೋಪಣೆ ಮಾಡುವುದಕ್ಕೆ ನಾನು ಹೋಗುವುದಿಲ್ಲ ಎಚ್ಚರ ತಪ್ಪಿದರೆ ಅದರಿಂದ ಅನಾಹುತವಾಗುತ್ತದೆಂದು ಸಂಕ್ಷಿಪ್ತವಾಗಿ ತಿಳಿಸುವುದಕ್ಕೆ ಇಚ್ಛೆಪಡುತ್ತೇನೆ.

ಇಂಡಸ್ಟ್ರೀಸ್ ಇನ್‌ವೆಸ್ಟ್‌ಮೆಂಟ್ ಡವಲಪ್‌ಮೆಂಟ್ ಕಾರ್ಪೊರೇಷನನ್ನು ಯಾವ ಉದ್ದೇಶಕ್ಕಾಗಿ ಸ್ಥಾಪನೆ ಮಾಡಿದ್ದರು, ಯಾವ ಕಾರಣಕ್ಕಾಗಿ ಸ್ಥಾಪನೆ ಮಾಡಿದ್ದರು ಆ ಒಂದು ಕಾರಣ ಮತ್ತು ಉದ್ದೇಶ ಸರಿಯಾದರೀತಿಯಲ್ಲಿ ಕಾರ್ಯರೂಪಕ್ಕೆ ತರುವುದರಲ್ಲಿ ಸಾಧ್ಯವಾಗಿಲ್ಲ. ನಾನು ಮೊದಲೆ ಹೇಳಿದಂತೆ, ಪ್ರತಿವರ್ಷ ಆಯವ್ಯಯ ಪತ್ರವನ್ನು ಸಭೆಯಮುಂದೆ ಮಂಡನೆ ಮಾಡುವುದಕ್ಕೆ ಮುಂಚೆ, ಒಂದು ವರದಿಯನ್ನು ಇಡುವ ಕೆಲಸವನ್ನು ಮಾಡಬೇಕಾಗಿತ್ತು ಎಂದು ನಾನು ಹೇಳುತ್ತೇನೆ ಇವತ್ತು ನಮ್ಮ ರಾಜ್ಯದಲ್ಲಿ ಕೈಗಾರಿಕಾ ಬೆಳವಣಿಗೆಯ ದೃಷ್ಟಿಯಿಂದ 11 ಜಿಲ್ಲೆಗಳು ಹಿಂದುಳಿದ ಜಿಲ್ಲೆಗಳೆಂದು ಘೋಷಣೆ ಮಾಡಿದ್ದೀರಿ. ಅವುಗಳ ಪೈಕಿ ಮೂರು ಜಿಲ್ಲೆಗಳು ಅತಿ ಹಿಂದುಳಿದಿರತಕ್ಕ ಜಿಲ್ಲೆಗಳೆಂದು ಕೇಂದ್ರಸರ್ಕಾರದವರು ಕೂಡ ಗುರುತಿಸಿದ್ದಾರೆ. ಇವತ್ತು ನಾನು ತಮಗೆ ಕೇಳುವುದಕ್ಕೆ ಇಚ್ಛೆಪಡುತ್ತೇನೆ, ಈ ಹಿಂದುಳಿದಿರತಕ್ಕ ಜಿಲ್ಲೆಗಳ ಕೈಗಾರಿಕಾ ಬೆಳವಣಿಗೆ ಬಗ್ಗೆ ತಾವು ಒಂದು ನಕ್ಷೆಯನ್ನು ತಯಾರು ಮಾಡಿದ್ದೀರಾ ? ಅದನ್ನು ಬ್ಲೂಪ್ರಿಂಟ್ ಎಂದು ಕರೆಯಬಹುದು, ತಾವು ಈ ವಿಚಾರವನ್ನು ದಯಮಾಡಿ ತಿಳಿಸಬೇಕು. ಯಾವ ಯಾವ ಪ್ರದೇಶದಲ್ಲಿ ರಾ ಮೆಟೀರಿಯಲ್ಸ್ ಸಿಗುತ್ತದೆ ಎನ್ನುವ ಬಗ್ಗೆ ಒಂದು ಕರಾರುವಕ್ಕಾದ ನಕ್ಷೆಯನ್ನು ತಯಾರು ಮಾಡಿಲ್ಲ ಮಾನ್ಯ ಮುಖ್ಯ ಮಂತ್ರಿಗಳು ಇತ್ತಕಡೆ ಗಮನಹರಿಸುತ್ತಾರೇನೋ ಎನ್ನುವ ದೃಷ್ಟಿಯಿಂದ ಈ ಸಂದರ್ಭದಲ್ಲಿ ಈ ಮಾತನ್ನು ಹೇಳುತ್ತಿದ್ದೇನೆ. ಇವತ್ತು ಹಿಂದುಳಿದಿರತಕ್ಕ ಜಿಲ್ಲೆಗಳಲ್ಲಿ ಯಾವ ಯಾವ ಪ್ರದೇಶದಲ್ಲಿ ಯಾವಯಾವ ಇಂಡಸ್ಟ್ರೀಗಳನ್ನು ಮಾಡುವುದಕ್ಕೆ ಸಾಧ್ಯತೆ ಇದೆ ಅದಕ್ಕೆ ಪೂರ್ವಭಾವಿಯಾಗಿ ಪ್ರತಿಯೊಂದು ಇಂಡಸ್ಟ್ರೀಸ್‌ಗೆ ಸಂಬಂಧಪಟ್ಟಂತೆ ಒಂದು ಪ್ರಾಜೆಕ್ಟ್ ರಿಪೋರ್ಟನ್ನು ಮಾಡಬೇಕಾಗಿತ್ತು. ಇವತ್ತು ನಮ್ಮ ರಾಜ್ಯಕ್ಕೆ ಹೊಸ ಕೈಗಾರಿಕೆಗಳನ್ನು ಸ್ಥಾಪಿಸಲು ಯಾವ ಕೈಗಾರಿಕೋದ್ಯಮಿ ಬರುತ್ತಾನೆ, ಅವನ ಮುಂದೆ ಈ ಪ್ರಾಜೆಕ್ಟ್ ರಿಪೋರ್ಟ್ ಇಟ್ಟು, ಇಂಥ ಕೈಗಾರಿಕೆಗಳ ಬಗ್ಗೆ ಕೈಹಾಕು ಎಂದು ಹೇಳತಕ್ಕಂಥದಕ್ಕೆ ಸಾಕಷ್ಟು ಸಿದ್ಧತೆ ಇಲ್ಲ ವ್ಯವಸ್ಥೆ ಇಲ್ಲ ನಾನು ಈ ವಿಚಾರವನ್ನು ಗತ್ಯಂತರವಿಲ್ಲದೆ ಹೇಳಬೇಕಾಗಿದೆ. ಪಬ್ಲಿಕ್ ಅಂಡರ್‌ಟೇಕಿಂಗ್ಸ್ ಕಮಿಟಿ ಮುಂದೆ ನಮಗೆ ಸ್ಟಾಪ್‌ಕೊಡಿ ಎಂದು ಹೇಳಿದ್ದಾರೆ.

ಈ ಒಂದು ಇಂಡಸ್ಟ್ರಿಯಲ್ ಇನ್‌ವೆಸ್ಟ್‌ಮೆಂಟ್ ಡವಲಪ್‌ಮೆಂಟ್ ಕಾರ್ಪೊರೇಷನ್ನಿನ ಕೆಲಸವಾದರೂ, ಕೇಂದ್ರಸರ್ಕಾರದಿಂದ ಬರತಕ್ಕ ಹಣಕಾಸಿನ ಸವಲತ್ತು ನೋಡಿಕೊಳ್ಳುವುದು, ಸಬ್ಸಿಡಿ ಕೊಡತಕ್ಕದ್ದು, ಇಂಟರೆಸ್ಟ್ ಫ್ರೀಲೋನ್ ಕೊಡತಕ್ಕದ್ದು, ವಿವಿಧ ಫೈನಾನ್ಷಿಯಲ್ ಇನ್‌ಸ್ಟಿಟ್ಯೂಟ್‌ಗಳನ್ನು ಒಂದುಕಡೆ ಕೇಂದ್ರೀಕರಿಸಿ ಹೊಸ ಕೈಗಾರಿಕೆಗಳಿಗೆ ನೆರವು ನೀಡತಕ್ಕದ್ದು. ಅವುಗಳನ್ನು ಯಶಸ್ವಿಯಾಗಿ ಕೆಲಸಮಾಡುವಂತೆ ನೋಡಿಕೊಳ್ಳುವುದು, ಇದು ಯಾವುದನ್ನೂ ಕೂಡ ಕಾರ್ಪೊರೇಷನ್‌ನ್ನಿನವರು ಮಾಡಿಲ್ಲವೆಂದು ನೊಂದು ಹೇಳಬೇಕಾಗುತ್ತದೆ. ಯಾವ ಉದ್ದೇಶದಿಂದ ಸ್ಥಾಪನೆ ಮಾಡಿದ್ದೆವೋ ಅದು ಸರಿಯಾದರೀತಿಯಲ್ಲಿ ನೆರವೇರಿಲ್ಲ ಎಂದು ಈ ಸಂದರ್ಭದಲ್ಲಿ ಹೇಳಬೇಕಾಗುತ್ತದೆ. ನಾನು ಮುಖ್ಯಮಂತ್ರಿಗಳನ್ನು ಅನೇಕಸಾರಿ ಟೀಕೆ ಮಾಡಿದ್ದೇನೆ. ಅನಾವಶ್ಯಕವಾದ ಕಾರ್ಪೊರೇಷನ್‌ಗಳನ್ನು ಮಾಡುವುದರ ಮುಖೇನ ರಾಜಕೀಯ ವ್ಯಕ್ತಿಗಳಿಗೆ ಸವಲತ್ತುಗಳನ್ನು ಕಲ್ಪಿಸುವುದಕ್ಕೆ ಹೋಗಬೇಡಿ ಎಂದು ಹಲವಾರು ಸಾರಿ ಈ ಸದನದಲ್ಲಿ ಕೂತು ಟೀಕೆ ಮಾಡಿದ್ದೇನೆ. ಮಹಾರಾಷ್ಟ್ರದಲ್ಲಿ ರೀಜನಲ್ ಡವಲಪ್‌ಮೆಂಟ್ ಕಾರ್ಪೊರೇಷನ್ ಮಾಡಿದ್ದಾರೆಂದು ಕೇಳಿದ್ದೇನೆ, ಆ ಕಾರ್ಪೊರೇಷನ್ ಕೈಗಾರಿಕೆಯಲ್ಲಿ ಹಿಂದುಳಿದಿರತಕ್ಕ ಪ್ರದೇಶಗಳ ಅಭಿವೃದ್ಧಿಯನ್ನು ನೋಡಿಕೊಳ್ಳುತ್ತದೆ ಎಂದು ಕೇಳಿದ್ದೇನೆ. ಅದನ್ನು ರೆಜಿಸ್‌ಟ್ರೇಷನ್ ಮೂಲಕ ಒಂದು ಸ್ವಾಯತ್ತತೆ ಕೊಟ್ಟು, ಎಲ್ಲಾ ಕೆಲಸವನ್ನು ನಿರ್ವಹಣೆ ಮಾಡುವುದಕ್ಕೆ ಪೂರ್ಣ ಹಾಗೂ ಸ್ವತಂತ್ರ ಅಧಿಕಾರವನ್ನು ಕೊಟ್ಟಿದ್ದಾರೆ ಎಂದು ನಾನು ಕೇಳಿದ್ದೇನೆ. ಬಹುಶಃ ಆ ಹಾದಿಯಲ್ಲೇ ನಮ್ಮ ಸರ್ಕಾರ ಕೂಡ ಇದರ ಬಗ್ಗೆ ಆಲೋಚನೆ ಮಾಡುತ್ತಾರೆಂದು ನಾನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಚ್ಛೆಪಡುತ್ತೇನೆ. ನಮ್ಮ ರಾಜ್ಯದಲ್ಲಿರತಕ್ಕ 11 ಜಿಲ್ಲೆಗಳಲ್ಲಿ ಸಾಧ್ಯವಾದರೆ ಈ ರೀಜನಲ್ ಇಂಡಸ್ಟ್ರೀಸ್ ಡವಲಪ್‌ಮೆಂಟ್ ಕಾರ್ಪೊರೇಷನ್‌ನ್ನು ಮಾಡುವುದರ ಮುಖಾಂತರ, ಮತ್ತು ಅದಕ್ಕೆ ಎಲ್ಲರೀತಿಯ ಅಧಿಕಾರವನ್ನು ಕೊಡುವುದರ ಮುಖೇನ ಉದ್ದೇಶ ಸಾಧನೆಗೆ ತಾವು ಅವಕಾಶ ನೀಡತಕ್ಕದ್ದು ಸಾಧುವಾಗಿದೆ ಎಂದು ಈ ಸಂದರ್ಭದಲ್ಲಿ ತಮಗೆ ತಿಳಿಸುವುದಕ್ಕೆ ಇಚ್ಛೆಪಡುತ್ತೇನೆ. ಏಕೆಂದರೆ ಪ್ರತಿಯೊಂದು ಸರ್ಕಾರಕ್ಕೆ ಬರುತ್ತದೆ. ಇಂಡಸ್ಟ್ರೀಸ್ ಡೈರೆಕ್ಟರ್ ಸ್ಕ್ರೂಟಿನಿ ಮಾಡಬೇಕಾಗುತ್ತದೆ. ಇವೊತ್ತು ಇಂಡಸ್ಟ್ರಿಯಲ್ ಕಮಿಷನರ್ ಚೇರ್‌ಮನ್‌ರಾಗಿರತಕ್ಕ ಒಂದು ಕಮಿಟಿ ಇದೆ ಎಂದು ಕೇಳಿದ್ದೇನೆ. ಆ ಕಮಿಟಿಯಲ್ಲಿ ಯಾವ ಯಾವುದಕ್ಕೆ ಎಷ್ಟೆಷ್ಟು ಸಬ್ಸಿಡಿ ಡ್ರಾ ಮಾಡಬೇಕು ಎಂದು ಎಲ್ಲಾ ವಿಷಯಗಳನ್ನು ಚರ್ಚೆ ಮಾಡುತ್ತಾರೆ. ಕೆಲವೊಂದು ದಿವಸ ಈ ಕಮಿಟಿಗೆ ಮಂತ್ರಿಗಳು ಚೇರ್‌ಮನ್‌ರಾಗಿದ್ದರು ಎಂದು ಕೇಳಿದ್ದೇನೆ. ಈ ವಿಷಯಗಳ ಬಗ್ಗೆ ಪೂರ್ಣವಾದ ಅಧಿಕಾರವನ್ನು ಕರ್ನಾಟಕ ಸ್ಟೇಟ್ ಇಂಡಸ್ಟ್ರಿಯಲ್ ಇನ್‌ವೆಸ್ಟ್‌ಮೆಂಟ್ ಡೆವಲಪ್‌ಮೆಂಟ್ ಬೋರ್ಡಿಗೆ ಕೊಡುವುದು ಒಳ್ಳೆಯದು. ನಾನು ಇದರ ಬಗ್ಗೆ ಸಾಕಷ್ಟು ಮಾಹಿತಿ ಪಡೆದಿದ್ದೇನೆ. ಇಂಡಸ್ಟ್ರೀಸ್ ಡಿಪಾರ್ಟ್‌ಮೆಂಟ್ ಡೈರೆಕ್ಟರ್ ಅವರು ಕೆಲವು ದಿವಸ ಚೇರ್‌ಮನ್‌ರಾಗಿದ್ದರು ಅವರು ಚೇರ್‌ಮನ್ ಆದಂತಹ ಕಾಲದಲ್ಲಿ ಅವರು ಹಲವಾರು ಕಾರ್ಯಗಳನ್ನು ಹೊಂದಿದ್ದರು, ಸುಮಾರು 15—16 ಕಂಪನಿಗಳಲ್ಲಿ ಡೈರೆಕ್ಟರಾಗಿ ಇದ್ದರು, ಎನ್ನುವ ಮಾತನ್ನು ಮಾನ್ಯ ಸದಸ್ಯರಾದ ಪುಟ್ಟಸ್ವಾಮಿಯವರು ಹೇಳಿದರು. ಇವೊತ್ತು ಯಾವುದೇ ಒಬ್ಬ ಮನುಷ್ಯನಿಗೂ ಯಾವುದೇ ಕೆಲಸ ಮಾಡಬೇಕಾದರೂ ಕಾಲಾವಕಾಶ ಬೇಕಾಗುತ್ತದೆ. ಯಾವುದೇ ಮನುಷ್ಯನು ಸುಮಾರು 15—16 ಗಂಟೆಗಳ ಕಾಲ ಕುಳಿತು ಕೆಲಸ ಮಾಡುವುದಕ್ಕೆ ಸಾಧ್ಯವಾಗುವುದಿಲ್ಲ, ಆ ಬಗ್ಗೆ ನಾನು ಒಪ್ಪುತ್ತೇನೆ. ಆದರೆ ಈ ಕಮಿಟಿ ವರ್ಷಕ್ಕೆ ಎರಡು ಸಾರಿ ಅಥವಾ ಮೂರು ಸಾರಿ ಮೀಟಿಂಗ್ ಮಾಡಿದರೆ ಅತಿ ಹಿಂದುಳಿದಿರತಕ್ಕಂತಹ ಪ್ರದೇಶಗಳನ್ನು ಅಭಿವೃದ್ಧಿ ಮಾಡಲಿಕ್ಕೆ ಆಗುವುದಿಲ್ಲ.

SRI D. DEVARAJ URS.—There is a Committee no doubt which meets on every Monday of the month and there are only 9 cases now pending before the Committee. Some times the criticisms of the Hon. Member Sri Puttaswamy was in a way some what different in the sense that without processing properly the loans are given and equity shares are taken. Therefore, nevertheless it should be a healthy convention of both; I don't mean to say that simply because

it should be expedited, without looking into things it should be done and afterwards it should be looked into but at the same time the apprehension that because of the centralisation things are being delayed, may not be correct. But this does not mean that the point you made out regarding the establishment of Regional Development Corporation will not be looked into. That is a separate issue and now you have quoted the Maharashtra instance. Let me look into it and see to what extent it is working. This Committee is constituted in accordance with the Government of India's directives and not that we are doing it.

ಶ್ರೀ ಹೆಚ್. ಡಿ. ದೇವೇಗೌಡ.—ಇವೊತ್ತು ಕರ್ನಾಟಕ ಸ್ಟೇಟ್ ಇಂಡಸ್ಟ್ರಿಯಲ್ ಇನ್‌ವೆಸ್ಟ್‌ಮೆಂಟ್ ಡೆವಲಪ್‌ಮೆಂಟ್ ಕಾರ್ಪೊರೇಷನ್ ತನ್ನ ವತಿಯಿಂದ ಹೊಸ ಇಂಡಸ್ಟ್ರೀಸ್‌ಗಳ ಅಭಿವೃದ್ಧಿಗೆ ಹಣ ಸಹಾಯ ಮಾಡುವ ಬಗ್ಗೆ ಬೋರ್ಡಿನಲ್ಲಿ ಕುರಿತು ನಿರ್ಧಾರ ಮಾಡುವುದಕ್ಕೆ ಅಧಿಕಾರ ಇದೆ ಇನ್ನು ಫೈನಾನ್ಸ್ ಕಾರ್ಪೊರೇಷನ್‌ನವರಿಗೂ ಸಹ ಹಣಕಾಸಿನ ಚೌಕಟ್ಟಿನಲ್ಲಿ ಬೋರ್ಡಿನಲ್ಲಿ ಕುರಿತು ನಿರ್ಧಾರ ಮಾಡುವುದಕ್ಕೆ ಅಧಿಕಾರ ಇದೆ. ಕೇಂದ್ರ ಸರ್ಕಾರದಿಂದ ಇವೊತ್ತು 15 ಪರ್ಸೆಂಟ್ ಅಥವಾ 15 ಲಕ್ಷಕ್ಕೂ ಹೆಚ್ಚು ಮೀರಿರದೆ ಇರತಕ್ಕ ಆರ್ಥಿಕ ಸವಲತ್ತನ್ನು ಅತಿ ಹಿಂದುಳಿದಿರತಕ್ಕ ಪ್ರದೇಶಗಳಿಗೆ ಒದಗಿಸಲು ಅವಕಾಶ ಇದೆ. ಅಲ್ಲಿ ಉದ್ಯಮಗಳನ್ನು ಬೆಳೆಸತಕ್ಕ ಕಾಲದಲ್ಲಿ ಕೇಂದ್ರದ ನೆರವು ದೊರೆಯುತ್ತದೆ. ಅಲ್ಲದೇ ಇದರ ಜೊತೆಗೆ ಇಂಟರೆಸ್ಟ್ ಫ್ರೀ ಲೋನ್ ಕೊಡುವುದಕ್ಕೂ ಅವಕಾಶ ಇದೆ. ಈ ರೀತಿಯ ಒಂದು ಅನುಕೂಲವನ್ನು ಹಿಂದುಳಿದಿರತಕ್ಕ ಪ್ರದೇಶಗಳಿಗೆ ಒದಗಿಸಲು ಈ ಸಮಿತಿಯವರು ಕುರಿತು ತೀರ್ಮಾನ ಮಾಡುತ್ತಾರೆ. ಈಗ ಬಂದಿರತಕ್ಕ ಡೈರೆಕ್ಟರ್ ಕಾಲದಲ್ಲಿ ವಿಳಂಬ ಆಗದೇ ಇರಬಹುದು, ಒಂದು ವರ್ಷದ ಮುಂಚೆ ಏನು ನಿರ್ಣಯ ಮಾಡಿದ್ದಾರೆ ಎಂದು ಹೇಳಿದ್ದೇನೆ. ಹಿಂದೆ ಇದ್ದಂಥ ಡೈರೆಕ್ಟರ್ ಕಾಲದಲ್ಲಿ ಮೂರು ನಾಲ್ಕು ತಿಂಗಳಿಗೆ ಒಂದೊಂದು ಮೀಟಿಂಗ್ ಆಗಿದೆ ಎಂದು ಕೇಳಿದ್ದೇನೆ. ಇದರಿಂದ ಏನಾಗಿದೆ ಎಂದರೆ ಬೇರೆ ಬೇರೆ ರಾಜ್ಯಗಳವರು ತಮ್ಮ ತಮ್ಮ ರಾಜ್ಯಗಳಲ್ಲಿ ಹಿಂದುಳಿದ ಪ್ರದೇಶಗಳಲ್ಲಿ ಇಂಡಸ್ಟ್ರೀಸ್ ಮಾಡುವ ಬಗ್ಗೆ ಹೆಚ್ಚು ವೇಗದಿಂದ ಕೇಂದ್ರದಿಂದ ಬರತಕ್ಕ ಆರ್ಥಿಕ ಸಹಾಯವನ್ನು ಪಡೆಯುವುದರಲ್ಲಿ ಎಷ್ಟು ಯಶಸ್ವಿಯಾಗಿದ್ದಾರೆ ಅಷ್ಟು ಪ್ರಮಾಣದಲ್ಲಿ ನಮ್ಮಲ್ಲಿ ಯಶಸ್ವಿಯಾಗಿಲ್ಲ, ಅದರ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳು ಒಂದು ವರದಿಯನ್ನು ತಿಳಿಸಬೇಕು. ಇವೊತ್ತು ತಮಗೆ ತಿಳಿಸಬೇಕು ಎಂದರೆ, ಮೈಸೂರಿನಲ್ಲಿ ನಿಮ್ಮ ಗಣೇಶ ಬೀಡಿಯವರು ಒಂದು ಹೋಟೆಲ್ ಕಟ್ಟಿಸುವುದರ ಮುಖೇನ 15 ಪರ್ಸೆಂಟ್ ಪಡೆಯುವುದರಲ್ಲಿ ಯಶಸ್ವಿಯಾಗಿದ್ದಾರೆ.

SRI D. DEVARAJ URS.—That is the Government of India's policy.

SRI H D. DEVEGOWDA.—I fully agree. To process that, there is a Committee at the State level. That Committee should meet frequently and see that the matter is processed and benefit is availed of. That is all what I want to say.

SRI DEVARAJ URS.—That is why I was telling that only 9 applications are pending.

ಶ್ರೀ ಹೆಚ್. ಡಿ ದೇವೇಗೌಡ.—ಹಿಂದೆ ಏನು ನಡೆದುಕೊಂಡು ಬಂದಿದೆ, ಅದನ್ನು ಹೇಳಿದ್ದೇನೆ. ಇವೊತ್ತು ಇಂಡಸ್ಟ್ರಿಯಲ್ ಡೆವಲಪ್‌ಮೆಂಟ್ ಕಾರ್ಪೊರೇಷನ್ ಸ್ಥಾಪನೆ ಮಾಡತಕ್ಕ ಉದ್ದೇಶ ಏನು ರಾಜ್ಯದಲ್ಲಿ ಯಾವ ಭಾಗ ಕೈಗಾರಿಕೆಗಳಲ್ಲಿ ಹಿಂದುಳಿದಿದೆ, ಅದನ್ನು ಗುರುತು ಮಾಡಿ, ಬ್ಲೂ ಪ್ರಿಂಟ್ ಮಾಡಿ, ಒಂದು ಪ್ರಾಜೆಕ್ಟ್ ವೈಸ್ ರಿಪೋರ್ಟ್ ಮಾಡಿ, ಇವೆಲ್ಲವನ್ನು ಸಿದ್ಧತೆ ಮಾಡಿ ಇಟ್ಟುಕೊಂಡಿದ್ದರೆ then we can also compete with the neighbouring State. ಇವೊತ್ತು ಪಂಜಾಬಿನಲ್ಲಿ ಮಹಾರಾಷ್ಟ್ರದಲ್ಲಿ ಇದು ಹೆಚ್ಚು ಬೆಳವಣಿಗೆ ಆಗಿರಬಹುದು

ನಾವು ಕೂಡ ಕೇಂದ್ರದಿಂದ ಬರತಕ್ಕ ಆರ್ಥಿಕ ಸವಲತ್ತುಗಳನ್ನು ಪಡೆದುಕೊಂಡು ಹೊಸ ಉದ್ದಿಮೆದಾರರಿಗೆ ಒದಗಿಸಿದರೆ ಬೇರೆ ರಾಜ್ಯಗಳವರೊಡನೆ ಕಾಂಪೀಟ್ ಮಾಡಬಹುದಾಗಿತ್ತು. ಆದುದರಿಂದ ಈ ಬಗ್ಗೆ ಪುನರ್ ವ್ಯವಸ್ಥೆಯಾಗಬೇಕೆಂದು ಹೇಳುತ್ತೇನೆ ಇವೊತ್ತು ಯಾರೋ ಒಬ್ಬರು ಬೀದರ್‌ನಲ್ಲಿ ಅಥವಾ ಗುಲ್ಬರ್ಗದಲ್ಲಿ ಒಂದು ಕೈಗಾರಿಕೆ ಸ್ಥಾಪನೆ ಮಾಡಬೇಕಾದರೆ ಅವನು ಬೆಂಗಳೂರಿಗೆ ಕರ್ನಾಟಕ ಇಂಡಸ್ಟ್ರಿಯಲ್ ಇನ್‌ವೆಸ್ಟ್‌ಮೆಂಟ್ ಡೆವಲಪ್‌ಮೆಂಟ್ ಕಾರ್ಪೊರೇಷನ್‌ಗೆ ಬರಬೇಕಾಗುತ್ತದೆ. ಇವೊತ್ತು ರೀಜನಲ್‌ನಲ್ಲಿ ಜಾಯಿಂಟ್ ಡೈರೆಕ್ಟರ್ ಮಾಡಿದ್ದೀರಾ, ಮತ್ತೆ ಡಿವಿಜನಲ್ ಕಮೀಷನರ್ ಮಾಡಿದ್ದೀರಾ ಅದೇ ರೀತಿ ಆಡಳಿತ ಸ್ವಲ್ಪ ವಿಕೇಂದ್ರೀಕರಣವಾಗಬೇಕಾಗುತ್ತದೆ. ಇನ್ನು ನಾನು ಮೊದಲೇ ಹೇಳಿದ ಹಾಗೆ ಇನ್‌ಫ್ರಾಸ್ಟ್ರಕ್ಚರ್ ಇಲ್ಲದೇ ಇದ್ದರೆ ಈ ಬೆಳವಣಿಗೆಗೆ ಕುಂಠಿತವಾಗುತ್ತದೆ ಎಂದು ಹೇಳುತ್ತೇನೆ. ಯಾವ ಕೈಗಾರಿಕೆಗೆ ಬಂಡವಾಳ ಹೂಡಬೇಕು, ಅದರ ಅವಶ್ಯಕತೆ ಏನು ಎಂದು ಯೋಚನೆ ಮಾಡಬೇಕಾಗುತ್ತದೆ. ಇನ್ನು ಮಿನಿ ಸ್ಟೀಲ್ ಪ್ಲಾಂಟ್ ಬಗ್ಗೆ ಹಣ ಕೊಟ್ಟಿದ್ದೇವೆ ಎಂದು ಹೇಳಿದ್ದೀರಿ, ಇವೊತ್ತು ಅದಕ್ಕೆ ಡಿಮ್ಯಾಂಡ್ ಇಲ್ಲ. ಇವೊತ್ತು ನಮ್ಮ ರಾಷ್ಟ್ರದಲ್ಲಿ ಬೃಹತ್ ಪ್ರಮಾಣದ ಕೈಗಾರಿಕೆಗಳು ದುರ್ಗಾಪುರ, ರೂರ್‌ಕೆಲ ಮುಂತಾದ ಕಡೆಗಳಲ್ಲಿ ಇರುವುದರಿಂದ ಈ ಮಿನಿ ಸ್ಟೀಲ್ ಪ್ಲಾಂಟ್ ಏನು ಇದೆ, ಇದರ ಒಂದು ಪರಿಣಾಮ ಎಲ್ಲಿಗೆ ಬಂದಿದೆ ಎಂದರೆ, ಸುಭದ್ರ ರೀತಿಯಲ್ಲಿ ಈ ಒಂದು ಕೈಗಾರಿಕೆಯನ್ನು ಕಾಪಾಡಿಕೊಂಡು ಆರ್ಥಿಕ ಪರಿಸ್ಥಿತಿ ಹೆಚ್ಚು ಮಾಡಲಿಕ್ಕೆ ಶಕ್ತಿ ಇಲ್ಲ. ಇವೊತ್ತು 8 ಮಿನಿ ಸ್ಟೀಲ್ ಪ್ಲಾಂಟ್ ಮಾಡಿದ್ದೀರಿ, ಅವುಗಳಲ್ಲಿ ಒಂದೆರಡು ಬಿಟ್ಟರೆ ಮಿಕ್ಕ ಎಲ್ಲವೂ ಕೂಡ ಸಿಂಕಿಂಗ್ ಸ್ಟೇಜ್‌ಗೆ ಬಂದಿದೆ.

SRI D. DEVARAJ URS.—These are all taken up at a time when Steel was so costly and was not available in the market.

ಶ್ರೀ ಹೆಚ್. ಡಿ. ದೇವೇಗೌಡ —ಇದಕ್ಕೋಸ್ಕರವೆ, ಯಾವ ಯಾವ ಕಾಲಕ್ಕೆ ಯಾವ ನಿರ್ಣಯ ಮಾಡಬೇಕು ಎಂದು ಸರಿಯಾದ ಪ್ಲಾನ್ ಇರಬೇಕಾಗುತ್ತದೆ. ಈಗ 10 ವರ್ಷದ ಹಿಂದೆ ಮಿನಿ ಸ್ಟೀಲ್ ಪ್ಲಾಂಟ್ ಅವಶ್ಯಕತೆ ಇತ್ತು. ಆಗ ಅವರ ಪೊಸಿಷನ ಇಂಪ್ರೂವ್‌ಮೆಂಟ್ಸ್ ಇತ್ತು, ಬಿಲೆಟ್ಸ್‌ಗೆ ಹೆಚ್ಚು ಬೇಡಿಗೆ ಇತ್ತು.

ಆದರೆ ಹಿಂದಿನ ವರ್ಷ ಕಪೂರ್ ಕಂಪನಿ, ಕ್ಯಾಪ್‌ಸ್ಟೀಲ್ ಕಂಪನಿ, ಬೃಂದಾವನ್ ಕಂಪನಿ ಇನ್ನೂ ಯಾವುಯಾವುದಕ್ಕೋ ಕೊಟ್ಟಿದ್ದೇವೆಂದು ತಿಳಿಸಿದ್ದೀರಿ ನಮ್ಮಲ್ಲಿ ಇವತ್ತು ಪವರ್ ಪೊಜಿಷನ್ ಬಹಳ ಅಕ್ಯೂಟ್ ಆಗಿದೆ. ಬರ್ಲಿಟ್ಸ್ ಕೈಗಾರಿಕೆಗಳಿಗೆ ಆರ್ಥಿಕ ನೆರವು ನೀಡುವ ಹೊಣೆಗಾರಿಕೆಯನ್ನು ಹೊತ್ತಿರುವ ಸಂಸ್ಥೆ ಸರಿಯಾಗಿ ಕೆಲಸ ಮಾಡಬೇಕೆಂದು ಹೇಳಬಯಸುತ್ತೇನೆ. ನಮ್ಮಲ್ಲಿ ಉತ್ಪತ್ತಿಯಾಗುವ ವಿದ್ಯುಚ್ಛಕ್ತಿಯನ್ನು ಹೊರಗಡೆಯವರಿಗೆ 20—25 ಪೈಸೆಯಂತೆ ಛಾರ್ಜ್ ಮಾಡಿದರೆ ನಮ್ಮ ರಾಜ್ಯದವರಿಗೆ ಒಂದು ಯೂನಿಟಿಗೆ 10 ಪೈಸೆಯಂತೆ ಒದಗಿಸುತ್ತಿದ್ದೀರಿ ಇದೇನೋ ಸರಿ. ಸಾಮಾನ್ಯವಾಗಿ ಒಂದೊಂದು ಕೈಗಾರಿಕೆಗೆ 5000—6000 ಕಿಲೋ ವ್ಯಾಟ್ಸ್ ವಿದ್ಯುಚ್ಛಕ್ತಿಯನ್ನು ಒದಗಿಸುತ್ತಿದ್ದೀರಿ. ಇದೇ ವಿದ್ಯುತ್‌ಚ್ಛಕ್ತಿಯನ್ನು ಒಂದೊಂದು ಕೈಗಾರಿಕೆಗೆ 50—50 ಕಿಲೋ ವ್ಯಾಟ್ಸ್‌ನಂತೆ ಕೊಟ್ಟರೆ ಸುಮಾರು 100—150 ಸಣ್ಣ ಸಣ್ಣ ಕೈಗಾರಿಕೆಗಳಿಗೆ ವಿದ್ಯುಚ್ಛಕ್ತಿಯನ್ನು ಒದಗಿಸಬಹುದು. ಇವತ್ತು ಕರ್ನಾಟಕ ಸ್ಟೇಟ್ ಇಂಡಸ್ಟ್ರೀಸ್ ಡವಲಪ್‌ಮೆಂಟ್ ಕಾರ್ಪೊರೇಷನ್‌ರವರು ಮಾರ್ಕೆಟನ್ನು ಸರಿಯಾಗಿ ಸ್ಟಡಿ ಮಾಡಿ, ನಮ್ಮ ಅವಶ್ಯಕತೆಗಳನ್ನು ಸ್ಟಡಿ ಮಾಡಿ ನಮಗೆ ಎಷ್ಟು ಪ್ರೋತ್ಸಾಹ ಕೊಡಬೇಕೆಂಬುದನ್ನು ಕ್ರಮವರಿತು ಕೊಟ್ಟಿಲ್ಲವೆಂಬ ಮಾತನ್ನು ಹೇಳಬಯಸುತ್ತೇನೆ. ಟೆಕ್ನಿಕಲ್ ಕನ್‌ಸಲ್ಟೆನ್ಸಿ ಸರ್ವೀಸ್ ಆರ್ಗನೈಸೇಷನ್ ಎಂದು ಮಾಡಿಕೊಂಡಿದ್ದಾರೆಂದೂ ಅದರಲ್ಲಿ ದಕ್ಷ ಆರ್ಥಿಕ ತಜ್ಞರ ಕೊರತೆಯಿಂದ ಈ ರೀತಿ ಆಯಿತೆಂದು ಮಾನ್ಯ ಸದಸ್ಯರಾದ ಶ್ರೀ ಮಾನ್ಯ ಪುಟ್ಟಸ್ವಾಮಿಯವರು ಹೇಳಿದ್ದಾರೆ. ಲೋನ್ ರೆಕಾರ್ಡನ್ನು ಸ್ಕ್ರುಟಿನಿ ಮಾಡುವುದಕೋಸ್ಕರವೇ ಈ ಟೆಕ್ನಾಸ್ ಆರ್ಗನೈಸೇಷನ್ ಎಂದು ನೇಮಕ ಮಾಡಿದ್ದೀರಿ ಎಂದು ಕೇಳಿದ್ದೇನೆ. ಎ ಅಥವಾ ಬಿ ಗೆ ಸಾಲ ಕೊಡಬೇಕಾದರೆ ಮಂತ್ರಿಗಳ ಕರೆ ಹೋದರೆ ಅದು ಬೇಗ ಆಗುತ್ತದೆ. ಅದಕ್ಕೆ ಸೆಕ್ಯುರಿಟಿ ಕೇಳುವುದಿಲ್ಲ, ರಿಜಿಸ್ಟರ್ ಬಾಂಡ್ ಕೇಳುವುದಿಲ್ಲ, ಅದೇ ಬೇರೆಯವರು ಸಾಲಕ್ಕೆ ಅರ್ಜಿ ಹಾಕಿದಾಗ ಅದಕ್ಕೆ ಟೆಕ್ನಿಕಲ್ ಫೀಸಿಬಲಿಟಿ ಇಲ್ಲ ಎಂದು ಸಾಲ

ಕೊಡದೆ ಸತಾಯಿಸುತ್ತಾರೆ ತಾವು ಮುಖ್ಯಮಂತ್ರಿಗಳಾಗಿ 5½ ವರ್ಷವಾಯಿತು. ಈ ಇಂಡಸ್ಟ್ರೀಸ್ ಬಗ್ಗೆ ತಮಗೆ ಆಸಕ್ತಿ ಇನ್ನೂ ಬಂದಿಲ್ಲ. ನೀವು ಈ ಕೈಗಾರಿಕಾ ಖಾತೆಯನ್ನು ವಹಿಸಿಕೊಂಡು ಸುಮಾರು 15—20 ದಿವಸವಾಗಿರಬಹುದು. Atleast you must find some time to go into this particular ssue. ಇವತ್ತು ಸಾಲ ಕೊಡುವ ನೀತಿಯಲ್ಲಿ likes and dis-likes of officers K.S.I I.D.C. is important ಎನ್ನುವಂತಾಗಿದೆ. ತಮಗೆ ಬೇಕಾದವರಿಗೆ ಸಾಲ ಕೊಡಬೇಕಾದರೆ ಕೇವಲ ಒಂದೇ ವಾರದಲ್ಲಿ ಕೊಡುತ್ತಾರೆ ಅದೇ ತಮಗೆ ಬೇಡವಾದವರಿದ್ದರೆ ಅದಕ್ಕೆ ಸೆಕ್ಯುರಿಟಿ ಇಲ್ಲ, ರಿಜಿಸ್ಟರ್ ಬಾಂಡ್ ಇಲ್ಲ ಎಂದು ಸುಮ್ಮನೆ ಅವರನ್ನು ತಿರುಗಿಸಿ ತಿರುಗಿಸಿ, ವರ್ಷಾನುಗಟ್ಟಲೆ ಆದರೂ ಸಾಲ ಕೊಡುವುದಿಲ್ಲ. ಇದರಿಂದ ಹೊಸದಾಗಿ ಕೈಗಾರಿಕೆಯನ್ನು ಸ್ಥಾಪಿಸಲು ಬರುವ ಎಂಟರ್‌ಪ್ರಿನರ್ಸ್ ಬಹಳ ಬೇಜಾರಾಗಿ ಕೊನೆಗೆ ಈ ಕೈಗಾರಿಕೆಯನ್ನು ಸ್ಥಾಪನೆ ಮಾಡುವುದೇ ಬೇಡ ಎನ್ನುವಷ್ಟು ಮಟ್ಟಕ್ಕೆ ಬರುತ್ತಾರೆ. ತಾವು ತಮ್ಮ ಪರಿಮಿತಿಯೊಳಗೆ ಸರಿಯಾಗಿ ಕೆಲಸ ಮಾಡುತ್ತಿಲ್ಲ ಇದರ ಬಗ್ಗೆ ನಾನು ಹೆಚ್ಚಿಗೆ ಏನೂ ಹೇಳುವುದಕ್ಕೆ ಹೋಗುವುದಿಲ್ಲ ಒಟ್ಟಿನಲ್ಲಿ ಯಾರೇ ಒಬ್ಬ ಎಂಟರ್‌ಪ್ರಿನರ್ ಕೈಗಾರಿಕೆಯನ್ನು ಸ್ಥಾಪನೆ ಮಾಡುತ್ತೇನೆಂದು ಮುಂದೆ ಬಂದಾಗ ಅವನಿಗೆ ಉತ್ತೇಜನ ಕೊಡಬೇಕು.

SRI D. DEVARAJ URS.—I do not know. I did not at any time try to influence or recommend any body's name. If there are such instances kindly tell me, I will find out who has done, it and why?

ಶ್ರೀ ಹೆಚ್. ಡಿ ದೇವೇಗೌಡ.—ನಮ್ಮ ರಾಜ್ಯದ ಯಾವ ಯಾವ ಹಿಂದುಳಿದ ಭಾಗಗಳಿವೆ ಅದರ ಬಗ್ಗೆ ಪ್ರಾಜೆಕ್ಟ್ ರಿಪೋರ್ಟ್ ಮಾಡಬೇಕಾದರೆ ಈ ಸಂಸ್ಥೆಯನ್ನು ಉಪಯೋಗಿಸಿಕೊಳ್ಳಬೇಕೆಂದು ನಾನು ಮೊದಲೇ ಹೇಳಿದ್ದೇನೆ. ಈ ಸಂಸ್ಥೆಗೆ ನಾವು 8 ಲಕ್ಷ ರೂಪಾಯಿಗಳನ್ನು ಖರ್ಚು ಮಾಡುತ್ತಿದ್ದೇವೆ. ಅಲ್ಲಿ 40 ಜನ ಅಧಿಕಾರಿಗಳಿದ್ದು ಅವರಿಗೆ ಒಬ್ಬೊಬ್ಬರಿಗೂ ಒಂದು ಸಾವಿರ, ಎರಡು ಸಾವಿರ, ಮೂರು ಸಾವಿರ ರೂಪಾಯಿಗಳಷ್ಟು ಸಂಬಳಗಳನ್ನು ಕೊಡುತ್ತಿದ್ದೇವೆ ಈ ವಿಷಯವನ್ನು ಹೇಳುವಾಗ ನಾನು ಬಹಳ ನೊಂದ ಮನಸ್ಸಿನಿಂದ ಹೇಳುತ್ತಿದ್ದೇನೆ. ಈ ಅಧಿಕಾರಿಗಳನ್ನು ನೇಮಕ ಮಾಡಿಕೊಳ್ಳಬೇಕೆಂಬ ಬಗ್ಗೆ ಅಧಿಕಾರವನ್ನು ಹೊಂದಿರುವ ಆಫೀಸರ್‌ಗಳ ವ್ಯಕ್ತಿತ್ವದ ಬಗ್ಗೆ ನಾನು ಈಗ ಮಾತನಾಡುವುದಕ್ಕೆ ಹೋಗುವುದಿಲ್ಲ. ಈಗ Bhadravathi Paper mills Expansion programme ರೆಂಕೋ ಫ್ಯಾಕ್ಟರಿಯಲ್ಲಿ ಕೆಲವು ಅಧಿಕಾರಿಗಳನ್ನು ನೇಮಕ ಮಾಡಿದ್ದೀರಿ. ಇವರಿಗೆ 2 ಸಾವಿರ. 3½ ಸಾವಿರ, ರೂಪಾಯಿಗಳವರೆಗೂ ಸಂಬಳ ಕೊಡುತ್ತಿದ್ದೇವೆ. ಈ ಅಧಿಕಾರಿಗಳನ್ನು ಅಪಾಯಿಂಟ್‌ಮೆಂಟ್ ಮಾಡುವುದು ನಿಮ್ಮ ಡಿಪಾರ್ಟ್‌ಮೆಂಟ್ ಅಲ್ಲ. ಈ ಕಂಪೆನಿಗಳಲ್ಲಿ ಹೊಸದಾಗಿ ಏನು ಅಧಿಕಾರಿಗಳನ್ನು ನೇಮಕ ಮಾಡಿದ್ದೀರಿ ಅದನ್ನು ತಾವು ಪರಿಶೀಲನೆ ಮಾಡಬೇಕಾಗುತ್ತದೆ. ಇದರ ಬಗ್ಗೆ ನಾನು ಮುಂದೆ ಮಾತನಾಡುತ್ತೇನೆ. ಈ ಕಂಪೆನಿಗಳಿಗೆ ನಾವು ಬಂಡವಾಳ ಕೊಡುತ್ತಿದ್ದೇವೆ, ಉದಾಹರಣೆಗೆ ಹೇಳುವುದಾದರೆ ಭದ್ರಾವತಿ ಕಂಪೆನಿಗೆ ನಾವು ಗ್ಯಾರಂಟಿ ಕೊಡುತ್ತೇವೆ ಇದು ಏನಾದರೂ ಮುಳುಗಿ ಹೋದರೆ ಅದಕ್ಕೆ ನಾವೇ ಜವಾಬ್ದಾರರು. ಅಲ್ಲಿ ಸಾವಿರಾರು ರೂಪಾಯಿ ಸಂಬಳ ತೆಗೆದುಕೊಳ್ಳುವ ಮ್ಯಾನೇಜಿಂಗ್ ಡೈರೆಕ್ಟರ್ ಬರುವುದಿಲ್ಲ. ಆದುದರಿಂದ ನಾನು ಈ ರೀತಿ ಹೇಳುತ್ತಿದ್ದೇನೆ. ಇದನ್ನೆಲ್ಲಾ ನೋಡಿದರೆ ಈ ಅಧಿಕಾರಿಗಳನ್ನು ನೇಮಕ ಮಾಡುವ ಕಾಲದಲ್ಲಿ ನಮ್ಮ ಕರ್ನಾಟಕದಲ್ಲಿ ಯಾರೂ ದಕ್ಷ ಅಧಿಕಾರಿಗಳು ಇಲ್ಲವೆಂದು ಹೇಳಿದಂತಾಯಿತೆಂದು ಕಂಡುಬರುತ್ತದೆ. ಪಂಜಾಬ್. ಗುಜರಾತ್ ಮುಂತಾದ ಕಡೆಗಳಿಂದ ಇಲ್ಲಿಗೆ ಅಧಿಕಾರಿಗಳನ್ನು ತೆಗೆದುಕೊಳ್ಳುತ್ತಿದ್ದೀರಿ ನಾರಿರ್‌ಪಾಲ ಸಂಸ್ಥೆಯಲ್ಲಿ ಮುಖ್ಯವಾದ ಹುದ್ದೆಗಳನ್ನು ಯಾರ್ಯಾರಿಗೆ ಕೊಟ್ಟಿದ್ದೀರಿ ಎನ್ನುವ ಬಗ್ಗೆ ನಾವು ಹಿಂದೆ ಚರ್ಚೆ ಮಾಡಿದ್ದೇವೆ. ಆ ಹುದ್ದೆಯಲ್ಲಿರುವವರಿಗೆ 2 ಸಾವಿರದಿಂದ 3 ಸಾವಿರದವರೆಗೂ ಸಂಬಳ ಕೊಡುತ್ತಿದ್ದೇವೆ. ಆ ಸಮಿತಿಯ ಸದಸ್ಯರು ಕೂತು ಈ ಹುದ್ದೆಗಳ ಬಗ್ಗೆ ಪರಿಶೀಲನೆ ಮಾಡಿ ನೇಮಕ ಮಾಡುತ್ತಾರೆಂದು ಹೇಳುತ್ತೀರಿ. ಇಲ್ಲಿ ನ್ಯಾಷನಲ್ ಇಂಡಸ್ಟ್ರೀಸ್ ಡೆವಲಪ್‌ಮೆಂಟ್ ಕಾರ್ಪೊರೇಷನ್‌ನ ಒಬ್ಬ ಪ್ರತಿನಿಧಿ ಬಂದು ಛೇರ್ಮನ್ ಆಗಿರುತ್ತಾನೆ. ನಾನು ಯಾವ ವ್ಯಕ್ತಿಯ ಹೆಸರನ್ನೂ ಹೇಳುವುದಕ್ಕೆ ಹೋಗುವುದಿಲ್ಲ. ಕೈಗಾರಿಕಾ ಪ್ರಪಂಚದಲ್ಲಿ ಮಾನ್ಯ ಮುಖ್ಯ ಮಂತ್ರಿ

ಗಳೂ ಧುಮುಕಿಲ್ಲ. ನಾನು ಧುಮುಕಿಲ್ಲ ನ್ಯಾಷನಲ್ ಇಂಡಸ್ಟ್ರೀಸ್ ಡೆವಲಪ್‌ಮೆಂಟ್ ಕಾರ್ಪೊರೇಷನ್‌ನವರಿಗೆ ಗ್ಯಾಸ್ ಟರ್ಬೈನ್ ಪ್ರಾಜೆಕ್ಟ್ ರಿಪೋರ್ಟ್ ತಯಾರು ಮಾಡುವುದಕ್ಕೆ 10 ಲಕ್ಷ ರೂಪಾಯಿಗಳನ್ನು ಕೊಟ್ಟಿದ್ದೀರಿ. ಈ ಇಬ್ಬರು ಛೇರ್ಮನ್‌ಗಳೂ ಡೆಲ್ಲಿಗೆ ಹೋದಾಗ ಅಲ್ಲಿ ಒಬ್ಬೊರಿಗೊಬ್ಬರಿಗೆ ಸಂಬಂಧ ಬೆಳೆದಿದೆ. ನಮ್ಮ ಬೆಂಗಳೂರಿನಲ್ಲೇ ಒಂದು ಗ್ಯಾಸ್ ಟರ್ಬೈನ್ ರೀಸರ್ಚ್ ಇನ್‌ಸ್ಟಿಟ್ಯೂಟ್ ಎಂದು ಇದೆ. ಇವರಿಗೇ 3-4 ಲಕ್ಷ ರೂಪಾಯಿ ಕೊಟ್ಟಿದ್ದಿದ್ದರೆ ಪ್ರಾಜೆಕ್ಟ್ ರಿಪೋರ್ಟನ್ನು ತಯಾರು ಮಾಡಿಕೊಡುತ್ತಿದ್ದರು. ಇಲ್ಲದಿದ್ದರೆ ಇದರ ಬಗ್ಗೆ ಪರಿಣತರಿಂದ ಟೆಂಡರ್ ಕರೆದು ಯಾರು ಕಡಿಮೆ ಹಣದಲ್ಲಿ ಪ್ರಾಜೆಕ್ಟ್ ರಿಪೋರ್ಟ್ ತಯಾರು ಮಾಡುತ್ತೇವೆಂದು ಸೂಚಿಸಿರುತ್ತಾರೋ ಅಂಥವರಿಂದ ತಯಾರು ಮಾಡಿಸಬಹುದಾಗಿತ್ತು.

ಟಾಟಾ ಕನ್‌ಸಲ್‌ಟೆನ್ಸಿ ಎಕ್ಸ್‌ಪರ್ಟ್ಸ್ ಅವರು ಹೇಳಿದರು ಕೊಟೇಷನ್ ಕೊಡಬೇಕೆಂದು ಅವರಿಗೆ ಕೊಟ್ಟಿದ್ದರೆ ನಾನು ಒಪ್ಪಿಕೊಳ್ಳುತ್ತಿದ್ದೆ. ನ್ಯಾಷನಲ್ ಇಂಡಸ್ಟ್ರೀಸ್ ಡೆವಲಪ್‌ಮೆಂಟ್ ಕಾರ್ಪೊರೇಷನ್‌ನವರು ಕೊಟ್ಟಿದ್ದಾರೆ ಅವರು ಹಲವಾರು ವ್ಯವಹಾರಗಳಲ್ಲಿ ತಮ್ಮ ಶಾಮೀಲಾಗಿರುವವರಿಗೆ ಹುದ್ದೆಗಳನ್ನು ನೇಮಕ ಮಾಡತಕ್ಕಂಥ ಕಾಲದಲ್ಲಿ ಪ್ಯಾನಲ್ ಆಫ್ ಚೇರ್‌ಮನ್ ಆಗಿದ್ದರು. ಎಲ್ಲಾ ಹುದ್ದೆಗಳನ್ನು ತಮಗೆ ಬೇಕಾದವರಿಗೆ ಕೊಡತಕ್ಕಂಥ ಒಂದು ವಸೂಲಿ ಬಾಜಿ ಕೆಲಸ ನಡೆದಿದೆ. ಈ ಕೆಲಸಗಳನ್ನು ತಡೆಹಿಡಿಯಬೇಕು ಈ ನಿಯಮಗಳನ್ನು ಅನುಸರಿಸದೆ ಹೋದರೆ ಅದರಿಂದ ಬಹಳ ಅನಾಹುತವಾಗುತ್ತದೆ ಮತ್ತು ಕರ್ನಾಟಕದ ಜನತೆಗೆ ಅನ್ಯಾಯವಾಗಬಾರದು ಎನ್ನುವ ದೃಷ್ಟಿಯಿಂದ ಈ ಮಾತನ್ನು ಹೇಳುತ್ತಿದ್ದೇನೆ. ಹೊಸ ಕೈಗಾರಿಕೆಗಳನ್ನು ಮಾಡತಕ್ಕಂಥ ಕಾಲದಲ್ಲಿ ಎಷ್ಟು ದೂರ ನಡೆಸಿದಿದ್ದೀರಿ ಎಂಬುದರ ಬಗ್ಗೆ ಹೇಳುವುದಾದರೆ 500 ರೂಪಾಯಿ ಒಳಗಡೆ ಸಂಬಳವನ್ನು ತೆಗೆದುಕೊಳ್ಳತಕ್ಕಂಥ ಹುದ್ದೆಗಳನ್ನು ಕೊಡಬೇಕೆಂಬ ವಿಷಯವು ಮಾನ್ಯ ಮಂತ್ರಿಗಳಿಗೆ ವೇದ್ಯವಾಗಿರಬಹುದು. ನಮ್ಮ ರಾಜ್ಯದಲ್ಲಿಯೇ ಇರತಕ್ಕಂಥ ತಾಂತ್ರಿಕ ಪರಿಣತರನ್ನು ನೇಮಕ ಮಾಡಿಕೊಂಡಿದ್ದರೆ ಅದು ಸರಿಯಾದ ನಿರ್ಣಯವೆಂದು ಹೇಳಬಹುದಾಗಿತ್ತು. ಆದರೆ ಇದರಲ್ಲಿ ಒಳಗೇನೇ ವ್ಯವಹಾರ ನಡೆಯುತ್ತಿದೆ ಎಂದು ಈ ಸಂದರ್ಭದಲ್ಲಿ ಹೇಳಲಿಕ್ಕೆ ಇಚ್ಛೆಪಡುತ್ತೇನೆ.

1-00 P.M.

ಮಾನ್ಯ ಅಧ್ಯಕ್ಷಣಿಯವರೇ ಈವತ್ತು ಅಪಾಯಿಂಟ್‌ಮೆಂಟ್ಸ್ ಬಗ್ಗೆ ಹೇಳುವುದಾದರೆ ಭದ್ರಾವತಿ ಪೇಪರ್ ಮಿಲ್ಸ್‌ನಲ್ಲಿ 50 ಜನ, ಟೆಕ್ಸ್ಟಾಕ್‌ನಲ್ಲಿ 40 ಜನ ಕಿಂಕೋನಲ್ಲಿ 15 ಜನ ಆಫೀಸರ್‌ಗಳನ್ನು ಅಪಾಯಿಂಟ್ ಮಾಡಿರುವ ಬಗ್ಗೆ ಈಗಾಗಲೇ ಪ್ರಸ್ತಾಪ ಮಾಡಿದ್ದೇನೆ. ಇನ್ನು ಕೆ.ಎಸ್.ಐ.ಐ.ಡಿ.ಸಿ ಎಲೆಕ್ಟ್ರೋಪ್ಲೇಟಿಂಗ್ ಕೋ. ಇದಕ್ಕೆ 60 ಲಕ್ಷ ರೂಪಾಯಿಗಳನ್ನು ನಾವು ಇನ್‌ವೆಸ್ಟ್ ಮಾಡಿದ್ದೇವೆ ಇದು ಪೂರ್ಣ ಕೊಲೋಬರೇಷನ್‌ನಿಂದ ನಡೆಯುತ್ತಿದೆ. ಅದಕ್ಕೆ ಮೊದಲ ಬಂಡವಾಳವನ್ನು ಹಾಡಿರತಕ್ಕಂಥವರು ಎಂದರೆ ನಮ್ಮ ಕರ್ನಾಟಕ ಸ್ಟೇಟ್. ಇಂಡಸ್ಟ್ರಿಯಲ್ ಕಾರ್ಪೊರೇಷನ್ ಮುಖಾಂತರ ಕೈಗಾರಿಕೆಗಳನ್ನು ಮಾಡಬೇಕೆಂದು ನಿರ್ಣಯ ಮಾಡಿ ಪಂಜಾಬಿನ ರಿಟೈರ್ಡ್ ಸೂಪರಿಂಟೆಂಡೆಂಟ್ ಮದನ್‌ಮೋಹನ್ ಬೆಹರ್ ಅವರನ್ನು ನೇಮಕ ಮಾಡಿದ್ದೀರಿ. ನಮ್ಮ ರಾಜ್ಯದಲ್ಲಿ ಯಾರು ಇರಲಿಲ್ಲವೇ ಎಂದು ಕೇಳಬೇಕಾಗಿದೆ. ಅವರ ಬ್ರದರ್-ಇನ್-ಲಾರವರೇ ಸೇಲ್ಸ್ ಕಾಂಟ್ರಾಕ್ಟರ್ ಆಗಿರುತ್ತಾರೆ. ಅವರೂ ಕೂಡ ಒಂದು ಪೈಸೆಯನ್ನೂ ಕೂಡ ಇನ್‌ವೆಸ್ಟ್ ಮಾಡಿಲ್ಲ ನಾವೇ ಪೂರ್ತಿ ಹಣವನ್ನು ಇನ್‌ವೆಸ್ಟ್ ಮಾಡಿದ್ದರೂ ಕೂಡ ಈ ಒಂದು ಕೊಲಾಬೋರೇಷನ್‌ಗೆ ಪಂಜಾಬ್ ರಿಟೈರ್ಡ್ ಅಧಿಕಾರಿಯನ್ನು ಆಫೀಸರ್ ಆಗಿ ನೇಮಕ ಮಾಡಬೇಕಾಗಿತ್ತೇ ಎಂದು ಕೇಳುತ್ತೇನೆ.

ಶ್ರೀ ಡಿ. ದೇವರಾಜ ಅರಸ್.—ಅದು ಗೌವರ್ನ್‌ಮೆಂಟ್ ಆಫ್ ಇಂಡಿಯಾದ್ದು. ಗ್ಯಾಸ್ ಟರ್ಬೈನ್. ಪ್ರಾಜೆಕ್ಟ್ ರಿಪೋರ್ಟ್ ಮತ್ತು ಪೇಪರ್ ಮಿಲ್ಸ್‌ದು ನಾವು ಹೇಳುತ್ತಿರುವುದು. ಗ್ಯಾಸ್ ಟರ್ಬೈನ್ ಪ್ರಾಜೆಕ್ಟ್‌ಗೆ 2 ಲಕ್ಷ ರೂಪಾಯಿಗಳನ್ನು ನ್ಯಾಷನಲ್ ಇಂಡಸ್ಟ್ರಿಯಲ್ ಡೆವಲಪ್‌ಮೆಂಟ್ ಕಾರ್ಪೊರೇಷನ್ ಮುಖಾಂತರ ಕೊಟ್ಟಿರುತ್ತೇನೆ ಇನ್ನು ಟೆಕ್ಸ್ಟಾಕ್ ಬಗ್ಗೆ ಹೇಳಿದಿರಿ. ಅಲ್ಲಿ 80 ಪರ್ಸೆಂಟ್ ಕೆಲಸಗಾರರು ಕರ್ನಾಟಕದವರೇ ಇದ್ದಾರೆ. ಬೇರೆ ಯಾರನ್ನು ಸೇರಿಸಬಾರದು ಎಂದು ಹೇಳಿದರೆ ಅದು ಬಹಳ ಕಷ್ಟವಾಗುತ್ತದೆ.

ಶ್ರೀ ಎಚ್. ಡಿ. ದೇವೇಗೌಡ.—ಯಾರು ಯಾರು ಹೇಗೆ ಹೇಗೆ ನೇಮಕ ಮಾಡಿದ್ದಾರೆ ಎಂದು ಅವರ ಹೆಸರುಗಳನ್ನು ಕೊಡುತ್ತೇನೆ. ಅವರ ಪೂರ್ಣ ಮಾಹಿತಿಯನ್ನು ಬೇಕಾದರೆ ಕೊಡುತ್ತೇನೆ. ಮದ್ರಾಸಿನ ಕೆಲವು ಅಧಿಕಾರಿಗಳೂ, ಗುಜರಾತಿನ ಕೆಲವು ಅಧಿಕಾರಿಗಳನ್ನೂ ಕೂಡ ನೇಮಕ ಮಾಡಿದ್ದಾರೆ. ಆ ಅಧಿಕಾರಿಗಳು ಯಾವ ಬಂಡವಾಳವನ್ನು ಹೂಡಿಲ್ಲ. ನಮ್ಮದೇ ಎಲ್ಲ ಪೂರ್ತಿ ಬಂಡವಾಳ. ಕರ್ನಾಟಕ ಸ್ಟೇಟ್ ಇಂಡಸ್ಟ್ರೀಸ್ ಡೆವಲಪ್‌ಮೆಂಟ್ ಕಾರ್ಪೊರೇಷನ್ ಕೊಟ್ಟಿರತಕ್ಕಂಥದ್ದಾಗಿರುತ್ತದೆ.

ಇನ್ನು ಪೇಪರ್ ಮಿಲ್ಸ್ ಪ್ರಾಜೆಕ್ಟ್‌ಗಾಗಿ ಒಂದು ನೂರು ಕೋಟಿ ರೂಪಾಯಿಗಳನ್ನು ಈವತ್ತು ಯು. ಕೆ. ಫರ್ಮ್ಸ್ ಕೊಲೋಬರೇಷನ್ ಇಟ್ಟುಕೊಂಡು ಅದನ್ನು ಕಾರ್ಯರೂಪಕ್ಕೆ ತರಬೇಕೆಂದು ಹೇಳಿ ಪ್ರಯತ್ನ ನಡೆಸುತ್ತಿದ್ದೀರಿ. ಅದು ಸತ್ಯಕ್ಕೆ ದೂರ ಇರಬಹುದೋ ಅಥವಾ ಸತ್ಯವಿರಬಹುದೋ ನನಗೆ ತಿಳಿಯದು. ಈ ಒಂದು ಕೊಲೋಬರೇಷನ್‌ನ ವ್ಯವಹಾರದಲ್ಲಿ 4 ಕೋಟಿ ರೂಪಾಯಿಗಳಷ್ಟು ಕಮಿಷನ್‌ನ್ನು ಕೆಲವು ವ್ಯಕ್ತಿಗಳು ಪಡೆದಿದ್ದಾರೆಂದು ಕೇಳಿದ್ದೇನೆ. ಪೇಪರ್ ಮಿಲ್ಸ್‌ಗೆ ಒಂದು ನೂರು ಕೋಟಿ ರೂಪಾಯಿನ ಪ್ರಾಜೆಕ್ಟ್ ಏನು ಇದೆ ಅದರ ವ್ಯವಹಾರದಲ್ಲಿ ನಾವು ಬಂಡವಾಳವನ್ನು ಹೂಡಿಲ್ಲವೆಂದು ಹೇಳಿದಿರಿ ರಾಜಕಾರಣಿಗಳು ಈವತ್ತು ಏನು ಭ್ರಷ್ಟಾಚಾರ ವ್ಯವಹಾರದಲ್ಲಿ ತೊಡಗತಕ್ಕಂಥ ಅಧಿಕಾರಿಗಳ ಬಗ್ಗೆ ಸರಿಯಾದ ಹತೋಟಿಯನ್ನು ಹಾಕುವುದಕ್ಕೆ ಸಾಧ್ಯವಿಲ್ಲದಿದ್ದರೆ ಬಹಳ ಕಷ್ಟವಾಗುತ್ತದೆ.

ಇನ್ನು ಸ್ವೀಡಿಶ್ ಬ್ಯಾಂಕ್‌ನಲ್ಲೂ ಕೂಡ ರಿಟೈರ್ಡ್ ಆಗಿರತಕ್ಕಂಥ ಅಧಿಕಾರಿಗಳನ್ನು ಇಟ್ಟುಕೊಂಡಿರುತ್ತಾರೆ ಬ್ಯಾಂಕ್ ವ್ಯವಹಾರ ಏನು ಇದೆ ಅದರಲ್ಲಿ ಕೈಹಾಕುವುದಕ್ಕೆ ಅಧಿಕಾರವಿರುವುದಿಲ್ಲ ಕೆಲವು ಅಧಿಕಾರಿಗಳು ಹಣವನ್ನು ಸಂಗ್ರಹಣೆಮಾಡಿ ಬ್ಯಾಂಕ್‌ನಲ್ಲಿ ಹಣ ಇಟ್ಟುಕೊಂಡಿರತಕ್ಕಂಥ ಸಂದರ್ಭವೂ ಇವೆ. ಇಂಥ ಒಂದು ಕೊಲೋಬರೇಷನ್ ಅಗ್ರಿಮೆಂಟ್ ಮಾಡತಕ್ಕಂಥ ಕಾಲದಲ್ಲಿ ಎಚ್ಚರಿಕೆಯನ್ನು ವಹಿಸಬೇಕೆಂದು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಎಲ್ಲ ಹಂತಗಳಲ್ಲಿಯೂ ಭ್ರಷ್ಟಾಚಾರ ಇದೆ ಎಂದು ಹೇಳುವುದಕ್ಕಾಗುವುದಿಲ್ಲ. ರಾಜ್ಯದ ಒಳಿತಿಗಾಗಿ ಕೊಲೋಬರೇಷನ್ ಮಾಡುವ ಮುಖಾಂತರ ಕೈಗಾರಿಕೆಗಳನ್ನು ಅಭಿವೃದ್ಧಿ ಮಾಡಬೇಕು. ಇಂಥ ಒಂದು ನಿರ್ಣಯವನ್ನು ಮಾಡತಕ್ಕಂಥ ಕಾಲದಲ್ಲಿ ಎಚ್ಚರಿಕೆಯಿಂದ ಕೆಲಸಮಾಡಬೇಕೆಂದು ಈ ಸಂದರ್ಭದಲ್ಲಿ ತಿಳಿಸಲಿಕ್ಕೆ ಬಯಸುತ್ತೇನೆ.

ಇದಕ್ಕೆ ಸಂಬಂಧಪಟ್ಟ ಮೆಷನರಿಗಳನ್ನು ತಯಾರುಮಾಡಲು ಕಲ್ಕತ್ತದಲ್ಲಿಯ ಜೆಸ್ಸಪ್ ಕಂಪನಿಗೆ ಮಾಡಿಕೊಡುತ್ತಿದ್ದೀರೆಂದು ನಾನು ಕೇಳಿದ್ದೇನೆ. ಆದರೆ ಬಹಳ ಹಿಂದೆ ಒಂದು ಮಾತನ್ನು ಹೇಳಿದ್ದಾರೆ. ಈ ಸೆಂಟ್ರಲ್ ಇಂಡಸ್ಟ್ರಿಯಲ್ ವರ್ಕ್‌ಷಾಪಿನಲ್ಲಿ ಈ ಮೆಷಿನರಿಗಳನ್ನು ಮ್ಯಾನುಫ್ಯಾಕ್ಚರ್ ಮಾಡತಕ್ಕಂಥ ಶಕ್ತಿಯನ್ನು ನಾವು ಬೆಳಸಿಕೊಳ್ಳಬೇಕು. ಆದ್ದರಿಂದ ಈ ಸೆಂಟ್ರಲ್ ಇಂಡಸ್ಟ್ರಿಯಲ್ ವರ್ಕ್‌ಷಾಪ್ ಮತ್ತು ಹಾಸನ ಇಂಪ್ಲಿಮೆಂಟ್ ಫ್ಯಾಕ್ಟರಿ, ಇವೆರಡನ್ನೂ ಸೇರಿಸಿ ಕಿಮ್ಕೋ ಫ್ಯಾಕ್ಟರಿ ಎಂದು ಮಾಡಿ ಈ ಮೆಷನರಿಗಳನ್ನು ಮ್ಯಾನುಫ್ಯಾಕ್ಚರ್ ಮಾಡುತ್ತೇವೆ ಎಂದು ಹೇಳಿದ್ದಾರೆ. ಈಗ ಈ ಮೆಷನರಿಗಳನ್ನು ಮ್ಯಾನ್ಯುಫ್ಯಾಕ್ಚರ್ ಮಾಡಲು ಕಲ್ಕತ್ತದಲ್ಲಿಯ ಜೆಸ್ಸಪ್ ಕಂಪನಿಗೆ ಕೊಡುತ್ತಿದ್ದಾರೆ. ಇದನ್ನು ಅವರಿಗೆ ಹೇಗೆ ಕೊಟ್ಟಿದ್ದೀರಿ ಎಂಬ ಬಗ್ಗೆ ಪೂರ್ಣ ಮಾಹಿತಿಯನ್ನು ಈ ಸಭೆಗೆ ತಿಳಿಸಬೇಕೆಂದು ನಾನು ತಮ್ಮಲ್ಲಿ ಕೇಳಿಕೊಳ್ಳುತ್ತೇನೆ. ಮಾನ್ಯ ಅಧ್ಯಕ್ಷರೇ, ಒಂದೊಂದು ಸಾರಿ ಅಧಿಕಾರಿಗಳು ಬಹಳ ಎಚ್ಚರಿಕೆಯಿಂದ ನಡೆಯಬೇಕಾಗುತ್ತದೆ. ಆ ಅಧಿಕಾರಿಗಳ ಹೆಸರು ಹೇಳುವುದಕ್ಕೆ ನಾನು ಹೋಗುವುದಿಲ್ಲ. ಏಕೆಂದರೆ ಈ ಸಭೆಯಲ್ಲಿ ಹೆಸರು ಹೇಳಿದರೆ ತಪ್ಪಾಗುತ್ತದೆಂದು ತಾವು ರೂಲಿಂಗ್ ಕೊಟ್ಟಿದ್ದೀರಿ ತಮ್ಮ ರೂಲಿಂಗ್‌ಗೆ ತದ್ವಿರುದ್ಧವಾಗಿ ಅಧಿಕಾರಿಗಳ ಹೆಸರನ್ನು ಹೇಳುವುದಿಲ್ಲ. ಏಕೆಂದರೆ ಮೊಬೈಲ್ ಸ್ಕೂಟರ್ಸ್ ಕೊಲೋಬರೇಷನ್ ಅಗ್ರಿಮೆಂಟ್‌ಗೆ ಸೈನ್ ಹಾಕುವುದಕ್ಕೆ ವೆಸ್ಟ್‌ಎಂಡ್ ಹೋಟಲ್‌ನಲ್ಲಿ ಕಾಕ್‌ಟೈಲ್ ಪಾರ್ಟಿಯನ್ನು ಕೊಟ್ಟಿದ್ದಾರೆ. ಅವರಿಗೆ ಪಾರ್ಟಿ ಕೊಡಬಾರದು ಎಂದು ನಾನು ಹೇಳುವುದಿಲ್ಲ. ಮಾನ್ಯ ಎಸ್. ಎಂ. ಕೃಷ್ಣನವರು ಇಲ್ಲಿ ಹೊಸ ಕೈಗಾರಿಕೆಗಳ ಬೆಳವಣಿಗೆ ದೃಷ್ಟಿಯಿಂದ ಬೇರೆ ದೇಶಗಳ ಸಹಾಯವನ್ನು ಪಡೆಯತಕ್ಕಂಥದಕ್ಕೆ ಮತ್ತು ಖಾಸಗೀ ಕೈಗಾರಿಕೋದ್ಯಮಿಗಳ ನೆರವನ್ನು ಪಡೆಯತಕ್ಕಂಥಾದಕ್ಕೆ, ಅಂತಹ ಸನ್ನಿವೇಶದಲ್ಲಿ ಅವರಿಗೆ ಪಾರ್ಟಿ ಕೊಡಬೇಕಾಗುತ್ತದೆ ಎಂದು

ಹೇಳಿದ್ದಾರೆ. ಅವರಿಗೆ ಪಾರ್ಟಿ ಕೊಡಲಿ, ಸೋಮನಹಳ್ಳಿಯಲ್ಲಿ ಅವರ ಹೊಲದ ಹತ್ತಿರ ಕುಳ್ಳಿರಿಸಿಕೊಂಡು ಅವರಿಗೆ ಊಟ ಮಾಡಿಸಲಿ ನಾನು ಬೇಡ ಎಂದು ಹೇಳುವುದಿಲ್ಲ ಆದರೆ ಇಂತಹ ವಿಚಾರದಲ್ಲಿ ಬಹಳ ಎಚ್ಚರಿಕೆಯಿಂದ ಇರಬೇಕು ಎಂದು ಹೇಳುತ್ತೇನೆ ಮತ್ತು ಡೆಲ್ಲಿಯಿಂದ ಐ.ಟಿ.ಡಿ ಸಿ.ಯ ಲೇಡಿ ರಿಸಿಪ್ಷನಿಸ್ಟ್ ಈ ಪಾರ್ಟಿಗೆ ಬರುತ್ತಾರೆಂದರೆ ಏನು ಅರ್ಥ ? ಇಂತಹ ಸಂದರ್ಭದಲ್ಲಿ you must watch all these things. ಇವತ್ತಿನ ದಿವಸ ಪೋಲೀಸ್ ಡಿಪಾರ್ಟ್‌ಮೆಂಟ್ ಇದೆ, ಅವರು ಏನು ಕೆಲಸವನ್ನು ಮಾಡುತ್ತಿದ್ದಾರೆ ಎಂದು ಕೇಳುತ್ತೇನೆ. ಪೋಲೀಸ್ ಡಿಪಾರ್ಟ್‌ಮೆಂಟ್‌ನವರು ದೇವೇಗೌಡರು ಎಲ್ಲೆಲ್ಲಿ ಓಡಾಡುತ್ತಾರೆ ಎಂದು ನೋಡುತ್ತಾರೆ ಹೊರತು ನಾನು ಹೇಳಿದಂತಹ ವಿಷಯಗಳ ಕಡೆ ನೋಡುವುದಿಲ್ಲ. ಅವರು ಈ ಸೀನಿಯರ್ ಆಫೀಸರುಗಳ ಕಾರ್ಯ ಗೌರವ ಹೇಗಿದೆ ಎಂಬುದನ್ನು ನೋಡಬೇಕು. ನಾನು ಅದನ್ನು ಅವರಿಗೆ ಹೇಳಿಕೊಡಬೇಕಾದ್ದಿಲ್ಲ ಅವರೇ ಅದನ್ನು ಅರಿತು ಮಾಡಬೇಕು. ಈ ಪ್ರಜಾಪ್ರಭುತ್ವ ಬಂದು 30 ವರ್ಷಗಳಾಯಿತು, ಮಾನ ಮುಖ್ಯಮಂತ್ರಿಯವರಿಗೂ ಬಹಳಷ್ಟು ಅನುಭವ ಇದೆ, ಅವರು ಇಂತಹ ದುಂದುಗಾರಿಕೆಯನ್ನು, ಮೋಜುಗಾರಿಕೆಯನ್ನು ನಿಲ್ಲಿಸಬೇಕೆಂದು ಹೇಳುತ್ತೇನೆ. ಇನ್ನು ಕೆಲವು ಅಧಿಕಾರಿಗಳು ವಿದೇಶಗಳಿಗೆ ಹೋಗುವಾಗ ಎಲ್ಲರನ್ನೂ ಜೊತೆಯಲ್ಲಿ ಕರೆದುಕೊಂಡು ಹೋಗುತ್ತಾರೆ. ಅವರ ಹೆಸರನ್ನು ಹೇಳುವುದಕ್ಕೆ ಹೋಗುವುದಿಲ್ಲ ಅವರು ಹಾಗೆ ಮಾಡುವಾಗ ಈ ಬಗ್ಗೆ ಅಲ್ಲಿಗೆ ನಾವು ಪತ್ರ ಬರೆಯಬೇಕಾಗುತ್ತದೆ.

ಶ್ರೀ ಡಿ. ದೇವರಾಜ ಅರಸ್.—ಅದರಿಂದ ನಮಗೆ ನಷ್ಟವಾದರೆ ಅದನ್ನು ನೋಡೋಣ. ಆದರಿಂದ ನಷ್ಟ ಇಲ್ಲದೇ ಹೋದರೆ ಅವರನ್ನು ನಾವು ಏತಕ್ಕೆ ಕೇಳಬೇಕು ?

ಶ್ರೀ ಕಾಗೋಡು ತಿಮ್ಮಪ್ಪ.—ಭದ್ರಾವತಿಯಲ್ಲಿ ಮಾನ್ಯ ಕೈಗಾರಿಕಾ ಮಂತ್ರಿಗಳು ಬರುತ್ತಾರೆಂದು ಒಂದು ಪಾರ್ಟಿಯನ್ನು ಏರ್ಪಡಿಸಿದ್ದರು. ಅವತ್ತೇ ಅವರ ರಾಜೀನಾಮೆಯನ್ನು ಸ್ವೀಕಾರ ಮಾಡಿದರು ಎಂದು ಹೇಳಿ ಇನ್‌ವಿಟೇಷನ್ ಅನ್ನು ವಾಪಸ್ ಕಳುಹಿಸಿದರು.

ಶ್ರೀ ಡಿ. ದೇವರಾಜ ಅರಸ್.—ನಾಳೆ ನೀವೇನಾದರೂ ಮಂತ್ರಿಗಳಾದರೆ ನಿಮಗೆ ಯಾರಾದರೂ ಪಾರ್ಟಿ ಕೊಡುತ್ತಾರೆ.

ಶ್ರೀ ಎಚ್. ಡಿ. ದೇವೇಗೌಡ.—ಈ ಕಿಮ್ಕೋ ಫ್ಯಾಕ್ಟರಿಗೆ 10 ಲಕ್ಷ ರೂಪಾಯಿಗಳನ್ನು ಕೊಟ್ಟಿದ್ದಾರೆಂದು ಹೇಳಿದ್ದಾರೆ. ತಾವು ಈ ಬಗ್ಗೆ ಕರಾರುವಾಕ್ಕಾದ ಫಿಗರ್ಸನ್ನು ಕೊಟ್ಟಿದ್ದೀರಿ ಎಂದು ಕಾಣುತ್ತದೆ ಇಲ್ಲಿ ಏನಾಗಿದೆ ಎಂದರೆ ನಾವು ಅಧಿಕಾರಿಗಳಿಂದ ಮತ್ತು ಬೇರೆ ಕಡೆಗಳಿಂದ ಇನ್‌ಫರ್‌ಮೇಷನ್ ತೆಗೆದುಕೊಂಡಿದ್ದೇವೆ.

Sri D. Devaraj Urs.—Certainly I cannot object if the members were to stay what they have heard or ascertained. We are here to clarify But while talking ನಮಗೆ ಬಂದು ಹೇಳುವವರು ಕೂಡ ಅರ್ಥ ಮಾಡಿಕೊಳ್ಳದೇ ಬಂದು ಹೇಳುತ್ತಾ ಇರುತ್ತಾರೆ ಅವರು ಪೂರ್ಣ ಮಾಹಿತಿಯನ್ನು ತೆಗೆದುಕೊಳ್ಳುವುದಿಲ್ಲ. "ಯಾರೋ ಒಬ್ಬರು ಹೇಳಿದರು, ಇನ್ನೊಬ್ಬ ಬಂದಿದ್ದ, ನಾನು ಹೋಗುವ ಬದಲು ಇನ್ನೊಬ್ಬನನ್ನು ಕಳಿಸಿಬಿಟ್ಟೆ" ಎಂದು ಅಸೂಯೆ ಇರುವುದರಿಂದ ಸ್ವಲ್ಪದ್ದನ್ನು ವಿಪರೀತ ಮಾಡಿಕೊಂಡು ಹೇಳ ತಕ್ಕಂಥ ಪ್ರವೃತ್ತಿ ಅವರಲ್ಲಿ ಜಾಸ್ತಿ ಇದೆ. ಅದನ್ನು ಕೇಳುವಾಗ ಆದರ ಬಗ್ಗೆ ವಿಚಾರ ಮಾಡಿ, ಆಮೇಲೆ ಯೋಚನೆ ಮಾಡಿದರೆ ಒಳ್ಳೆಯದು ಎಂದು ಹೇಳುತ್ತಿದ್ದೇನೆ.

ಶ್ರೀ ಅಬ್ದುಲ್ ಖುದ್ದೂಸ್ ಅನ್ವರ್.—ನಾವು ಕೊಟ್ಟಿರುವ ಚಾರ್ಜಸ್ ಬಗ್ಗೆ ತಾವು ತನಿಖೆ ಮಾಡಬೇಕು. ಈ ಬಗ್ಗೆ ಒಂದು ಸಾರಿ ತಮಗೆ ಕೊಟ್ಟಿದ್ದೇನೆ. ಕೊಟ್ಟು 3 ತಿಂಗಳು ಆಗಿದೆ. ಈಗ ಮತ್ತೆ ತಮಗೆ ಬೇಕು ಎಂದರೆ ನಾನು ಕೊಡುತ್ತೇನೆ.

ಶ್ರೀ ಎಚ್ ಡಿ. ದೇವೇಗೌಡ—ನೀವು ಮೊದಲು ಕೊಡಿ ಅವರು ಎನ್‌ಕ್ವೈರ್ ಮಾಡಿಸುತ್ತಾರೆ ಮಾನ್ಯ ಅಧ್ಯಕ್ಷಣಿಯವರೇ ನಾನು ಇವತ್ತು ಏನು ಮೋಜುಗಾರಿಕೆಗಾಗಿ ಹಣ ಖರ್ಚಾಗುತ್ತಿದೆ ಆದರ ಹಿಡಿತದ ಕಡೆಗೆ ಮಾನ್ಯ ಮುಖ್ಯ ಮಂತ್ರಿಯವರು ಗಮನಹರಿಸಬೇಕು ಎಂದು ಹೇಳುತ್ತಿದ್ದೇನೆ ಮಾನ್ಯ ಮುಖ್ಯ ಮಂತ್ರಿಯವರು ಇಂಡಸ್ಟ್ರೀಸ್ ಡಿಪಾರ್ಟ್‌ಮೆಂಟನ್ನು ತಮ್ಮ

ಕೈಯಲ್ಲಿ ಇಟ್ಟುಕೊಳ್ಳುತ್ತಾರೋ ಅಥವಾ ಬೇರೆಯವರ ಕೈಯಲ್ಲಿ ಕೊಡುತ್ತಾರೋ ಅದು ನನಗೆ ಸಂಬಂಧಪಟ್ಟಿದ್ದಲ್ಲ. It is his prerogative. What I want is stiff action. ನಾವು ಇದನ್ನೆಲ್ಲಾ ಸರ್ಕಾರದ ಗಮನಕ್ಕೆ ತಂದಾಗ ಅವರು ಆ ಬಗ್ಗೆ ಕ್ರಮ ತೆಗೆದುಕೊಳ್ಳಬೇಕು. ಈ ಕಿಯೋಸ್ಕ್ ಕಂಪನಿಯನ್ನು ಸ್ಟಾರ್ಟ್ ಮಾಡಿದಾಗ 15 ಲಕ್ಷ ರೂಪಾಯಿಗಳನ್ನು ಸರ್ಕಾರದವರು ಕೊಟ್ಟಿದ್ದಾರೆ. ಅದು ಪೂರ್ತಿಯಾಗಿ ಖರ್ಚಾಗಿದೆ ಅದರಲ್ಲಿ ಏನೂ ಉಳಿದಿಲ್ಲ. ಇನ್ನೂ 25 ಲಕ್ಷ ರೂಪಾಯಿಗಳನ್ನು ಬ್ಯಾಂಕ್‌ಗಳಿಂದ ಪಡೆಯಲು ಪ್ರಯತ್ನ ಮಾಡಿದ್ದಾರೆ. ಅದು ಮುಗಿಯುವ ಸ್ಟೇಜ್‌ಗೆ ಬಂದಿದೆ. ಆಮೇಲೆ ಅಡ್ಮಿನಿಸ್ಟ್ರೇಟಿವ್ ಆಫೀಸ್‌ನ ಬಿಲ್ಡಿಂಗ್ ಕಟ್ಟುವುದಕ್ಕೆ 3 ಲಕ್ಷ ರೂಪಾಯಿಗಳನ್ನು ವೆಬ್ಬನವರಿಗೆ ಆಡ್ವಾನ್ಸ್ ಕೊಟ್ಟಿದ್ದಾರೆ. ಇದರ ಜೊತೆಗೆ 1 30,000 ರೂಪಾಯಿಗಳ ಆಫೀಸಿನ ಇಂಟೀರ್‌ನಲ್ ಡೆಕೋರೇಷನ್‌ಗೆ ಖರ್ಚಾಗಿದೆ. ಇದು ಹೇಗೆ ಆಯಿತು ಎಂಬುದನ್ನು ಯೋಚನೆ ಮಾಡಬೇಕು. ಮಾನ್ಯ ಮುಖ್ಯ ಮಂತ್ರಿಯವರು ಇದನ್ನೆಲ್ಲಾ ಆದಷ್ಟು ಕಂಟ್ರೋಲ್ ಮಾಡಬೇಕು. ಏಕೆಂದರೆ ನಾವು ಅಷ್ಟು ದೂರ ಅಧಿಕಾರಿಗಳ ಗುಲಾಮರಾಗುವುದಕ್ಕೆ ಸಾಧ್ಯವಿಲ್ಲ. ಆ ಬಗ್ಗೆ ಸ್ವಲ್ಪ ಹತೋಟಿಯನ್ನು ತೆಗೆದುಕೊಳ್ಳಬೇಕಾಗುತ್ತದೆ. ಆಮೇಲೆ ಕೈಗಾರಿಕಾ ನಿರ್ದೇಶಕರ ಆಫೀಸಿಗೆ 75 ಲಕ್ಷ ರೂಪಾಯಿಗಳನ್ನು ಕೊಟ್ಟಿದ್ದಾರೆ. ಅದರಲ್ಲಿ ಆಫೀಸಿನ ಇಂಟೀರ್‌ನಲ್ ಡೆಕೋರೇಷನ್‌ಗೆ 25 ಸಾವಿರ ರೂಪಾಯಿಗಳು ಖರ್ಚಾಗಿದೆ. ಇದರ ಬಗ್ಗೆಯೂ ತಾವು ಹತೋಟಿ ಇಟ್ಟುಕೊಳ್ಳಬೇಕು. ಏಕೆಂದರೆ ಇದು ರೈತರ ದುಡ್ಡು, ಯಾರ ಮನೆಯ ದುಡ್ಡು ಅಲ್ಲ. ಈ ಬಗ್ಗೆ ನಿಮಗೂ, ನಮಗೂ ಎಲ್ಲರಿಗೂ ಗಮನ ಇದೆ. Every paise must be properly spent. ನಾವು ಸಾರ್ವಜನಿಕರ ಟ್ರಸ್ಟೀಸ್ ಆಗಿ ಕೆಲಸ ಮಾಡುತ್ತಿದ್ದೇವೆ. We are answerable to the public. ಈ ಬಗ್ಗೆ ಗಮನಹರಿಸಬೇಕು ಎಂದು ಹೇಳುತ್ತಿದ್ದೇನೆ. ಆಮೇಲೆ ಈ ಸೆಂಟ್ರಲ್ ಇಂಡಸ್ಟ್ರಿಯಲ್ ವರ್ಕ್‌ಷಾಪ್ ಮತ್ತು ಹಾಸನದಲ್ಲಿರುವ ಇಂಪ್ಲಿಮೆಂಟ್ ಫ್ಯಾಕ್ಟರಿ ಇವೆರಡನ್ನೂ ಸೇರಿಸಿ ಕಿಯೋಸ್ಕ್ ಕಂಪನಿಯನ್ನು ಮಾಡಿದ್ದೀರಿ ಎಂದು ಕಾಣುತ್ತದೆ.

ಶ್ರೀ ಡಿ. ದೇವರಾಜ ಅರಸ್.—ಕಿಯೋಸ್ಕ್ ಕಂಪನಿ ಮಾಡುವುದಕ್ಕಿಂತ ಮುಂಚೆ ಕೂಡ ಸೆಂಟ್ರಲ್ ವರ್ಕ್‌ಷಾಪ್, ಹಾಸನ್ ಇಂಪ್ಲಿಮೆಂಟ್ ಫ್ಯಾಕ್ಟರಿ They were not functioning properly.

ಶ್ರೀ ಎಚ್. ಡಿ. ದೇವೇಗೌಡ.—I fully agree. ಕಮಿಟಿಯವರು ಪರಿಶೀಲನೆ ಮಾಡಿ ಹೇಳಿದ್ದಾರೆ. ದೆಹಲಿಯಲ್ಲಿ ಒಬ್ಬರು ಸ್ಪೆಷಲ್ ಕಮಿಷನರ್ ಇದ್ದಾರೆ. ನಮ್ಮ ಇಂಡಸ್ಟ್ರೀಸ್ ಕಮಿಷನರ್ ತಿಂಗಳಿಗೆ 20 ದಿವಸ ಹೋಗಿ ದೆಹಲಿಯಲ್ಲಿರುತ್ತಾರೆ. ಮತ್ತೆ ಕೆಲವು ಅಧಿಕಾರಿಗಳು ತಿಂಗಳಲ್ಲಿ 20—25 ದಿನ ದೆಹಲಿಯಲ್ಲಿರುತ್ತಾರೆ. ಇದಕ್ಕೆ ಎರಡು ಲಕ್ಷ ಮೂರು ಲಕ್ಷ ರೂಪಾಯಿ ಖರ್ಚಾಗುತ್ತದೆ. ಮತ್ತು ಫೋನ್ ಚಾರ್ಜಸ್ 15 ಸಾವಿರ ರೂಪಾಯಿ, ಹೀಗಾದರೆ ಹೇಗೆ ? ತಾವು ಹೀಗೆಲ್ಲಾ ಆಗಲಿಕ್ಕೆ ಅವಕಾಶ ಕೊಡಬಾರದು. ಇದಕ್ಕೆಲ್ಲಾ ಒಂದು ನಿಯಮ ಹಾಕಬೇಕು, ಮಿತಿ ಹಾಕಬೇಕು. 15 ಸಾವಿರ ರೂಪಾಯಿ ಫೋನ್ ಚಾರ್ಜಸ್ ಯಾತಕ್ಕೆ ಯಾರು ಅದನ್ನು ಕೊಡುವುದು? ಇದು ಪ್ರಜಾಪ್ರಭುತ್ವ ಈ ಬಗ್ಗೆ ಎಲ್ಲಾ ತಾವು ಗಮನ ಹರಿಸಬೇಕು ಎಂದು ಹೇಳಿ ತಮ್ಮ ಮುಂದೆ ಈ ವಿಷಯಗಳನ್ನು ಇಡುವುದಕ್ಕೆ ಇಚ್ಛೆಪಡುತ್ತೇನೆ. ಅಪಾಯಿಂಟ ಮೆಂಟ್‌ಗಳ ವಿಷಯದಲ್ಲಿಯೂ ಕೆಲವು ಅನ್ಯಾಯಗಳು ನಡೆದಿವೆ. ನಮ್ಮ ಊರಿನ ಮಂತ್ರಿಗಳ ಅಳಿಯಂದಿರಿಗೆ ಮಂಗಳೂರು ಫರ್ಟಿಲೈಸರ್ಸ್ ಕಂಪನಿಯಲ್ಲಿದ್ದಾಗ 800 ರೂಪಾಯಿ ಸಂಬಳ ಕೊಡುತ್ತಿದ್ದವರಿಗೆ ಭದ್ರಾವತಿ ಐರನ್ ಅಂಡ್ ಸ್ಟೀಲ್ ಕಂಪನಿಗೆ ಬಂದರೆ ಎರಡು ಸಾವಿರ ರೂಪಾಯಿ ಏನಿದು ? ನನಗೆ ಆ ಬಗ್ಗೆ ಹೊಟ್ಟೆ ಕಿಚ್ಚಿಲ್ಲ. ಹೊರಗಡೆ ನೋಡಿದ ಜನ ರಾಜಕಾರಣಿಗಳ ಸಂಬಂಧಿಕರಿಗೆ ಮಂತ್ರಿಗಳು ಮತ್ತು ಮಂತ್ರಿಗಳ ಅಳಿಯಂದಿರಿಗೆ ಸರ್ಕಾರದಲ್ಲಿ ಸವಲತ್ತುಗಳನ್ನು ಮಾಡಿಕೊಡುತ್ತಾರೆ ಎಂದು ಅಪಾದನೆ ಮಾಡುವುದಕ್ಕೆ ದಾರಿ ಮಾಡಿಕೊಟ್ಟಂತಾಗುತ್ತದೆ. ಅವರ ಅಳಿಯಂದಿರು ಮಂಗಳೂರು ಕೆಮಿಕಲ್ಸ್ ಅಂಡ್ ಫರ್ಟಿಲೈಸರ್ಸ್‌ನಲ್ಲಿ ಡೈರೆಕ್ಟರಾಗಿದ್ದರು. ಇದೆಲ್ಲಾ ಅಚ್ಚಾಗಿರುವ ವಾರ್ಷಿಕ ವರದಿಯಲ್ಲಿದೆ. ಆ ಕಂಪನಿಯಿಂದ ಈ ಕಂಪನಿಗೆ ಬಂದರೆ 800 ರೂಪಾಯಿ ಇದ್ದವರಿಗೆ ಇಲ್ಲಿ ಭದ್ರಾವತಿ ಕಂಪನಿಗೆ ಬಂದ ತಕ್ಷಣ ಎರಡು ಸಾವಿರ ರೂಪಾಯಿ ಸಂಬಳ. ಇಂಥ ಹಲವಾರು ಇನ್‌ಸ್ಟೆನ್ಸಸ್ ಇವೆ. ನೀವೊಬ್ಬರೇ ಇದನ್ನು ಮಾಡಿಲ್ಲ, ಇದರಲ್ಲಿ ಎಲ್ಲ ಸೇರಿದ್ದಾರೆ. ಇದು ಮೊದಲಿನಿಂದ ನಡೆದು

ಕೊಂಡು ಬಂದಿದೆ. ದಯಮಾಡಿ ಇಂಥದಕ್ಕೆಲ್ಲಾ ಅಂತಿಮ ಇತಿಶ್ರೀ ಹಾಡಬೇಕು. ನಾವು ಶಾಸಕರಾಗಿ ಇದನ್ನೆಲ್ಲಾ ನೋಡುತ್ತಾ ಸುಮ್ಮನೆ ಕುಳಿತಿದ್ದರೆ ನಾವೂ ಆ ಪಾಪಕ್ಕೆ ಪಾಲುದಾರರಾಗಬೇಕಾಗುತ್ತದೆ. 215 ಜನರಲ್ಲಿ 215/1 ಭಾಗದ ಪಾಪದ ಹೊರೆಯನ್ನು ನಾನೂ ಹೊರಬೇಕಾಗುತ್ತದೆ ಮಾನ್ಯ ಅಧ್ಯಕ್ಷಿಣಿಯವರೇ, ನಾನು ಕೆಲವು ವಿಷಯಗಳನ್ನು ಏನು ಪ್ರಸ್ತಾಪ ಮಾಡಿದ್ದೇನೆ ಇದನ್ನು ಸರ್ಕಾರ ತೀವ್ರವಾಗಿ ಪರಿಶೀಲಿಸಬೇಕು ಎಂದು ಹೇಳುವುದಕ್ಕೆ ಇಷ್ಟಪಡುತ್ತೇನೆ. ಇನ್ನೊಂದು ವಿಷಯ ಚುನಾವಣೆಯಲ್ಲಿ ತಮ್ಮನ್ನು ಸೋಲಿಸಬೇಕು ಎಂದು ನಮಗೆ ಹಠ ಇತ್ತು ನಿಜ. ಚುನಾವಣಾ ಹೋರಾಟ ಕಣದಲ್ಲಿ ಇವೆಲ್ಲಾ ಇರುತ್ತವೆ. ಆದರೆ ತಾವು(ಕಾಂಗ್ರೆಸ್‌ನವರು)ಮತದಾರರನ್ನು ಒಲಿಸಿಕೊಳ್ಳಲು ಮಂಡ್ಯ ಸಕ್ಕರೆ ಕಾರ್ಖಾನೆ ಕಲ್ಯಾಣ ನಿಧಿಯಿಂದ 18 ಲಕ್ಷ ರೂಪಾಯಿಗಳನ್ನು ಅಪವ್ಯಯ ಮಾಡಿದ್ದೀರಿ. ಆ ಬಗ್ಗೆ ದೂರು ಬಂದಾಗ ತಾವು ಏನು ಮಾಡಿದ್ದೀರಿ ?

SRI D. DEVARAJ URS.—So far as that is concerned Sri Shankaregowda has written me a letter. Till then I did not notice it. After I got the information I have asked a Small Committee and the Commissioner to go into the details of these allegations.

ಶ್ರೀ ಎಚ್. ಡಿ. ದೇವೇಗೌಡ.— 18 ಲಕ್ಷ ರೂಪಾಯಿ ಫೋರ್ಜ್ ಮಾಡಿ ಬೇನಾಮಿ ಜನಗಳಿಗೆ ಜಾಗ ಕೊಡುವ ಮುಖಾಂತರ ಚುನಾವಣೆ ಸಂದರ್ಭದಲ್ಲಿ ಜನತೆಯ ಮತಗಳಿಸತಕ್ಕ ಪ್ರಯತ್ನವನ್ನು ಮಾಡಿದ್ದೀರಿ. ಮಾನ್ಯ ಕೃಷ್ಣಪ್ಪನವರು ಈ ಮಾತಗಳನ್ನು ಆಲಿಸುತ್ತಿದ್ದಾರೋ ಇಲ್ಲವೋ ಗೊತ್ತಿಲ್ಲ.

ಶ್ರೀ ಎಚ್. ಟಿ. ಕೃಷ್ಣಪ್ಪ.— ಈ ವಿಚಾರವನ್ನು ಮಾನ್ಯ ಸದಸ್ಯರಾದ ಕೋಣಂದೂರು ಲಿಂಗಪ್ಪನವರು ಎತ್ತಿದಾಗಲೇ ಹೇಳಿದ್ದೇನೆ. ನಾಗಮಂಗಲ ತಾಲ್ಲೂಕಿನ ಮಟ್ಟಿಗೆ ನೀವು ಮಾಡತಕ್ಕ ಅಪವಾದನೆ ಸುಳ್ಳು ಎಂದು ಹೇಳಿ ಅಪಾದನೆಯನ್ನು ನಿರಾಕರಿಸಿದೆ. ಬೇರೆ ತಾಲ್ಲೂಕುಗಳ ವಿಷಯ ಹೇಗೋ ನನಗೆ ಗೊತ್ತಿಲ್ಲ. ನಮ್ಮ ತಾಲ್ಲೂಕಿನಲ್ಲಿ ಹಣ ಹಂಚಿಕೆ ಆಗಿಲ್ಲ. ಯಾರೂ ಹಣ ಕೊಟ್ಟಿಲ್ಲ. ಆದ್ದರಿಂದ ತಾವು ಎಲ್ಲಾ ಕಡೆ ಚುನಾವಣೆ ಉದ್ದೇಶದಿಂದ ಆ ರೀತಿ ಆಗಿದೆ ಎಂದು ಏನು ಅಭಿಮತ ಇಟ್ಟುಕೊಂಡಿದ್ದೀರಿ, ಅದು ಸಾಧುವಾದುದಲ್ಲ.

ಶ್ರೀ ಎಚ್. ಡಿ, ದೇವೇಗೌಡ — ಆ ಉದ್ದೇಶದಿಂದಲೇ ಆ ರೀತಿ ಆಗಿದೆ ಎಂದು ನಾನು ಅಭಿಮತ ಇಟ್ಟುಕೊಂಡಿದ್ದೇನೆ. ಚುನಾವಣೆ ಸಂದರ್ಭದಲ್ಲಿ ಹಂಚುವುದಕ್ಕೆ ಏನು ಕಾರಣ? ಕಬ್ಬು ಬೆಳೆಯುವವರ ಕಲ್ಯಾಣಕ್ಕಾಗಿ ಚುನಾವಣೆಗೆ ಮುಂಚೆ ಹಂಚಿದ್ದರೆ ಯೋಗ್ಯ ನಿರ್ಣಯ ಕೈಗೊಂಡಿದ್ದಾರೆ ಎಂದು ಹೇಳುತ್ತಿದ್ದೆ. ಆದರೆ ಚುನಾವಣೆ ಮೂರು ದಿನ ಇದೆ ಎನ್ನುವಾಗ ಆ ರೀತಿ ಮಾಡಿರುವುದರಿಂದ ನನ್ನ ಅಭಿಮತ ಸರಿಯಾಗಿದೆಯೆಂದು ಹೇಳುತ್ತೇನೆ. ನಾನು ನಾಗಮಂಗಲದಲ್ಲಿ ಎಂದು ಹೇಳಲಿಲ್ಲ, ಮಂಡ್ಯ ಜಿಲ್ಲೆಯಲ್ಲಿ ಎಂದು ಹೇಳಿದ್ದೇನೆ. ಕೆಲವು ಜಾಗಗಳನ್ನು ಹೆಸರು ಊರು ಏನೂ ಇಲ್ಲದೆ ಬರೆದಿದ್ದಾರೆ. ವಿಚಾರಣೆ ನಡೆದು ಅಪಾದನೆ ದೃಢೀಕರಿಸಲ್ಪಟ್ಟರೆ ಸಂಬಂಧಪಟ್ಟವರ ಮೇಲೆ ಪ್ರಾಸಿಕ್ಯೂಟ್ ಮಾಡಬೇಕಾಗುತ್ತದೆ. ಇದರ ಬಗ್ಗೆ ವಿಳಂಬ ಮಾಡಬಾರದು.

SRI D. DEVARAJ URS.—I did not know it at that time. Immediately it came to my notice I asked the officers to go into this question I am going to get a report shortly. If the money is misused action will have to be taken, and Government cannot keep quiet on such issues.

ಶ್ರೀ ಎಚ್. ಡಿ. ದೇವೇಗೌಡ — ಖಂಡಸಾರಿ ಷುಗರ್ ಫ್ಯಾಕ್ಟರಿಗಳಿಗೆ ಲೈಸೆನ್ಸ್ ಕೊಡುವಾಗ ದಳ್ಳಾಳಿ ಕೆಲಸಕ್ಕೆ ಕೈ ಹಾಕಿದ್ದಾರೆ ಎಂದು ಹೇಳಬೇಕಾಗಿದೆ. ಯಾರು ಯಾರು ಆ ಕೆಲಸಕ್ಕೆ ಕೈ ಹಾಕಿದ್ದಾರೋ ಬಿಟ್ಟಿದ್ದಾರೋ ಗೊತ್ತಿಲ್ಲ, ಅಂತೂ ಇದು ನಡೆದಿದೆ. ನಿಮ್ಮ ವರದಿಯಲ್ಲಿ ಈ ರೀತಿ ಹೇಳಿದ್ದೀರಿ.

> " It is also decided to prevent the operation of unauthorised crushers and not to issue any licences to new units in the High Power Committee meeting held on 7th October 1976. "

ಇದಾದಮೇಲೆ ಎಷ್ಟು ಲೈಸೆನ್ಸ್ ಕೊಟ್ಟಿದ್ದಾರೆ ? ಇದಕ್ಕೆ ಯಾರು ಕಾರಣ ? ಯಾತಕ್ಕೆ ಕೊಟ್ಟರು? ಲೈಸೆನ್ಸ್ ಕೊಡುವುದು ಯಾತಕ್ಕೆ, ಮತ್ತೆ ಸಸ್ಪೆಂಡ್ ಮಾಡುವುದು ಯಾತಕ್ಕೆ ? ಆ ಮೇಲೆ ಮತ್ತೆ ಅದನ್ನು ರಿವೋಕ್ ಮಾಡುವುದು ಇದೆಲ್ಲಾ ಸರ್ಕಾರಕ್ಕೆ ಗೌರವ ತರುವಂಥದ್ದಲ್ಲ.

ಶ್ರೀ ಡಿ. ದೇವರಾಜ ಅರಸ್.— ಕ್ರಷಿಂಗ್‌ಗೆ Once in a way, ಕೊಡುತ್ತಿದ್ದಾರೆ.

ಶ್ರೀ ಎಚ್. ಡಿ. ದೇವೇಗೌಡ.— ಎಲ್ಲಿ ರಿಸರ್ವ್ಡ್ ಏರಿಯಾ ಇದೆ ಅಲ್ಲಿ ಕೊಡುತ್ತಿದ್ದಾರೆ, ಅನ್‌ರಿಸರ್ವ್ಡ್ ಏರಿಯಾದಲ್ಲಿ ಕೊಡುವುದು ಮತ್ತು ಅದನ್ನು ಸಸ್ಪೆಂಡ್ ಮಾಡುವುದು ಇದೆಲ್ಲಾ ಸರಿಯಲ್ಲ, ಇದಕ್ಕೆಲ್ಲಾ ಅವಕಾಶ ಕೊಡಬಾರದು. ಒಂದು ಸಾರಿ ಸರ್ಕಾರದ ಮಟ್ಟದಲ್ಲಿ ಪಾಲಿಸಿ ಡಿಸಿಷನ್ ತೆಗೆದುಕೊಂಡ ಮೇಲೆ ಅದರ ವ್ಯಾಪ್ತಿಯಿಂದ ಹೊರಗೆ ಹೋಗಬಾರದು. ಆ ರೀತಿ ಮಾಡುವುದು ಗೌರವ ತರುವಂಥ ವಿಷಯವಲ್ಲ ಎಂದು ಹೇಳುವುದಕ್ಕೆ ಇಚ್ಛೆಪಡುತ್ತೇನೆ.

1-30 P. M.

ಮಾನ್ಯ ಮುಖ್ಯ ಮಂತ್ರಿಗಳಿಗೆ ನಾನು ಈ ಸಂದರ್ಭದಲ್ಲಿ ಒಂದು ಸಲಹೆಯನ್ನು ಕೊಡುವುದಕ್ಕೆ ಇಷ್ಟಪಡುತ್ತೇನೆ. ಷುಗರ್ ಫ್ಯಾಕ್ಟರಿಗಳನ್ನು ಮಾಡುವಾಗ ತೀವ್ರತೆ ಕಾತುರತೆಗಿಂತಲು ಮುಖ್ಯವಾಗಿ ಕೋ-ಆರ್ಡಿನೇಟೆಡ್ ಪ್ಲಾನಿಂಗ್ ಇರಬೇಕು. ಕೋ-ಆರ್ಡಿನೇಟೆಡ್ ಪ್ಲಾನಿಂಗ್ ಇಲ್ಲದಿದ್ದರೆ ನಾಳೆ ದಿವಸ ಇವೆಲ್ಲ ಸ್ಟಾರ್ಟ್ ಆಗುವ ಸ್ಟೇಜಿಗೆ ಬಂದಾಗ ಬಹಳ ಕಷ್ಟವಾಗುತ್ತದೆ. ಎಸ್. ಸಿ. ಡಿ. ಸಿ. ಯಿಂದ ಹಣ ದೊರೆಯುತ್ತದೆಂದು ಊರೂರಿಗೆಲ್ಲ ರೈಸ್ ಮಿಲ್ಲುಗಳನ್ನು ಕೊಡಲಾಯಿತು ಹೀಗೆ ಕೊಟ್ಟಂತಹ ಕೆಲವು ರೈಸ್ ಮಿಲ್ಲುಗಳಲ್ಲಿ ಕತ್ತೆಗಳು ಮಲಗುತ್ತಿದ್ದವು. ಏಕೆ ಈ ಮಾತನ್ನು ಹೇಳುತ್ತಿದ್ದೇನೆಂದರೆ ನಮ್ಮ ಜಿಲ್ಲೆಯಲ್ಲಿ ಷುಗರ್ ಫ್ಯಾಕ್ಟರಿಯನ್ನು ಮಾಡಬೇಕೆಂದು ನಿರ್ಣಯ ಮಾಡಿದ್ದಾರೆ. ಹೇಮಾವತಿ ಪ್ರಾಜೆಕ್ಟಿನ ಹಿಂಭಾಗದಲ್ಲಿ 15 ಸಾವಿರ ಎಕರೆ ಜಾಗದಲ್ಲಿ ಕಬ್ಬು ಬೆಳೆಯಬಹುದೆಂದು ತಜ್ಞರು ಅಭಿಪ್ರಾಯ ಪಟ್ಟಿದ್ದಾರೆ. ಆದರೆ ಬಾವಿ ಮಾಡಿಕೊಂಡು ಅರ್ಧ ಮುಕ್ಕಾಲು ಎಕರೆ ಜಾಗದಲ್ಲಿ ಕಬ್ಬನ್ನು ಬೆಳೆದು, ಫ್ಯಾಕ್ಟರಿಗೆ ಒದಗಿಸಲು ಸಾಧ್ಯವಾಗುವುದಿಲ್ಲ. ಆದ್ದರಿಂದ ಷುಗರ್ ಫ್ಯಾಕ್ಟರಿ ಮಾಡತಕ್ಕ ಕಾಲದಲ್ಲಿ ಕೋ-ಆರ್ಡಿನೇಟೆಡ್ ಪ್ಲಾನಿಂಗ್ ಇರಬೇಕೆಂದು ಹೇಳಬಯಸುತ್ತೇನೆ. ಕೈಗಾರಿಕಾ ಕ್ಷೇತ್ರದಲ್ಲಾಗಲಿ, ಸಹಕಾರಿ ಕ್ಷೇತ್ರದಲ್ಲಾಗಲಿ ಕೋ-ಆರ್ಡಿನೇಟೆಡ್ ಪ್ಲಾನಿಂಗ್ ಇಲ್ಲದೆ ಹೋದರೆ ಯಾವ ಆಸಕ್ತಿಯಿಂದ ಷುಗರ್ ಫ್ಯಾಕ್ಟರಿಗಳನ್ನು ಮಾಡುತ್ತಿದ್ದರೋ ಅವುಗಳ ಇತಿಹಾಸ ಬಹಳಕೆಟ್ಟದ್ದಾಗುತ್ತದೆ ಎನ್ನತಕ್ಕ ಮಾತನ್ನು ಹೇಳಬಯಸುತ್ತೇನೆ ಇವತ್ತಿನ ದಿವಸ ಈ ವಿಷಯದಲ್ಲಿ ಮಾನ್ಯ ಮುಖ್ಯ ಮಂತ್ರಿಗಳು ಬಹುಶಃ ಸ್ವಲ್ಪ ಮುಂಜಾಗ್ರತೆವಹಿಸುತ್ತಾರೆಂದು ನಾನು ತಿಳಿದುಕೊಂಡಿದ್ದೇನೆ.

ಇನ್ನು ಗವರ್ನ್‌ಮೆಂಟ್ ಸಿಲ್ಕ್ ಫಿಲೇಚರ್ಸ್ ಬಗ್ಗೆ ಮಾನ್ಯ ಪುಟ್ಟಸ್ವಾಮಿಯವರು ಪ್ರಸ್ತಾಪ ಮಾಡಿರುವುದರಿಂದ ನಾನು ಆ ಬಗ್ಗೆ ಪುನರಾವರ್ತನೆ ಮಾಡುವುದಿಲ್ಲ. ಆದರೆ ಒಂದು ವಿಷಯವನ್ನು ಮಾತ್ರ ಹೇಳಬಯಸುತ್ತೇನೆ. ಸೆರಿಕಲ್ಚರಿಗೆ ಸಂಬಂಧಪಟ್ಟ ಮಂತ್ರಿಗಳು ಉತ್ತಮ ರೀತಿಯಲ್ಲಿ ಮತ್ತು ಪ್ರಾಮಾಣಿಕವಾಗಿ ಕೆಲಸ ಮಾಡುತ್ತಾರೆಂದು ತಿಳಿದುಕೊಂಡಿದ್ದೇನೆ, ಸಂತೋಷ. ಮೊನ್ನೆ ಅವರ 2—3 ಸ್ಟೇಟ್‌ಮೆಂಟ್‌ಗಳನ್ನು ನೋಡಿದೆ. ಕಾರ್ಪೊರೇಷನ್ನಿನ ವ್ಯವಹಾರದಲ್ಲಿ ಸತ್ಯಾಂಶ ಕಂಡುಬಂದಿದೆ ಎಂದು ಬಗ್ಗೆ ವಿಚಾರಣೆ ಆಗಬೇಕೆಂದು ಹೇಳಿದ್ದಾರೆ. ಅವರಲ್ಲಿ ತಪ್ಪಿತಸ್ಥರಿಗೆ ಶಿಕ್ಷೆ

ವಿದಿಸುವ ಬಗ್ಗೆ ಎಷ್ಟು ಕಾತುರತೆ ಇದೆ ಎಂಬುದನ್ನು ಮಾನ್ಯ ಮುಖ್ಯ ಮಂತ್ರಿಗಳು ನೋಡಿ ಅವರು ಸಹ ಸಹಕರಿಸುತ್ತಿದ್ದಾರೆಂದು ತಿಳಿದುಕೊಂಡಿದ್ದೇನೆ. ಈ ಒಂದು ಇಲಾಖೆಗೆ ಸಂಬಂಧಪಟ್ಟ ಸ್ಪನ್ ಸಿಲ್ಕ್ ಮಿಲ್ಸ್‌ನಲ್ಲಿ ಇಂಟರಿಂ ರಿಲೀಫ್ ಕೊಡತಕ್ಕದ್ದು ವಿಳಂಬವಾಗಿದೆ ಎಂದು ಕೇಳಿದ್ದೇನೆ.

ಶ್ರೀ ಕೆ. ಶ್ರೀರಾಮುಲು,— ಆ ರೀತಿಯಾಗಿರುವುದು 10 ಕಾರ್ಖಾನೆಗಳಿಗೆ ಮಾತ್ರ. 21ಕ್ಕೂ ಇಂಟರಿಂ ರಿಲೀಫ್ ಕೊಡಬೇಕೆಂದು ತೀರ್ಮಾನಿಸಿ 7ಕ್ಕೆ ಈಗಾಗಲೇ ಕೊಟ್ಟಿದ್ದೇವೆ. ಇಲ್ಲಿ ಮುಖ್ಯವಾಗಿ ಕೊಡುವುದಕ್ಕೆ ಕಾರಣವೇನೆಂದರೆ ತಮ್ಮ ಉತ್ಪಾದನೆಯಲ್ಲಿ 500 ಗ್ರಾಂನಿಂದ 750 ಗ್ರಾಂಗೆ ಇನ್‌ಕ್ರೀಸ್ ಮಾಡಿದ್ದಾರೆ. ಇಲ್ಲಿ ಕೆಲಸಗಾರರ ಸತತ ದುಡಿಮೆ ಇರುವುದರಿಂದ ಪ್ರೊಡಕ್ಷನ್ ಬರುವುದಕ್ಕೂ ಸಾಧ್ಯತೆ ಇದೆ. 8 ಮೀಟರ್ ಬರುತ್ತಿದ್ದದ್ದು 16 ಮೀಟರ್ ಆಗುವುದಕ್ಕೆ ಅವಕಾಶ ಇದೆ. ಅದಕ್ಕೆ ತಕ್ಕ ಕೂಲಿಯನ್ನು ಯೋಚನೆ ಮಾಡಿ ಕೊಡಿ ಎಂದು ಸಂಬಂಧಪಟ್ಟ ಅಧಿಕಾರಿಗಳಿಗೆ ಹೇಳಿದ್ದೇನೆ.

ಶ್ರೀ ಹೆಚ್. ಡಿ. ದೇವೇಗೌಡ.— ಎಲ್ಲ ಕಡೆ ಬೇರೆ ಬೇರೆ ಸರ್ಕಾರಿ ಕ್ಷೇತ್ರಗಳಲ್ಲಿ ಕೆಲಸ ಮಾಡತಕ್ಕ ಸಂಸ್ಥೆಗಳಲ್ಲಿ ಒಂದು ನಿಬಂಧನೆ ಹಾಕಬೇಕೆನ್ನತಕ್ಕದ್ದು ನನ್ನ ಮನಸ್ಸಿನಲ್ಲಿ ಇದೆ. ಆದರೆ ಅದನ್ನು ಸರ್ಕಾರದವರು ಹಾಕಿಲ್ಲ. ಚನ್ನಪಟ್ಟಣದಲ್ಲಿರುವ ಸೆರಿಕಲ್ಚರ್ ಸ್ಪನ್ ಇಂಡಸ್ಟ್ರೀಸ್‌ಗಳಲ್ಲಿ ನಿಬಂಧನೆ ಹಾಕಬೇಕೆಂದು ಯೋಚಿಸುತ್ತಿದ್ದಾರೆ. ಆದರೆ ಇದನ್ನು ಬೇರೆ ಕೈಗಾರಿಕೆಗಳಲ್ಲಿ ಎನ್‌ಫೋರ್ಸ್‌ಮೆಂಟ್ ಮಾಡಿಲ್ಲ.

ಶ್ರೀ ಕೆ. ಶ್ರೀರಾಮುಲು.— ಫ್ಲೋರ್‌ನಲ್ಲಿ ಆರ್ಡರ್ ಮಾಡಿದ್ದೇನೆ. ಯಾವ ಕಾರ್ಖಾನೆಗಳಿಗೆ ನಷ್ಟ ಬರುತ್ತದೆ ಅಂಥದಕ್ಕೆ ಸರ್ಕಾರ ಮಾಮೂಲಾಗಿ ಹಣವನ್ನು ಕೊಡುತ್ತಾ ಹೋದರೆ ಕೈಗಾರಿಕೆಗಳು ಬೆಳೆಯುವುದಕ್ಕೆ ಅತಂಕ ಉಂಟಾಗುತ್ತದೆ. ಅದ್ದರಿಂದ ನಿಜವಾಗಿ ಏಕೆ ಪ್ರೊಡಕ್ಷನ್ ಬರುವುದಿಲ್ಲ ಎಂಬದನ್ನು ತಿಳಿದುಕೊಂಡು ವ್ಯವಹಾರ ಮಾಡಬೇಕೆಂದು ಹೇಳಿದ್ದೇನೆ.

ಶ್ರೀ ಹೆಚ್. ಡಿ. ದೇವೇಗೌಡ.— ನಷ್ಟವಾಗುವುದಕ್ಕೆ ಕೊಡಿ ಎಂದು ಹೇಳುವುದಿಲ್ಲ. 1975—76ರಲ್ಲಿ ಒಂದು ಸಂಸ್ಥೆಯಲ್ಲಿ 26 ಲಕ್ಷ ರೂಪಾಯಿ ಲಾಭವು ಮತ್ತು 76—77ರಲ್ಲಿ ಅದೇ ಸಂಸ್ಥೆಯಲ್ಲಿ 31 ಲಕ್ಷ ರೂಪಾಯಿ ಲಾಭ ಬಂದಿದೆ. ಅದ್ದರಿಂದ ಡೈರೆಕ್ಟರ್ ಆಫ್ ಸೆರಿಕಲ್ಚರ್‌ರವರು ಬಹಳ ದಕ್ಷತೆಯಿಂದ ಕೆಲಸ ಮಾಡುತ್ತಾರೆಂದು ತಿಳಿದುಕೊಂಡಿದ್ದೇನೆ. ಅವರು ಇವುಗಳನ್ನು ಸಾಕಷ್ಟು ಇಂಪ್ರೂವ್ ಮಾಡುವುದಕ್ಕೆ ಮತ್ತು ನಷ್ಟವನ್ನು ಕಡಿಮೆ ಮಾಡುವುದಕ್ಕೆ ಬಹಳಷ್ಟು ಯಶಸ್ವಿಯಾಗಿ ಕೆಲಸ ಮಾಡಿದ್ದಾರೆಂದು ತಿಳಿದುಕೊಂಡಿದ್ದೇನೆ. ಇಂಟರಿಂ ರಿಲೀಫ್ ಕೊಡುವ ಬಗ್ಗೆ ಅತಿ ಶೀಘ್ರವಾಗಿ ನಿರ್ಣಯ ಮಾಡಬೇಕೆಂದು ತಮ್ಮಲ್ಲಿ ಕೇಳಿಕೊಳ್ಳುತ್ತೇನೆ.

ಇನ್ನು ಕರ್ನಾಟಕ ಸ್ಮಾಲ್‌ಸ್ಕೇಲ್ ಇಂಡಸ್ಟ್ರೀಸ್ ಕಾರ್ಪೊರೇಷನ್ ಬಗೆ ಮಾನ್ಯ ಪುಟ್ಟಸ್ವಾಮಿಯವರು ಮಾತನಾಡುತ್ತಾ ಬಹಳ ನಷ್ಟವಾಗಿದೆ ಎಂದು ಹೇಳಿದರು. ಆದಕ್ಕೆ ಹಲವಾರು ಕಾರಣಗಳಿವೆ. ಆ ಬಗ್ಗೆ ವ್ಯವಸ್ಥಿತ ರೀತಿಯಲ್ಲಿ ಹೆಚ್ಚು ದಕ್ಷತೆಯಿಂದ ಕೆಲಸ ಮಾಡುವುದಕ್ಕೆ ಏನೇನು ಕ್ರಮಗಳನ್ನು ತೆಗೆದುಕೊಳ್ಳಬೇಕೋ ಅದನ್ನು ತಗೆದುಕೊಳ್ಳಬೇಕು. ಅನ್‌ವಾಂಟೆಡ್ ಮೆಟೀರಿಯಲ್ಸ್‌ನ್ನು ಪರ್ಚೇಸ್ ಮಾಡುತ್ತಾರೆಂದು ಕೇಳಿದ್ದೇನೆ. ರಾ- ಮೆಟೀರಿಯಲ್‌ಗಳ ಅಕ್ರಮ ವ್ಯವಹಾರ ನಡೆಯುತ್ತಿದೆ, ಅದರ ಬಗ್ಗೆ ಹೆಚ್ಚು ನಿಗಾ ವಹಿಸಬೇಕೆಂದು ತಿಳಿಸಲಿಚ್ಛಿಸುತ್ತೇನೆ ಇಂಡಸ್ಟ್ರಿಯಲ್ ಎಸ್ಟೇಟ್‌ಗಳಲ್ಲಿರುವ ಒಬಿರಾಯನ ಕಾಲದ ಡಿಸೈನ್‌ಗಳನ್ನು ತೆಗೆಯಬೇಕಾಗುತ್ತದೆ. ಇಂಡಸ್ಟ್ರಿಯಲ್ ಪ್ಲಾಟ್ಸ್ ಎಂದು ಮಾಡುತ್ತಿದ್ದೀರಿ, ಷೆಡ್‌ಗಳನ್ನು ಕಟ್ಟುತ್ತಿಲ್ಲ. ಈಗ ಅಲ್ಲಿಯು ಸಹ ಸಾಕಷ್ಟು ಅವ್ಯವಹಾರಗಳು ಇವೆ ಎಂದು ಕೇಳಿದ್ದೇನೆ ಅಕ್ವಿಸಿಷನ್ ಮಾಡತಕ್ಕುದು ಏನು ಇದೆ ಅದರಲ್ಲು ಸಹ ಸಾಕಷ್ಟು ಅವ್ಯವಹಾರಗಳು ಇವೆ ಆ ಎಲ್ಲ ವಿವರಣೆಗಳನ್ನು ಕೊಟ್ಟು ಚರ್ಚೆ ಮಾಡುವುದಕ್ಕೆ ಈಗ ಕಾಲಾವಕಾಶ ಇಲ್ಲ. ಅದ್ದರಿಂದ, ಮಾನ್ಯ ಮುಖ್ಯಮಂತ್ರಿಗಳು ಈ ಕಡೆ ಗಮನ ಹರಿಸಿ ಯಾವ ಯಾವ ಏರಿಯಾದಲ್ಲಿ ಯಾವ ರೀತಿ ಸಣ್ಣ ಕೈಗಾರಿಕೆಗಳ ಬೆಳೆವಣಿಗೆಯಾಗಬೇಕೆಂಬ ಬಗ್ಗೆ ಪ್ಲಾಟ್ಸ್ ಮಾಡುವ ಬಗ್ಗೆ ಮತ್ತು ಷೆಡ್ಸ್ ಕಟ್ಟುವ ಬಗ್ಗೆ ಪುನರ್ವ್ಯವಸ್ಥೆ ಮಾಡಬೇಕಾ

ಗುತ್ತದೆಂದು ಹೇಳಬಯಸುತ್ತೇನೆ, You must go on changing all these designs. ಕೆಲವು ಕಾಲಕ್ಕೆ ಕೆಲವು ಡಿಸೈನ್‌ಗಳು ಹಿಡಿಸುತ್ತವೆ, ಕೆಲವು ಹಿಡಿಸದೆ ಹೋಗಬಹುದು. ಆದ್ದರಿಂದ ಇವನ್ನು ಬದಲಾವಣೆ ಮಾಡಬೇಕೆಂದು ತಿಳಿಸಬಿಚ್ಚಿಸುತ್ತೇನೆ. ಈಗಾಗಲೇ ಈ ಒಂದು ಅಧಿವೇಶನ ಮುಗಿದು ಹೋಗಿದೆ. ಹಿಂದಿನ ಚುನಾವಣೆ ಪ್ರಕಾರ ಮಾರ್ಚಿಗೆ ಮುಗಿದು ಹೋಗಬೇಕಾಗಿತ್ತು, ಈಗ ನಾವು ಎಕ್ಸ್‌ಟೆನ್‌ಷನ್ ಪೀರಿಯಡ್‌ನಲ್ಲಿದ್ದೇವೆ. ಕೊನೆಯ ಕಾಲದಲ್ಲಿ ತಮ್ಮ ಕೈಗೆ ಈ ಇಂಡಿಸ್ಟ್ರೀಸ್ ಖಾತೆ ಬಂದಿದೆ. ನಾವು ಹೇಳಿದ್ದನ್ನೆಲ್ಲ ಇಂಪ್ಲಿಮೆಂಟ್ ಮಾಡುವುದಕ್ಕಾಗದಿದ್ದರೂ ಕೆಲವನ್ನಾದರು ಮಾಡುತ್ತೀರೆಂದು ನಂಬಿದ್ದೇನೆ ತಾವುಬರತಕ್ಕ ಸಂಕಷ್ಟಗಳನ್ನೆಲ್ಲ ಎದುರಿಸಿ ಇರುವಷ್ಟು ಕಾಲದಲ್ಲಿ ಈ ಕಾರ್ಯವನ್ನು ಮಾಡುತ್ತೀರೆಂದು ಹೇಳುತ್ತಾ, ಇದುವರೆಗೆ ಕೆಲವು ವಿಷಯಗಳನ್ನು ಪ್ರಸ್ತಾಪ ಮಾಡುವುದಕ್ಕೆ ಅವಕಾಶ ಕೊಟ್ಟ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

MADAM SPEAKER.— Now, the House stands adjourned to meet on Monday at 1-00 pm.

The House adjourned at Forty minutes past one of the Clock to meet again at One of the Clock on Monday the 4th July 1977,